Editor: NITYANANDASWAMI Publisher: U. BASAVARAJA RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–16 Volume: 16 | ಸಂಚಿಕೆ–52 Issue:52 | ಡಿಸೆಂಬರ್ 19–25, 2022 December 19-25, 2022 | ಪುಟ 16 Pages:16 | ರೂ. 10/– Price: 10/-



ಅಂಜನಾದ್ರಿ

ಸಂಘ ಪರಿವಾರಿಗಳ ಕ್ಷುದಾಗ್ನಿಯಲ್ಲಿ ಹನುಮಂತ

ಬಿಬಿಎಂಪಿ ಚುನಾವಣೆ: ಹಾವು ಏಣಿ ಆಟ

ಸಹಕಾರಿ ಸಂಘಗಳನ್ನು ವಶಪಡಿಸಿಕೊಳ್ಳುವ ಉದ್ದೇಶದ ಮಸೂದೆ

ಸುನಕ್‌ಗೆ ಕಾರ್ಮಿಕರ ಸರಣಿ ಮುಷ್ಕರಗಳ ಸವಾಲು



ಒಳ ಮೀಸಲಾತಿ


ನ್ಯಾಯಕ್ಕಾಗಿ ಹೋರಾಟ

ಸುಭಾಶ್ ಚಂದ್ರ ಬೋಸ್ ಬಗ್ಗೆ ಹಿಂದುತ್ವ ಬ್ರಿಗೇಡಿನ ಮೆಚ್ಚಿಕೆ ಎಂಬುದೂ ಹುಸಿ

'ವೀರ' ಸಾವರ್ಕರ್– ಏಳು ಮಿಥ್ಯೆಗಳು

ಮಿಥ್ಯೆಗಳನ್ನು ಸತ್ಯಸಂಗತಿಗಳಿಂದ ಬೇರ್ಪಡಿಸುವ ಒಂದು ಪ್ರಾಮಾಣಿಕ ಆಕಾಂಕ್ಷೆಯಿಂದ ರಚಿಸಿರುವ ಡಾ.ಶಮ್ಸುಲ್ ಇಸ್ಲಾಮ್ ರವರ 'ಸಾವರ್ಕರ್ ಅನ್‌ಮಾಸ್ಕ್ಡ್' ಸಾವರ್ಕರ್‌ರವರನ್ನು ಕುರಿತ ಏಳು ಮಿಥ್ಯೆಗಳನ್ನು ದಾಖಲೆಗಳ ಬೆಳಕಿನಲ್ಲಿ ಪರಿಶೀಲಿಸುತ್ತದೆ.

ಭಾಗ–೮



ಡಾ.ಶಮ್ಸುಲ್ ಇಸ್ಲಾಂ
ಅನು: ಟಿ.ಸುರೇಂದ್ರರಾವ್

ಬ್ರಿಟಿಷರನ್ನು ಭಾರತದಿಂದ ಹೊರಗಟ್ಟಲು ಮಿಲಿಟರಿ ಅಭಿಯಾನ ಸಂಘಟಿಸುವ ಪ್ರಯತ್ನ ಮಾಡಿದ ನೇತಾಜಿ ಸುಭಾಶ್ ಚಂದ್ರ ಬೋಸ್ ಬಗ್ಗೆ ತಮಗೆ ಭಾರಿ ಮೆಚ್ಚುಗೆ ಇದೆ ಎಂಬ ತೋರಿಕೆಯ ಮಾತನ್ನು ಈಗಲೂ ಹಿಂದುತ್ವ ಬ್ರಿಗೇಡ್ ಮುಂದುವರಿಸಿದೆ. ಆದರೆ ಸಾವರ್ಕರ್ ನೇತೃತ್ವದ ಹಿಂದೂ ಮಹಾಸಭಾ ನೇತಾಜಿಯವರಿಗೆ ವಿಶ್ವಾಸದ್ರೋಹ ಎಸಗಿದ ಸಂಗತಿ ಬಹಳ ಜನರಿಗೆ ಗೊತ್ತಿಲ್ಲ. ಎರಡನೇ ವಿಶ್ವ ಮಹಾ ಯುದ್ಧದ ಸಮಯದಲ್ಲಿ ನೇತಾಜಿಯವರು ದೇಶದ ವಿಮೋಚನೆಗಾಗಿ ವಿದೇಶಿ ಬೆಂಬಲ ಪಡೆಯುವ ಪ್ರಯತ್ನ ಮಾಡುತ್ತಿದ್ದಾಗ ಮತ್ತು ದೇಶದ ಈಶಾನ್ಯ ದಿಕ್ಕಿನಲ್ಲಿ ಮಿಲಿಟರಿ ದಾಳಿ ನಡೆಸಲು ಯತ್ನಿಸುತ್ತಿದ್ದಾಗ, ಆ ಪ್ರಯತ್ನದ ಭಾಗವಾಗಿ 'ಆಜಾದ್ ಹಿಂದ್ ಫೌಜ್' (ಇಂಡಿಯನ್ ನ್ಯಾಷನಲ್ ಆರ್ಮಿ) ರಚನೆ ಮಾಡಿದ ಸಂದರ್ಭದಲ್ಲಿ ಸಾವರ್ಕರ್ ಬ್ರಿಟಿಷ್ ಧಣಿಗಳಿಗೆ ಸಂಪೂರ್ಣ ಮಿಲಿಟರಿ ಸಹಕಾರ ನೀಡುತ್ತಾರೆ. 1941 ರಲ್ಲಿ ಭಾಗಲ್ಪುರದಲ್ಲಿ ಹಿಂದೂ ಮಹಾಸಭಾದ 23 ನೇ ಅಧಿವೇಶನವನ್ನು ಉದ್ದೇಶಿಸಿ ಮಾತನಾಡುತ್ತಾ ಸಾವರ್ಕರ್ ಹೇಳುತ್ತಾರೆ:

ಎರಡನೆಯ ಅತ್ಯಂತ ಪ್ರಮುಖವಾದ ಹಾಗೂ ತುರ್ತಾದ ವಿಷಯವೇನೆಂದರೆ ದೇಶಾದ್ಯಂತ ಇರುವ ಹಿಂದೂ ಸಂಘಟನಾವಾದಿಗಳು (ಹಿಂದೂ ಮಹಾಸಭಾದವರು) ತಮ್ಮೆಲ್ಲಾ ಶಕ್ತಿಯನ್ನು ಹಾಗೂ ಚಟುವಟಿಕೆಗಳನ್ನು ಹಿಂದೂಗಳನ್ನು ಮಿಲಿಟರೀಕರಣ ಮಾಡುವತ್ತ ವಿನಿಯೋಗಿಸಬೇಕು. ನಮ್ಮ ಕಡಲತಡಿಯನ್ನು ತಲುಪಿರುವ ಯುದ್ಧವು ನೇರವಾದ ಅಪಾಯವನ್ನು ಹಾಗೂ ಅವಕಾಶವನ್ನು ತಂದೊಡ್ಡಿದೆ, ಅವೆರಡೂ ಉಂಟುಮಾಡಿರುವ ಅಗತ್ಯದಿಂದಾಗಿ ಮಿಲಿಟರೀಕರಣದ ಚಳುವಳಿಯನ್ನು ತೀವ್ರಗೊಳಿಸಬೇಕಾಗಿದೆ ಮತ್ತು ಎಲ್ಲಾ ಪಟ್ಟಣಗಳು ಹಾಗೂ ಹಳ್ಳಿಗಳಲ್ಲಿರುವ ಹಿಂದೂ ಮಹಾಸಭಾದ ಪ್ರತಿಯೊಂದು ಘಟಕವೂ ಜನರನ್ನು ಹುರಿದುಂಬಿಸಿ ಸೇನೆಗೆ, ನೌಕಾದಳಕ್ಕೆ, ವಾಯುದಳಕ್ಕೆ ಹಾಗೂ ಸಮರಶಸ್ತ್ರ ಕಾರ್ಖಾನೆಗಳಿಗೆ ಸೇರುವಂತೆ ಮಾಡುವ ಕೆಲಸದಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಳ್ಳಬೇಕು.

ಬ್ರಿಟಿಷರಿಗೆ ಸಹಾಯ ಮಾಡಲು ಸಾವರ್ಕರ್ ಯಾವ ಮಟ್ಟಕ್ಕೆ ಇಳಿದಿದ್ದರು ಎನ್ನುವುದು ಈ ಕೆಳಗಿನ ಶಬ್ದಗಳಲ್ಲಿ ಸ್ಪಷ್ಟವಾಗುತ್ತದೆ:

ಭಾರತದ ರಕ್ಷಣೆಗೆ ಸಂಬಂಧಪಟ್ಟಂತೆ ಹಿಂದುತ್ವ(ಹಿಂದೂಡಂ) ಯಾವುದೇ ಹಿಂಜರಿಕೆಯಿಲ್ಲದೇ ಭಾರತ ಸರ್ಕಾರದ ಸಮರ ಕಾರ್ಯಾಚರಣೆಗಳಲ್ಲಿ ಸಂವೇದನಾಶೀಲ ಸಹಕಾರದ ಉತ್ಸಾಹದೊಂದಿಗೆ ಜತೆಗೂಡಬೇಕು, ಅದು ಹಿಂದೂ ಹಿತಾಸಕ್ತಿಗಳಿಗೆ ನಿಷ್ಠೆ ಹೊಂದಿರುವ ಕಾರಣ ಭೂಸೇನೆ, ನೌಕಾದಳ ಹಾಗೂ ವಾಯುದಳಕ್ಕೆ ಎಷ್ಟು ಸಾಧ್ಯವೋ ಅಷ್ಟು ಜನರನ್ನು ಸೇರಿಸಬೇಕು ಮತ್ತು ಶಸ್ತ್ರಾಸ್ತ್ರ, ಮದ್ದುಗುಂಡು ಹಾಗೂ ಸಮರ ಶಸ್ತ್ರ ಕಾರ್ಖಾನೆಗಳಲ್ಲಿ ಪ್ರವೇಶ ಪಡೆಯಬೇಕು . . . ಪುನಃ ಈ ಯುದ್ಧಕ್ಕೆ ಜಪಾನಿನ ಪ್ರವೇಶವು ನಮ್ಮನ್ನು ನೇರವಾಗಿ ಅಪಾಯಕ್ಕೀಡುಮಾಡಿದೆ ಮತ್ತು ಬ್ರಿಟನ್ನಿನ ಶತ್ರುಗಳಿಂದ ತಕ್ಷಣದಲ್ಲೇ ದಾಳಿಯಾಗುವ ಸಾಧ್ಯತೆಯನ್ನು ಗಮನಿಸಬೇಕು. ಇದರ ಪರಿಣಾಮವಾಗಿ, ನಾವು ಇಷ್ಟಪಡುತ್ತೇವೋ ಬಿಡುತ್ತೇವೋ, ಯುದ್ಧದ ಹಾವಳಿಯಿಂದ ನಮ್ಮ ಮನೆಮಾರುಗಳನ್ನು ರಕ್ಷಿಸಿಕೊಳ್ಳಬೇಕಿದೆ, ಮತ್ತು ಭಾರತವನ್ನು ರಕ್ಷಿಸುವ ಸರ್ಕಾರದ ಸಮರ ಕಾರ್ಯಾಚರಣೆಗಳನ್ನು ತೀವ್ರಗೊಳಿಸುವ ಮೂಲಕ ಮಾತ್ರವೇ ಇದು ಸಾಧ್ಯವಾಗುತ್ತದೆ. ಆದ್ದರಿಂದ ಹಿಂದೂ ಮಹಾಸಭಾದವರು ಬಹಳ ಮುಖ್ಯವಾಗಿ ಬಂಗಾಳ ಹಾಗೂ ಅಸ್ಸಾಂ ಪ್ರಾಂತ್ಯಗಳಲ್ಲಿ ಒಂದು ಕ್ಷಣವೂ ವ್ಯರ್ಥವಾಗದಂತೆ ಮಿಲಿಟರಿಯ ಎಲ್ಲಾ ದಳಗಳಲ್ಲಿ ಎಷ್ಟು ಪರಿಣಾಮಕಾರಿಯಾಗಿ ಸಾಧ್ಯವೋ ಅಷ್ಟು ಪ್ರವೇಶ ಪಡೆಯಲು ಹಿಂದೂಗಳನ್ನು ಹುರಿದುಂಬಿಸಬೇಕು.

ಹಿಂದೂಗಳಿಗೆ ಕರೆ ನೀಡಿದ ಸಾವರ್ಕರ್ "ಮಿಲಿಯಾಂತರ ಹಿಂದೂ ಯೋಧರು ಬ್ರಿಟಿಷ್ ಭೂಸೇನೆ, ನೌಕಾದಳ ಹಾಗೂ ವಾಯುದಳಕ್ಕೆ ಪ್ರವಾಹದೋಪಾದಿಯಲ್ಲಿ ಹಿಂದೂ ಸಂಘಟನಾವಾದಿಗಳ ಹೃದಯದೊಂದಿಗೆ ಸೇರಬೇಕು" ಎಂದರು ಮತ್ತು ಈ ತಕ್ಷಣದ ಕಾರ್ಯಕ್ರಮಕ್ಕೆ ಬದ್ಧರಾಗಿದ್ದರೆ ಮತ್ತು ಹಿಂದೂ ಸಂಘಟನಾವಾದಿಗಳ ಆದರ್ಶದ ದೃಷ್ಟಿಕೋನದೊಂದಿಗೆ ಯುದ್ಧ ಸನ್ನಿವೇಶವನ್ನು ಸಾಧ್ಯವಾಗುವಷ್ಟು ಮಟ್ಟಿಗೆ ಪ್ರಯೋಜನ ಪಡೆದಿದ್ದಾದರೆ, ಹಿಂದೂ ಜನಾಂಗದ ಮಿಲಿಟರೀಕರಣಕ್ಕಾಗಿನ ಚಳುವಳಿಯ ಮೇಲೆ ಒತ್ತಾಯ ಮಾಡಿದರೆ, ಯುದ್ಧಾನಂತರ ಅದು ಆಂತರಿಕ ಹಿಂದೂ–ವಿರೋಧಿ ಅಂತರ್ಯುದ್ಧವಾಗಲಿ ಅಥವಾ ಸಾಂವಿಧಾನಿಕ ಬಿಕ್ಕಟ್ಟು ಅಥವಾ ಒಂದು ಸಶಸ್ತ್ರ ಕ್ರಾಂತಿಯಾಗಲಿ ಸಂಭವಿಸಿದರೆ ಅವುಗಳನ್ನು ಎದುರಿಸಲು, ನಮ್ಮ ಹಿಂದೂ ರಾಷ್ಟ್ರವು ಹೆಚ್ಚು ಬಲಶಾಲಿಯಾಗಿ, ಕ್ರೋಢೀಕರಣಗೊಂಡು ಮತ್ತು ಹೋಲಿಸಲು ಸಾಧ್ಯವೇ ಆಗದ ಹೆಚ್ಚು ಅನುಕೂಲಕರ ಸ್ಥಿತಿಯಲ್ಲಿ ಹೊರಹೊಮ್ಮಲೇಬೇಕಾಗುತ್ತದೆ,

ಎಂದು ಸಾವರ್ಕರ್ ಆಶ್ವಾಸನೆ ನೀಡಿದರು. ಭಾಗಲ್‌ಪುರದಲ್ಲಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸುವಾಗ ಸಾವರ್ಕರ್ ಮತ್ತೊಮ್ಮೆ 'ಬ್ರಿಟಿಷ್ ಸರ್ಕಾರದ ಯುದ್ಧ ಕಾರ್ಯಾಚರಣೆಗೆ ಭಾರತದ ಹಿಂದೂಗಳು ಸೇರಬೇಕು' ಎಂದು ಒತ್ತುಕೊಟ್ಟು ಹೇಳಿದರು. ಯಾವುದೇ ಮುಚ್ಚುಮರೆಯಿಲ್ಲದೇ ಅವರು ಹೇಳಿದರು:

ಪುನಃ, ಯುದ್ಧಾನಂತರ ದೇಶಗಳ ಪರಿಸ್ಥಿತಿ ಮತ್ತು ಸ್ಥಾನಮಾನ ಏನೇ ಆಗಿರಲಿ, ಇವತ್ತು ಪ್ರಸ್ತುತ ಸಂದರ್ಭದಲ್ಲಿ ಎಲ್ಲವನ್ನೂ ಒಟ್ಟಿಗೇ ಪರಿಗಣಿಸಿದಾಗ, ಭಾರತದ ರಕ್ಷಣೆಯ ವಿಚಾರದಲ್ಲಿ ಹಿಂದೂಗಳ ಹಿತಾಸಕ್ತಿಗೆ ವಿಶ್ವಾಸದ್ರೋಹದ ಬಲವಂತಕ್ಕೆ ಒಳಗಾಗದೆ ಇರುವಂತೆ ಬ್ರಿಟಿಷ್ ಸರ್ಕಾರದೊಂದಿಗೆ ನಮ್ಮನ್ನು ನಾವು ಯಾವುದೇ ಅನುಮಾನವಿಲ್ಲದೆ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು ಎಂಬ ಕಾರ್ಯಸಾಧುವಾದ ಹಾಗೂ ತುಲನಾತ್ಮಕವಾಗಿ ಅನುಕೂಲಕರವಾದ ಧೋರಣೆಯನ್ನು ಮಾತ್ರವೇ ಹಿಂದೂ ಸಂಘಟನಾವಾದಿಗಳು ಹೊಂದಬಹುದು.


ತಮ್ಮ ವ್ಯಾವಹಾರಿಕ ತಿಳುವಳಿಕೆಯ ಪ್ರಕಾರ ಬ್ರಿಟಿಷರ ಸಮರ ಕಾರ್ಯಾಚರಣೆಗೆ ನೆರವಾಗುವುದು ನಮ್ಮ ದೇಶಕ್ಕೆ ಒಂದು ಮಹಾನ್ ಭವಿಷ್ಯವನ್ನು ಸಾರಬಹುದು ಎಂದು ಸಾವರ್ಕರ್ ಅವರು ಭಾಗಲ್‌ಪುರದಲ್ಲಿನ ತಮ್ಮ ಮುಕ್ತಾಯ ಭಾಷಣದಲ್ಲಿ ಸ್ಪಷ್ಟಗೊಳಿಸಿದರು:

ಕತ್ತಲೆಯ ಕರಾಳ ಕ್ಷಣಗಳು ಬೆಳಗಿನ ಸುವರ್ಣ ಉದಯಕ್ಕೆ ಸಮೀಪದಲ್ಲಿದೆ ಎಂಬ ಮಾತು ಸತ್ಯವೇ ಆಗಿದ್ದರೆ ಅದು ಇವತ್ತು ಸಂಭವಿಸಲಿದೆ. ನಮ್ಮ ಪೂರ್ವ ಕಡಲತಡಿಯಿಂದ ಯುದ್ಧವು ಪ್ರವೇಶವಾಗುತ್ತಿರುವುದು ಮತ್ತು ಅದು ಕೆಲವೇ ಸಮಯದಲ್ಲಿ ಪಶ್ಚಿಮದಿಂದಲೂ ಕೇಡನ್ನು ಉಂಟುಮಾಡುವ ಸಂಗತಿಯು ಅಪಾಯಕಾರಿಯಾದುದು, ಅದರ ಪರಿಮಾಣ, ವಿನಾಶಕಾರ್ಯ ಹಾಗೂ ಫಲಿತಾಂಶ ಎಣೆಯಿಲ್ಲದ್ದಾಗಿ ಪರಿಣಮಿಸುತ್ತದೆ. ಆದರೆ ಅದು ಜಗತ್ತಿಗೆ ಒಂದು ಹೊಸ ದಿನವಾಗಿ ಹಠಾತ್ತನೆ ಉದ್ಭವಿಸುತ್ತದೆ ಕೂಡ ಮತ್ತು ಜಗತ್ತಿನ ಈ ಅವ್ಯವಸ್ಥೆಯಿಂದ ಹೊಚ್ಚ ಹೊಸದಾದ ಮಾತ್ರವಲ್ಲ ಉತ್ತಮ ವ್ಯವಸ್ಥೆಯೊಂದು ಹೊರಹೊಮ್ಮಬಹುದು ಎಂಬುದನ್ನು ನಮಗೆ ತೋರಲು ಯಾವುದೇ ಕುರುಹುಗಳ ಅಗತ್ಯವಿಲ್ಲ. ಎಲ್ಲವನ್ನೂ ಕಳೆದುಕೊಂಡವರು ಕೊನೆಯಲ್ಲಿ ಸಾಕಷ್ಟು ಗಳಿಸಬಹುದು. ನಾವೂ ಕೂಡ ನಮ್ಮ ಸಮಯಕ್ಕಾಗಿ ಕಾಯೋಣ ಮತ್ತು ಪ್ರಾರ್ಥಿಸೋಣ ಹಾಗೂ ಶಕ್ತಿಮೀರಿ ಕೆಲಸ ಮಾಡೋಣ.

ಸುಭಾಶ್ ಚಂದ್ರ ಬೋಸ್‌ರಂತಹ ನಾಯಕರುಗಳು ಸಶಸ್ತ್ರ ಹೋರಾಟಗಳ ಮೂಲಕ ಭಾರತದಿಂದ ಬ್ರಿಟಿಷ್ ಆಳ್ವಿಕೆಯನ್ನು ಕಿತ್ತೊಗೆಯಬೇಕೆಂಬ ತಂತ್ರಗಳನ್ನು ಹೂಡುತ್ತಿದ್ದಾಗ ಬ್ರಿಟಿಷರ ಯುದ್ಧ ಕಾರ್ಯಾಚರಣೆಗೆ ಸಾವರ್ಕರ್ ಅವರ ಸಂಪೂರ್ಣ ಬೆಂಬಲವು ಸುವ್ಯವಸ್ಥಿತ ಹಿಂದುತ್ವ ಸಂಚಿನ ಫಲವಾಗಿತ್ತು. ಮಧುರಾ ಅಧಿವೇಶನ (1940 ರ 22 ನೇ ಹಿಂದೂ ಮಹಾಸಭಾ ಅಧಿವೇಶನ) ದಲ್ಲಿ ಅವರು ತಮ್ಮ ಆದ್ಯತೆಯನ್ನು ಸ್ಪಷ್ಟ ಮಾಡಿಕೊಂಡಿದ್ದರು: "ಈ ಯುದ್ಧದಲ್ಲಿ ಇಂಗ್ಲೆಂಡ್ ತನ್ನ ಭಾರತದ ಸಾಮ್ರಾಜ್ಯವನ್ನು ಜರ್ಮನಿಗೆ ಸಂಪೂರ್ಣವಾಗಿ ವಹಿಸಿಕೊಡಬೇಕಾದ ಬಲವಂತಕ್ಕೆ ಈಡಾಗುವ ರೀತಿಯಲ್ಲಿ ವಿನಾಶಕಾರೀ ಸೋಲು ಅನುಭವಿಸುತ್ತದೆ ಎನ್ನುವುದು ಪೂರಾ ಅಸಂಭವ ಎನ್ನುವ ತರ್ಕದ ಮೇಲೆ ಬ್ರಿಟಿಷರಿಗೆ ಅವರ ಬೆಂಬಲ ಆಧರಿಸಿತ್ತು." ಅಷ್ಟರಮಟ್ಟಿಗೆ ಅವರು ಬ್ರಿಟಿಷ್ ಸಾಮ್ರಾಜ್ಯದ ಅಜೇಯತೆಯ ಮೇಲೆ ನಂಬಿಕೆ ಇಟ್ಟುಕೊಂಡಿದ್ದರು.

ಮಧುರಾದಲ್ಲಿ ಅವರ ಅಧ್ಯಕ್ಷೀಯ ಭಾಷಣ ಬ್ರಿಟಿಶ್ ಸಾಮ್ರಾಜ್ಯಶಾಹೀ ಕುತಂತ್ರಗಗಳಿಗೆ ಅವರ ನಾಚಿಕಗೆಟ್ಟ ಬೆಂಬಲಕ್ಕೆ ಒಂದು ಜೀವಂತ ಪುರಾವೆ. ಭಾರತದ ವಿಮೋಚನೆಯ ನೇತಾಜಿಯ ಪ್ರಯತ್ನಗಳನ್ನು ಅವರು ಸಂಪೂರ್ಣವಾಗಿ ತಿರಸ್ಕರಿಸಿದರು.

"ನೈತಿಕ ಅಧಾರದಲ್ಲಿ ಮಾತ್ರವೇ ಅಲ್ಲದೆ, ವ್ಯಾವಹಾರಿಕ ರಾಜಕೀಯದ ನೆಲೆಯಲ್ಲಿ ಕೂಡ, ನಾವು ಪ್ರಸಕ್ತ ಸಂದರ್ಭಗಳಲ್ಲಿ, ಯಾವುದೇ ಸಶಸ್ತ್ರ ಪ್ರತಿರೋಧದ ಕಾರ್ಯಕ್ರಮದಲ್ಲಿ ಹಿಂದೂಮಹಾಸಭಾದ ಸಂಘಟನೆಯ ಪರವಗಿ ತೊಡಗಿಸಿಕೊಳ್ಳದಿರುವ ಬಲವಂತದಲ್ಲಿದ್ದೇವೆ." ಎಂದು ಅವರು ಘೋಷಿಸಿದರು.



ಇದು 1945ರಲ್ಲಿ 'ಅಗ್ರಣಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಕಾರ್ಟೂನ್.
ಈ ಪತ್ರಿಕೆ ನಾಥುರಾಂ ಗೋಡ್ಸೆ ಸಂಪಾದಕರಾಗಿದ್ದ ಹಿಂದೂ ಮಹಾಸಭಾದ ಪತ್ರಿಕೆ ಎನ್ನಲಾಗಿದೆ.
ಇಲ್ಲಿ ಗಾಂಧೀಜಿ, ನೆಹರೂ ಮಾತ್ರವಲ್ಲ, ನೇತಾಜಿ ಬೋಸ್, ವಲ್ಲಭಬಾಯಿ ಪಟೇಲರು ಕೂಡ ಸಾವರ್ಕರ್ ಮತ್ತು ಹೆಡ್ಗೆವಾರ್ 'ರಾಮ–ಲಕ್ಷ್ಮಣ'ರ ಅಖಂಡ ಭಾರತದ ಬಾಣಗಳಿಗೆ ಗುರಿಯಾಗಿದ್ದ 'ರಾವಣ'ನ ಭಾಗ!

ಮಿಥ್ಯೆ 1 –'ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ'!

ಸಾವರ್ಕರ್ ಒಬ್ಬ ದಂತಕತೆಯಾದ ಸ್ವಾತಂತ್ರ್ಯ ಹೋರಾಟಗಾರ. ಸಾವರ್ಕರ್ ಅಸಾಧಾರಣ ಧೈರ್ಯ ಪ್ರದರ್ಶಿಸಿದರು. ಬ್ರಿಟಿಷ್ ಆಳರಸರೊಂದಿಗೆ ಅವರು ಎಂದೂ ಶಾಮೀಲಾಗಲಿಲ್ಲ ಎನ್ನುವ ಹಿಂದುತ್ವ ಪ್ರಚಾರಕರ ಮಿಥ್ಯೆಯನ್ನು ಪರಿಶೀಲಿಸುತ್ತ ಕಾಲಾಪಾನಿ ಅಥವಾ ಕರಿನೀರು ಎಂದು ಕರೆಯಲ್ಪಡುವ ಅಂಡಮಾನಿನ ಭಯಂಕರ ,ಸೆಲ್ಯುಲರ್ ಜೈಲಿನಲ್ಲಿ ಗೂಡಿನಂತಿರುವ ಸಣ್ಣ ಕೋಣೆಯಲ್ಲಿ ಭೀಕರ ಕ್ರೌರ್ಯಗಳಿಗೆ ಒಳಗಾದವರು ಸಾವರ್ಕರ್ ಒಬ್ಬರೇ ಎಂದು ಬಿಂಬಿಸುವ ಪ್ರಯತ್ನ ನಡೆಯುತ್ತಿದೆ ಎನ್ನುವ ಲೇಖಕರು, ಸೆಲ್ಯುಲರ್ ಜೈಲು ಅಂದರೆ ಕೇವಲ ಸಾವರ್ಕರ್ ಕತೆ ಅಲ್ಲ ಎನ್ನುತ್ತಾರೆ. ಸ್ವತಃ ಸಾವರ್ಕರ್ ತಮ್ಮ ರಾಜಕೀಯ ಜೀವನದ ಮೊದಲ ಘಟ್ಟದಲ್ಲಿ, ಭಾರತವು ಹಿಂದೂ ಮತ್ತು ಮುಸ್ಲಿಮರ ನಡುವಿನ ಘರ್ಷಣೆಯ ಕಣವಾಗಿತ್ತು ಎಂಬ ವಾದವನ್ನಾಗಲೀ ಅಥವಾ ಹಿಂದೂಗಳು ಮಾತ್ರ ಭಾರತದ ಸಹಜ ದೇಶಪ್ರೇಮಿಗಳು ಎಂಬ ನಂಬಿಕೆಯನ್ನಾಗಲೀ ಹೊಂದಿರಲಿಲ್ಲ. ಆದರೆ ಸೆಲ್ಯುಲರ್ ಜೈಲಿನಲ್ಲಿನ ಕಾರಾಗೃಹವಾಸ ಮತ್ತು ಅವರು ಅಲ್ಲಿ ಪಡಬೇಕಾದ ಘೋರ ಯಾತನೆಯಿಂದ ಸಂಪೂರ್ಣವಾಗಿ ಕುಗ್ಗಿದ ಅವರು ಕೋಮು ಸಾಮರಸ್ಯದ ಸ್ವತಂತ್ರ ಭಾರತದ ಆದರ್ಶಕ್ಕಾಗಿ ತುಡಿಯುತ್ತಿದ್ದ ಕ್ರಾಂತಿಕಾರಿಯಾಗಿ ಈಗ ಉಳಿಯಲಿಲ್ಲ.. ತಮ್ಮ ರಾಜಕೀಯ ಬದುಕಿನ ಎರಡನೇ ಘಟ್ಟದಲ್ಲಿ ನವಂಬರ್ 14, 1913 ರಂದು ಸಾವರ್ಕರ್ ಸ್ವತಃ ಒಂದು ಕ್ಷಮಾಯಾಚನೆಯ ಅರ್ಜಿಯನ್ನು ಸಲ್ಲಿಸಿದರು. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿನ ಹಿಂದೂ–ಮುಸ್ಲಿಂ ಐಕ್ಯತೆಯಿಂದ ಆತಂಕಿತರಾಗಿದ್ದ ಬ್ರಿಟಿಷ್ ದೊರೆಗಳಿಗೆ ಸಾವರ್ಕರ್‌ರಂತವರ ಸಹಾಯ ಬೇಕಿತ್ತು, ಅದಕ್ಕಾಗಿ ಅವರನ್ನು ಬಿಡುಗಡೆ ಮಾಡಿದರು ಎನ್ನುವುದನ್ನು ಯಾರೂ ಅರ್ಥಮಾಡಿಕೊಳ್ಳಬಲ್ಲರು. "ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ವಿರುದ್ಧ ಇದೆ ಎನ್ನಲಾದ ಸಂಯುಕ್ತ ರಂಗ ಛಿದ್ರವಾದರೂ ತನಗೆ ಚಿಂತೆಯಿಲ್ಲ" ಎಂದು ಘೋಷಿಸುವಷ್ಟರ ಮಟ್ಟಿಗೂ ಹೋದ ಸಾವರ್ಕರ್ ವಾಸ್ತವದಲ್ಲಿ ಅವರ ಆವಶ್ಯಕತೆಯನ್ನು ಈಡೇರಿಸಿದರು.

ಸಂಪಾದಕೀಯ

ಬಿ.ಬಿ.ಎಂ.ಪಿ ಚುನಾವಣೆ: ಹಾವು ಏಣಿ ಆಟ

ಸ್ಥಳೀಯ ಸಂಸ್ಥೆಗಳಲ್ಲಿ ಇತರೆ ಹಿಂದುಳಿದ ವರ್ಗ–ಒಬಿಸಿ ಗಳಿಗೆ ರಾಜಕೀಯ ಪ್ರಾತಿನಿಧ್ಯವನ್ನು ಕಲ್ಪಿಸುವಂತಹ ಪ್ರಕ್ರಿಯೆಯನ್ನು ಮಾರ್ಚ್ 31 ರೊಳಗೆ ಪೂರ್ಣಗೊಳಿಸಲು ಸರ್ವೋಚ್ಚ ನ್ಯಾಯಾಲಯ ಅವಕಾಶ ಕಲ್ಪಿಸಿ ನಿರ್ದೇಶನ ನೀಡಿದೆ. ಇದರಿಂದಾಗಿ ಬಿಬಿಎಂಪಿಗೆ ಚುನಾಯಿತ ಜನಪ್ರತಿನಿಧಿಗಳನ್ನು ಪಡೆಯುವ ಪ್ರಕ್ರಿಯೆಯನ್ನು ಮತ್ತಷ್ಟು ಮುಂದೂಡಿದಂತಾಗಿದೆ. ಈಗಾಗಲೇ ಚುನಾಯಿತ ಜನಪ್ರತಿನಿಧಿಗಳ ಆಡಳಿತ ಅವಧಿ 2020ರಲ್ಲಿ ಮುಗಿದು ಇದೇ ಸೆಪ್ಟಂಬರಿಗೆ ಎರಡು ವರ್ಷಗಳು ಪೂರ್ಣಗೊಂಡಿವೆ. ಕರ್ನಾಟಕದ ರಾಜಧಾನಿಯಾಗಿ ಒಂದೂವರೆ ಕೋಟಿಯಷ್ಟು ಅತಿ ದೊಡ್ಡ ಜನಸಂಖ್ಯೆ ಮತ್ತು ಆರ್ಥಿಕತೆ ವಹಿವಾಟುಗಳನ್ನು ಒಳಗೊಂಡಿರುವ ಬೆಂಗಳೂರು ನಾಗರೀಕ ಆಡಳಿತ ಕೇವಲ ಅಧಿಕಾರಶಾಹಿಗಳ ಕೈಯಲ್ಲೇ ನಡೆಯುತ್ತಿರುವುದು ದುರಂತವಾಗಿದೆ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯ ವಿಳಂಬದಿಂದ ಒಂದರ್ಥದಲ್ಲಿ ರಾಜ್ಯ ಸರ್ಕಾರದ ನೇರ ಸುಪರ್ದಿಯಲ್ಲಿ ಅಂದರೆ ಪರೋಕ್ಷವಾಗಿ ಬಿಜೆಪಿ ಏಕೈಕ ಪಕ್ಷದ ಅಣತಿಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದು ವಾಸ್ತವ ಸಂಗತಿ. ಒಂದು ರೀತಿಯಲ್ಲಿ ಜನ ಪ್ರಾತಿನಿಧ್ಯವಿಲ್ಲದೇ ಇತರ ಪಕ್ಷಗಳ ಆಡಳಿತ ಅಥವಾ ಅಧಿಕಾರದ ಪಾಲು ಇಲ್ಲದೆ ಹೋಗಿರುವುದು ನಿಚ್ಚಳ.

ಬಿಬಿಎಂಪಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು ನಡೆಸಲು ಬಿಜೆಪಿ ಅಷ್ಟೊಂದು ಉತ್ಸುಕವಾಗಿಲ್ಲ ಎನ್ನುವುದು ಅದರ ನಡೆಗಳಿಂದ ಕಾಣುತ್ತದೆ.

ಅಧಿಕಾರ ವಿಕೇಂದ್ರಿಕರಣದಲ್ಲಿ ವಿಶ್ವಾಸ ಇಲ್ಲದ ಬಿಜೆಪಿಯ ಕ್ರಮ ಇದರಿಂದ ವ್ಯಕ್ತವಾಗುತ್ತಿದೆ.

ಈ ಚುನಾವಣೆಗಳನ್ನು ಸಕಾಲದಲ್ಲಿ ನಡೆಯದಂತೆ ಮಾಡುವ ಚಾಣಾಕ್ಷ ತಂತ್ರಗಳನ್ನು ಸರ್ಕಾರ ಮಾಡುತ್ತಿದೆ ಎನ್ನುವ ವ್ಯಾಪಕ ಟೀಕೆಗಳು ಕೇಳಿದ್ದಾಗಿದೆ. ಬಿಜೆಪಿಯ ಸರ್ವಮುಖಿ ವೈಫಲ್ಯ, ವ್ಯಾಪಕ ಭ್ರಷ್ಟಾಚಾರ ಮತ್ತು ಅಭಿವೃದ್ಧಿಯನ್ನೇ ಕಾಣದ ನಾಗರಿಕ ಪ್ರಶ್ನೆಗಳು, ಜನ ವಿಭಜಕ, ವಿದ್ವೇಷದ ರಾಜಕಾರಣ, ಇದರಿಂದ ಹೆಚ್ಚಿದ ಅತೃಪ್ತಿಯ ಪರಿಣಾಮವಾಗಿ ಸೋತು ಹೋಗುವ ಭಯ ಬಿಜೆಪಿಯನ್ನು ಕಾಡುತ್ತಿದೆ. ಇಂತಹ ಪರಿಸ್ಥಿತಿಯನ್ನು ಇಟ್ಟುಕೊಂಡು ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಅದರ ಪರಿಣಾಮ ಸೋಲಿನಲ್ಲಿ ವ್ಯಕ್ತಗೊಳ್ಳಬಹುದು ಎನ್ನುವ ಆತಂಕವಿದೆ. ಅದ್ದರಿಂದ ಹೇಗಾದರೂ ವಿಧಾನಸಭೆಯ ಚುನಾವಣೆಯ ನಂತರವೇ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆಯನ್ನು ನಡೆಸುವ ಲೆಕ್ಕಾಚಾರವನ್ನು ಬಿಜೆಪಿ ಹೊಂದಿದಂತೆ ಇದೆ. ಕೋರ್ಟ್ ಬಳಸಿ ತಾಂತ್ರಿಕವಾಗಿ ಚುನಾವಣೆ ನಡೆಸದ ತಂತ್ರಗಾರಿಕೆಯಲ್ಲಿ ತೊಡಗಿದೆ. ಮೇಲಾಗಿ ವಾರ್ಡುಗಳ ವ್ಯಾಪ್ತಿಯ ಒಟ್ಟು ಉಸ್ತುವಾರಿ ಅವರ ಶಾಸಕರ ಸುಪರ್ದಿಗೂ ಬರುತ್ತಿರುವುದು ಮುಂಬರುವ ವಿಧಾನಸಭಾ ಚುನಾವಣೆಗೆ ಸಹಾಯಕವಾಗಬಲ್ಲುದು ಎಂಬುದು ಮತ್ತೊಂದು ಅಂಶ. ಇಂತಹ ಸಂಕುಚಿತ ರಾಜಕೀಯ ದುರುದ್ದೇಶದ ಸಲುವಾಗಿ ಪ್ರಜಾಸತ್ತಾತ್ಮಕ ಪ್ರಕ್ರಿಯೆಯನ್ನೇ ತಡೆಯುತ್ತಿದೆ. ಅದಕ್ಕೆಂದೇ 193 ಬಿಬಿಎಂಪಿವಾರ್ಡ್ ಗಳ ಸಂಖ್ಯೆಯನ್ನು 243 ವಾರ್ಡಗಳಿಗೆ ಹೆಚ್ಚಿಸಿರುವುದು ಮತ್ತು ಆಕ್ಷೇಪವಾಗುವಂತೆ ಓಬಿಸಿ ವಿಭಾಗಕ್ಕೆ ಶೇ. 33 ಸ್ಥಾನಗಳನ್ನು ಹಂಚಿಕೆ ಮಾಡಿರುವುದು ಉದ್ದೇಶಪೂರ್ವಕ ಎನ್ನುವಂತೆ ಕಾಣುತ್ತದೆ. ಸುಪ್ರಿಮ್ ಕೋರ್ಟ್ ಹೇಳಿದಂತೆ ಈ ವಿಭಾಗಗಳು ನ್ಯಾಯಯುತವಾಗಿ ಪ್ರಾತಿನಿದ್ಯ ಪಡೆಯಲು ಸಹಾಯಕವಾಗುವಂತೆ ಕ್ರಮಗಳನ್ನು ಕೈಗೊಳ್ಳ ಬೇಕಿತ್ತು. ಆದರೆ ಅದು ಸುಗಮವಾಗದಂತಹ ನಿಲುವು, ಕ್ರಮ ವಹಿಸಲಾಗಿದೆ. ದತ್ತಾಂಶ ಸಂಗ್ರಹಿಸಿ ನೀಡಲು ಆಯೋಗವೊಂದರ ರಚನೆಯೂ ವಿಳಂಬವಾಗಿದೆ. ಇದು ಮುಂದಿನ ಮೂರು ತಿಂಗಳೊಳಗೆ ದತ್ತಾಂಶ ಸಂಗ್ರಹಿಸಿ ವರದಿ ನೀಡುವುದೇ ಅನುಮಾನ. ಈ ಪ್ರಶ್ನೆಯನ್ನು ನ್ಯಾಯ ಪೀಠದ ಮುಂದೆ ಎತ್ತಲಾಗಿದೆ. ಒಟ್ಟು ವಿದ್ಯಾಮಾನಗಳನ್ನು ಗಮನಿಸಿದರೆ ಬಿಬಿಎಂಪಿ, ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಭಾರತದ ಸರ್ವೋಚ್ಚ ನ್ಯಾಯಾಲಯಗಳ ನಡುವೆ ಹಾವು ಏಣಿ ಆಟ ನಡೆದಂತೆ ಕಾಣಿಸುತ್ತದೆ. ಗೌರವಾನ್ವಿತ ನ್ಯಾಯಾಲಯ ಒಬಿಸಿ ವಿಭಾಗಗಳಿಗೆ ನ್ಯಾಯವನ್ನು ದೊರಕಿಸಿ ಕೊಡಬೇಕು ಎನ್ನುವ ಪ್ರಯತ್ನವನ್ನು ಒಪ್ಪುವಾಗಲೇ, ಸರಕಾರದ ಆಟಗಳನ್ನು ಅರ್ಥ ಮಾಡಿಕೊಳ್ಳದೇ ಹೋಯಿತೇ ಎನ್ನುವುದು ವಿಷಾದನೀಯ. ಏಕೆಂದರೆ ಆಡಳಿತ ವಿಕೇಂದ್ರಿಕರಣದಲ್ಲಿ ಪ್ರಜಾಸತ್ತಾತ್ಮಕವಾಗಿ ಆಡಳಿತ ನೆಲೆಗೊಂಡು ಕಾರ್ಯನಿರ್ವಹಿಸುವುದು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಮಹತ್ವದ್ದು ಎನ್ನುವ ಅಂಶವನ್ನು ಮತ್ತೊಂದು ಮಗ್ಗುಲಿನ ಪ್ರಶ್ನೆಯಾಗಿ ತೆಗೆದುಕೊಳ್ಳಬೇಕಿತ್ತು. ಅದಕ್ಕೆ ಪೂರಕವಾದ ರೀತಿಯಲ್ಲಿ ಸರ್ಕಾರವು ನ್ಯಾಯಾಲಯದ ಮುಂದೆ ವಾದ ಹೂಡಬೇಕಿತ್ತು, ಆದರೆ ಸರ್ಕಾರಕ್ಕೆ ಇದರ ಬಗ್ಗೆ ಕಾಳಜಿ ಇಲ್ಲ ಎನ್ನುವುದು ಅದರ ನಡೆಗಳಿಂದಲೇ ಸ್ಪಷ್ಟವಾಗುತ್ತದೆ.

ಅಧಿಕಾರಶಾಹಿ ಆಡಳಿತವೆಂದರೆ ಜನತೆಗೆ ಅಥವಾ ಜನಪ್ರಾತಿನಿಧ್ಯಕ್ಕೆ ಅಷ್ಟಾಗಿ ಉತ್ತರದಾಯಿತ್ವ ಇಲ್ಲದಿರುವಂತಹ ಮತ್ತು ನೇರವಾಗಿ ಸರ್ಕಾರದ ಮುಖ್ಯಮಂತ್ರಿಗಳ ನಿಯಂತ್ರಣದಲ್ಲಿ ನಡೆಯುವಂತೆ ಆಗಿದೆ. ವಿರೋಧ ಪಕ್ಷವೇ ಇಲ್ಲದಿರುವಾಗ, ಜನಪ್ರತಿನಿಧಿಗಳ ಕಣ್ಗಾವಲೇ ಇಲ್ಲದಿರುವಾಗ ಆಡಳಿತ ಮತ್ತು ಹಣಕಾಸಿನ ವ್ಯವಹಾರಗಳಿಗೆ ಅಂಕುಶವಾದರೂ ಎಲ್ಲಿ? ಹೀಗಾಗಿ ಇದು ನಿರಂಕುಶ ಆಡಳಿತವಾಗಿದೆ. ದುರಾಡಳಿತ ಮತ್ತು ಭ್ರಷ್ಟತೆಯ ಹಲವು ಘಟನೆಗಳು ಹೊರ ಬಿದ್ದಿವೆ.ಮೇಲಾಗಿ ಮತದಾರರ ಪಟ್ಟಿ ಪರಿಷ್ಕರಣ ಭಾರೀ ಹಗರಣವೂ ಇದೇ ಅವಧಿಯಲ್ಲಿದೆ. ಬೆಂಗಳೂರಿನಂತಹ ಮಹಾನ್ ನಗರದಲ್ಲಿ ಕೇವಲ ಅಧಿಕಾರಿಗಳ ಆಡಳಿತವೇ ಜನತೆಗೆ ಪರಿಹಾರವನ್ನು ನೀಡುತ್ತದೆ ಎಂದು ಭಾವಿಸುವುದು, ಹಾಗೆ ಬಿಂಬಿಸುವುದು ವಂಚಕತನವಾಗುತ್ತದೆ.

ನ್ಯಾಯಾಲಯವು ನೀಡಿರುವ ಕಾಲಾವಕಾಶವನ್ನು ಸೂಕ್ತವಾಗಿ ಬಳಸಿ ಪೂರ್ಣ ದತ್ತಾಂಶಗಳನ್ನು ಸಂಗ್ರಹಿಸಿ ಚುನಾವಣೆ ನಡೆಯುವಂತೆ ಸರಕಾರ ಕ್ರಮ ವಹಿಸಬೇಕು. ಇಲ್ಲವಾದರೆ ಇದು ಪ್ರಜಾಪ್ರಭುತ್ವ ವಿರೋಧಿ, ಪ್ರಜ್ಞಾಪೂರ್ವಕ ಜನದ್ರೋಹವಾಗುತ್ತದೆ.

ಉಲ್ಬಣಿಸುತ್ತಿರುವ ಮತೀಯವಾದದ 'ಫೋಬಿಯಾ'

ಈ ವಾರ

ಎಸ್.ವೈ. ಗುರುಶಾಂತ್

ಆರ್.ಎಸ್.ಎಸ್.ಮತ್ತು ಅದರ ಪರಿವಾರ, ಬಿಜೆಪಿ ನಾಯಕರ ಮಾತು ಮತ್ತು ವರ್ತನೆಗಳನ್ನು ಗಮನಿಸಿದರೆ ಮನೋರೋಗದ ವಿಕಲ್ಪ ಹಾಗೂ ವಿಕೃತತೆಯ ಉಲ್ಬಣಾವಸ್ಥೆಯಂತೆ ಕಾಣುತ್ತವೆ. ಮೈಸೂರಿನಲ್ಲಿ ಸಿಟಿ ಬಸ್ ನಿಲ್ದಾಣವೊಂದರ ಮೇಲ್ಚಾವಣಿಯ ಮೇಲೆ ಅರಮನೆಯ ಗೋಪುರ ಹೋಲುವ ಗುಂಡಾದ ಕಟ್ಟಡ ವಿನ್ಯಾಸ ಮಸೀದಿಯ ಗುಂಬಜ್ ನಂತೆ ಕಂಡು ಅದನ್ನು ಒಡೆಸಿ ಹಾಕಬೇಕು ಎಂದು ತಮ್ಮ ಪಕ್ಷದ ಶಾಸಕರ ಮೇಲೆಯೇ ಸಂಸದ ಪ್ರತಾಪ ಸಿಂಹ ರಂಪಾಟ ಮಾಡಿದ್ದು ಇನ್ನೂ ನೆನಪಿನಿಂದ ಮಾಸಿಲ್ಲ. ಇದು ಅವರಿಬ್ಬರ ನಡುವಿನ ವೈಯುಕ್ತಿಕ ದ್ವೇಷಕ್ಕೆ ಮಾಡಿದ ಕಿತಾಪತಿ ಎಂದು ಮಾಧ್ಯಮಗಳಲ್ಲಿ ಬಿಂಬಿಸಲಾಗಿತ್ತು. ಆದರೆ ಬೆಂಗಳೂರಿನ ಕೆಪಿಟಿಸಿಲ್ ಕಟ್ಟಡ,

ಕಲ್ಬುರ್ಗಿ ರೈಲ್ವೇ ನಿಲ್ದಾಣಕ್ಕೆ ಬಳಿದ ಹಸಿರು ಬಣ್ಣ ಮತ್ತು ಕರ್ನಾಟಕ ಸರ್ಕಾರದ ಇತರೆ ಕಟ್ಟಡಗಳ ಮೇಲೆ ಅಂತಹ 'ಗುಂಬಜ್' ಗಳು ಇರುವುದು ನಮ್ಮ ಸಂಸ್ಕೃತಿಗೆ ಅಪಮಾನವೆಂದು ಮತ್ತೊಬ್ಬ ನಾಯಕ ಖ್ಯಾತಿಯ ತೆಗೆದಿದ್ದಾನೆ. ಕೊಲ್ಲೂರು ಮೂಕಾಂಬಿಕಾ ದೇವಸ್ಥಾನ, ಮೇಲುಕೋಟೆ ಚೆಲುವರಾಯಣ ಸ್ವಾಮಿ ದೇವಾಲಯ ಮತ್ತು ಇತರ ಕಡೆ 'ಸಲಾಂ ಆರತಿ' ಪೂಜೆಯ ಹೆಸರನ್ನು 'ಆರತಿ ನಮಸ್ಕಾರ' ಎಂದು ಬದಲಾಯಿಸಲು ಕರ್ನಾಟಕ ಸರ್ಕಾರದ ಧಾರ್ಮಿಕ, ದತ್ತಿ ಇಲಾಖೆಯು ನಿರ್ಧಾರ ಮಾಡಿರುವ ವಿಚಿತ್ರ ಪ್ರಸಂಗವು ನಡೆದಿದೆ. ಅವರ ಖ್ಯಾತೆಗೆ ಇದು ಉರ್ದು ಪದ ಎನ್ನುವ ನೆಪ! ಟಿಪ್ಪು ಸುಲ್ತಾನ್ ಮಾಡಿಸುತ್ತಿದ್ದ, ಅವರ ಹೆಸರಿನಲ್ಲಿ ನಡೆಯುವ ಪೂಜೆ ದಾಸ್ಯದ ಸಂಕೇತವಾಗಿದ್ದು ಈಗ ಬಿಜೆಪಿ ಅದನ್ನು ಗುಲಾಮತನದಿಂದ ವಿಮೋಚನೆ ಮಾಡುತ್ತಿದೆ ಎಂದು ಹೇಳಿಕೆ ನೀಡಲಾಗುತ್ತಿದೆ. ಈ ಹಿಂದೆ ಮೈಸೂರಿಂದ ಚೆನ್ನೈಗೆ ಸಂಚರಿಸುತ್ತಿದ್ದ ಟಿಪ್ಪು ಎಕ್ಸ್ ಪ್ರೆಸ್' ರೈಲಿನ ಹೆಸರನ್ನು ಬದಲಾಯಿಸಿ ಒಡೆಯರ್ ಎಕ್ಸ್ ಪ್ರೆಸ್' ಸ್ ಎಂದು ಹೆಸರಿಡಲು ಕೇಂದ್ರ ಸರ್ಕಾರಕ್ಕೆ ಬರೆದದ್ದು ಮತ್ತು ಕೇಂದ್ರ ಸರ್ಕಾರ ಅದನ್ನು ಒಪ್ಪಿದ್ದು' 'ವಿಮೋಚನಾ' ಸರಣಿಯ ಒಂದು ಪೂರಕ ಪ್ರಸಂಗ.

ಇಲ್ಲಿ ಒಂದೆರಡು ಪ್ರಶ್ನೆಗಳು ಉದ್ಭವವಾಗುತ್ತವೆ. ಇನ್ನೂ ದುಂಡಗಿರುವ ಎಲ್ಲವನ್ನೂ ಇಸ್ಲಾಂ ವಾಸ್ತುಶಿಲ್ಪವೆಂದು ಘೋಷಿಸಿ ಅವುಗಳನ್ನು ಒಡೆಯುವ ಕಾಮಗಾರಿ ಕೆಲಸವನ್ನು ಸಂಘ ಪರಿವಾರ ಕೈಗೆತ್ತಿಕೊಳ್ಳುವುದೇ? ಮತ್ತೊಂದು, ಇಸ್ಲಾಂ ಧರ್ಮಕ್ಕೆ ಮತ್ತು ವಿಶೇಷವಾಗಿ ಟಿಪ್ಪು ಸುಲ್ತಾನ್ ರವರಿಗೆ ಯಾಕಿಷ್ಟು ಸಂಘ ಪರಿವಾರ ಭಯಪಡುತ್ತಿದೆ? ಅದು ಹೇಳುವ ಧರ್ಮ ಇನ್ನೊಂದು ಧರ್ಮದ ಎದುರಿನಲ್ಲಿ ದುರ್ಬಲ ಎಂದು ಭಾವಿಸಿದ್ದಾರೆಯೇ?

ಇವೆಲ್ಲವುಗಳನ್ನು ಗಮನಿಸುವಾಗ ಮನೋರೋಗದ ವೈದ್ಯಕೀಯ ವಲಯದಲ್ಲಿ ಫೋಬಿಯ ಎನ್ನುವ ಒಂದು ಕಾಯಿಲೆಯು ಸಂಘ ಪರಿವಾರದ ಕೋಮುವಾದಿ ಫ್ಯಾಸಿಸ್ಟರಿಗೆ ಆಡರಿಕೊಂಡಿದೆಯೇ ಎನ್ನುವ ಅನುಮಾನ ಕಾಡುತ್ತದೆ.

'ಫೋಬಿಯಾ' ಎನ್ನುವುದು ಒಂದು ನಿರ್ದಿಷ್ಟ ವಸ್ತು, ಸನ್ನಿವೇಶ ಅಥವಾ ಚಟುವಟಿಕೆಯ ಅನಿಯಂತ್ರಿತ, ತರ್ಕಹೀನ ಮತ್ತು ಶಾಶ್ವತವಾದ ಭಯವಾಗಿದೆ. ಈ ಭಯವು ಎಷ್ಟು ಅಗಾಧವಾಗಿರಬಹುದು ಎಂದರೆ ಒಬ್ಬ ವ್ಯಕ್ತಿಯು ಈ ಭಯದ ಮೂಲವನ್ನು ಮರೆಮಾಚಲು ಬಹು ದೂರ ಸಾಗಬಹುದು. ಒಂದು ಪ್ರತಿಕ್ರಿಯೆಯು ದಿಗಿಲಿನ ಆಕ್ರಮಣವೂ ಆಗಿರಬಹುದು' ಎನ್ನುತ್ತದೆ ಪಾರಿಭಾಷಿಕ ಪದ ವಿವರಣೆ. ಸಾಮಾಜಿಕ, ಸಾಂಸ್ಕೃತಿಕ ಸ್ತರಗಳಲ್ಲಿ ಇದು ಹೇಗೆ ಸಂಭವಿಸುತ್ತದೆ?

ವಿವಿಧ ಸಂಸ್ಕೃತಿ, ನಾಗರೀಕತೆ, ತಂತ್ರಜ್ಞಾನ ವಿನ್ಯಾಸಗಳು ಬಹು ಸಂಸ್ಕೃರಿಯ ಸತ್ವವು ಶ್ರೇಷ್ಠತೆಯ ವ್ಯಸನದಲ್ಲಿರುವರಿಗೆ ಕೀಳಿರಿಮೆ, ನಂತರದಲ್ಲಿ ಅಸ್ತಿತ್ವದ ಆತಂಕವಾಗಿ ಕಾಡುತ್ತದೆಯೇ? ಹೊಸದಕ್ಕೆ ಮುಖಾಮುಖಿಯಾಗದ, ತಾನೆಲ್ಲಿ ತಿರಸ್ಕಾರಕ್ಕೆ ಒಳಗಾಗುವೆನೋ ಎನ್ನುವ ಭಯ ನಿರಾಕರಣ ಸ್ವರೂಪಕ್ಕೆ ತಿರುಗಿ, ಮತ್ತೊಂದರ ಅಸ್ತಿತ್ವವನ್ನು ಹೀಗಳೆಯುವ ಭಂಡತನಕ್ಕೆ ಎಳಸುವುದೇ? ಸನಾತನೀಯತೆಯ ಸನ್ನಿಯೊಳಗೆ ಸಾಂಸ್ಕೃತಿಕ ಫೋಬಿಯಾ ದ ಬೀಜಗಳಿವೆಯೇ? ಸಾಮಾಜಿಕ ಸ್ತರಗಳ ಸಮುದಾಯ, ಜಾತಿ ಗುಂಪುಗಳ ಮನೋರಂಗದಲ್ಲಿನ ಈ ಒಳಸುಳಿಗಳನ್ನು ಅತ್ಯಂತ ಸೂಕ್ಷ್ಮವಾಗಿ ವಿಶ್ಲೇಷಿಸಬೇಕಾಗುತ್ತದೆ.

'ಸಲಾಂ ಆರತಿ' ಎನ್ನುವುದು ಆರಾಧನೆಯ ಒಂದು ಧಾರ್ಮಿಕ ಕ್ರಿಯೆಯಂತೆ ಕಂಡರೂ ನಮ್ಮ ನಾಡಿನ ಜನ ಪರಂಪರೆಯ ಸೌಹಾರ್ದತೆಯ ಗಟ್ಟಿ ಸಂಕೇತವಾಗಿದೆ. ಸಂಘ ಪರಿವಾರ ಆರೋಪಿಸುವಂತೆ ಟಿಪ್ಪು ಸುಲ್ತಾನ್ ಮತಾಂಧನೇ ಆಗಿದ್ದಲ್ಲಿ ಯಾಕೆ ಸುಪ್ರಸಿದ್ಧ ಹಿಂದೂ ದೇವಾಲಯಗಳ ಸಂರಕ್ಷಣೆಯನ್ನು ಮತ್ತು ಹಿಂದೂ ಪದ್ಧತಿಯಂತೆ ಆರತಿ ಯಂತಹ ಪೂಜಾ ವಿಧಾನಕ್ಕೆ ಪ್ರೋತ್ಸಾಹವನ್ನು ಕೊಡುತ್ತಿದ್ದ. ರಂಗನಾಥನ ದೆವಾಲಯದ ಘಂಟಾನಾದ ಮತ್ತು ಮಸೀದಿಯ ಆಜಾನ್ ಎರಡೂ ತನ್ನ ಕಿವಿಗೆ ಬೀಳ ಬೇಕೆಂದು ಬಯಸುತ್ತಿದ್ದ? ಇಸ್ಲಾಂನ್ನು ಅನುಸರಿಸುವಾಗಲೇ ಸ್ವತಃ ಸೂಫಿ ಪರಂಪರೆಯ ಅನುಯಾಯಿಯಾಗಿದ್ದ ಟಿಪ್ಪು ಹಿಂದೂ ಪೂಜಾ ಪದ್ಧತಿಗೆ ಮಾನ್ಯತೆ ಮತ್ತು ಗೌರವ ಸಲ್ಲಿಸಿರುವುದು ಸಲಾಂ ಆರತಿಯು ಆತನ ಪರ ಧರ್ಮ ಸಹಿಷ್ಣುತೆಯ ಪ್ರತಿಕವಾಗಿದೆ. ಹೀಗಾಗಿ 'ಸಲಾಂ ಆರತಿ' ಎನ್ನುವುದು ಕನ್ನಡ ನಾಡಿನ ಸೌಹಾರ್ದ ಪರಂಪರೆಯ ಒಂದು ಪ್ರಮುಖ ಆಚರಣೆ ಮತ್ತು ಸಂಕೇತವಾಗಿಯೇ ನಾವು ಅರ್ಥ ಮಾಡಿಕೊಳ್ಳಬೇಕು. ಇಂತಹ ಉಜ್ವಲ ಉದಾಹರಣೆಗಳು ಸಂಘ ಪರಿವಾರಕ್ಕೆ ಅಪ್ರಾಯಮಾನವಾಗಿ ಕಾಣುವುದೆಂದರೆ ಅವರು ನಮ್ಮ ಅಪರಂಪರೆಗೆ ಮಸಿ ಬಳಿಯುತ್ತಿದ್ದಾರೆಂದೇ ಅರ್ಥ. ಶೃಂಗೇರಿ ಶಾರದೆಯ ದೇವಸ್ಥಾನವನ್ನು ಮರಾಠಿ ಹಿಂದೂ ಪೇಶ್ವೆಗಳು ಲೂಟಿ ಮಾಡಿದ ನಂತರ ಗುರುಗಳ ಕ್ಷಮೆ ಕೋರುತ್ತಾ ದೇವಸ್ಥಾನದ ಸಂರಕ್ಷಣೆಯ ಜೊತೆಯಲ್ಲಿ ಆಗಿರುವ ಧನ, ಕನಕ ಹಾನಿಯನ್ನು ತುಂಬಿ ಕೊಡುವ ಮುತ್ಸದ್ದಿತನವನ್ನು ಟಿಪ್ಪು ವಹಿಸಿದ್ದು ಲಿಖಿತ ದಾಖಲೆಗಳಲ್ಲಿದೆ. ಸಲಾಂ ಆರತಿ ಎನ್ನುವುದು ಕೂಡ ಪ್ರತಿ ಬಾರಿಯೂ ಟಿಪ್ಪುವಿನ ಧಾರ್ಮಿಕ ಸಹಿಷ್ಣುತೆ, ಸೌಹಾರ್ದತೆಯನ್ನು ನೆನಪಿಸುತ್ತದೆ. ಆದರೆ ಬ್ರಿಟಿಷ್ ವಸಾಹತುಶಾಹಿಗಳ ವಿರುದ್ಧ ರಾಜಿ ಇಲ್ಲದೆ ಹೋರಾಟ ನಡೆಸಿ ಹುತಾತ್ಮನಾದ ಟಿಪ್ಪುವನ್ನು ಸಂಘಪರಿವಾರ ಹೇಗಾದರೂ ಮಾಡಿ ಜನಮಾನಸದಿಂದ ಅಳಿಸಿಹಾಕಿ, ಇತಿಹಾಸಕ್ಕೆ ಮಸಿ ಬಳಿಯಲು ಸದಾ ಪ್ರಯತ್ನಿಸುತ್ತಿದೆ. ಇಂತಹ ದುರುದ್ದೇಶಪೂರಿತ ರಾಜಕಾರಣಕ್ಕೆ ಟಿಪ್ಪುವಿನ ಇಂತಹ ಕೊಡುಗೆಗಳು ಮತ್ತು ಆಚರಣೆಗಳು ಸವಾಲನ್ನು ಒಡ್ಡಿ ಸಂಘಪರಿವಾರದ ಕುತರ್ಕಗಳನ್ನು ಕುತ್ಸಿತ ಪ್ರಚಾರವನ್ನು ಅಣಕಿಸುತ್ತವೆ. ಹಾಗಾಗಿಯೇ–ಪುಟ 4 ಕ್ಕೆ



ಹೋರಾಟ ನಿರತರ ಮೇಲೆ ಪೋಲೀಸ್ ಧಾಳಿ ನಡೆಸುವ ಮೂಲಕ ಸರಕಾರವು ಒಳ ಮೀಸಲಾತಿಯನ್ನು ವಿರೋಧಿಸುವ ಸಂದೇಶ ನೀಡಿದೆಯಾ? – ಮುಖ್ಯಮಂತ್ರಿಗಳಿಗೆ ಸಿಪಿಐ(ಎಂ) ಪ್ರಶ್ನೆ

ಪರಿಶಿಷ್ಟ ಜಾತಿ ಸಮುದಾಯಗಳ ನಡುವೆ ಒಳ ಮೀಸಲಾತಿಯನ್ನು ಕೂಡಲೇ ಜಾರಿಗೊಳಿಸುವಂತೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಡೆಸುತ್ತಿದ್ದ ಹೋರಾಟಗಾರರ ಜೊತೆ ಸರಕಾರ ಮಾತುಕತೆ ನಡೆಸಿ ಸದಾಶಿವ ಆಯೋಗದ ವರದಿಯ ಕುರಿತು ಸರಕಾರದ ಅಭಿಪ್ರಾಯವೇನೆಂದು ಪ್ರಕಟಿಸುವ ಬದಲು ಹೋರಾಟ ನಿರತರ ಮೇಲೆ ಪೋಲೀಸ್ ಧಾಳಿಗೆ ಕ್ರಮವಹಿಸಿ ದೌರ್ಜನ್ಯ ನಡೆಸಿರುವುದನ್ನು ಸಿಪಿಐ(ಎಂ) ಪಕ್ಷ ಬಲವಾಗಿ ಖಂಡಿಸುತ್ತದೆ. ತಕ್ಷಣವೇ ಬಂಧಿತರನ್ನು ಬೇಷರತ್ತಾಗಿ ಬಿಡುಗಡೆ ಮಾಡಬೇಕು ಮತ್ತು ಗಾಯಾಳುಗಳಿಗೆ ಸೂಕ್ತ ಪರಿಹಾರ ಮತ್ತು ಉಚಿತ ಆರೋಗ್ಯ ಸೇವೆಯನ್ನು ನೀಡಬೇಕು ಎಂದು ರಾಜ್ಯ ಸರಕಾರವನ್ನು ಒತ್ತಾಯಿಸಿದೆ.

ಪರಿಶಿಷ್ಠ ಜಾತಿ ಸಮುದಾಯದ ಮೀಸಲಾತಿಯಲ್ಲಿ ಹಿಂದುಳಿದಿರುವಿಕೆಯ ಕಾರಣದಿಂದ ವಂಚನೆಗೊಳಗಾದವರಿಗೆ ಒಳ ಮೀಸಲಾತಿ ನೀಡಬೇಕೆಂಬ ಒತ್ತಾಯ ಹಲವಾರು ವರ್ಷಗಳಿಂದ ಕೇಳಿ ಬರುತ್ತಿದೆ. ಈ ಕುರಿತಂತೆ ನ್ಯಾ. ಸದಾಶಿವ ಆಯೋಗವು ತನ್ನ ವರದಿಯನ್ನು ನೀಡಿ ಹಲವು ವರ್ಷಗಳೇ ಕಳೆದಿವೆ. ಇದುವರೆಗೆ ರಾಜ್ಯ ಸರಕಾರ ಆ ವರದಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿಲ್ಲ ಮತ್ತು ಸರಕಾರ ಆ ಕುರಿತು ತನ್ನ ನಿಲುಮೆ ಏನೆಂದು ಪ್ರಕಟಿಸದಿರುವುದು ಅಕ್ಷಮ್ಯವಾಗಿದೆ. ಈ ಕೂಡಲೇ ನ್ಯಾ. ಸದಾಶಿವ ಆಯೋಗದ ವರದಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಬೇಕು ಮತ್ತು ಸರಕಾರ ಆ ಕುರಿತು ತನ್ನ ನಿಲುಮೆ ಏನೆಂಬುದನ್ನು ಪ್ರಕಟಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ಒಳ ಮೀಸಲಾತಿಗಾಗಿ ಹೋರಾಟದಲ್ಲಿ ತೊಡಗಿರುವವರ ಮೇಲೆ ಪೋಲೀಸ್ ದಾಳಿಯ ಮೂಲಕ ಹೋರಾಟವನ್ನು ಹತ್ತಿಕ್ಕಲು ಪ್ರಯತ್ನಿಸುವ ಮೂಲಕ ಸರಕಾರ ಒಳ ಮೀಸಲಾತಿಯನ್ನು ವಿರೋಧಿಸುವ ಇಂಗಿತ ವ್ಯಕ್ತ ಪಡಿಸಿದೆಯೇ ಎಂದು ಸಿಪಿಐ(ಎಂ) ಮುಖ್ಯ ಮಂತ್ರಿಗಳನ್ನು ಪ್ರಶ್ನಿಸಿದೆ.

ಹೆಜಮಾಡಿಯಲ್ಲಿ ಟೋಲ್ ಸಂಗ್ರಹ ಕೈಬಿಡಲು ಒತ್ತಾಯಿಸಿ ಸಾಮೂಹಿಕ ಧರಣೆಗೆ ನಿರ್ಧಾರ

ವರದಿ: ವಾ.ಉ.

ಸುರತ್ಕಲ್ ಅಕ್ರಮ ಟೋಲ್ ಸುಂಕವನ್ನು ಹೆಜಮಾಡಿಯಲ್ಲಿ ಸಂಗ್ರಹಿಸುವ ಹೆದ್ದಾರಿ ಪ್ರಾಧಿಕಾರದ ಆದೇಶ ಜಾರಿಗೊಳ್ಳುವ ಹಿನ್ನೆಲೆಯಲ್ಲಿ, ಇದನ್ನು ಕೈಬಿಡಬೇಕು ಎಂದು ಒತ್ತಾಯಿಸಿ, ಡಿಸೆಂಬರ್ 29 ರಂದು ಉಡುಪಿ ತಾಲೂಕು ಕಚೇರಿ ಮುಂಭಾಗ ಬೃಹತ್ ಸಾಮೂಹಿಕ ಧರಣಿ ನಡೆಸಲು ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿ ಹಾಗೂ ಉಡುಪಿಯ ಸಮಾನ ಮನಸ್ಕ ಸಂಘಟನೆಗಳ ಮುಖಂಡರು ತೀರ್ಮಾನಿಸಿದ್ದಾರೆ. ಅಜ್ಜರಕಾಡಿನ ವಿಮಾ ನೌಕರರ ಸಂಘದ ಕಚೇರಿಯಲ್ಲಿ ಸಭೆ ಸೇರಿ ಚರ್ಚಿಸಿದ ಮುಖಂಡರು ಈ ನಿರ್ಧಾರ ಕೈಗೊಂಡಿದ್ದಾರೆ.

ಸುರತ್ಕಲ್‌ನ ಸುಂಕವನ್ನು ಹೆಜಮಾಡಿಯಲ್ಲಿ ಸಂಗ್ರಹಿಸುವ ಹೆದ್ದಾರಿ ಪ್ರಾಧಿಕಾರದ ಆದೇಶ ರಾಜ್ಯ ಸರಕಾರದ ಅಧಿಕೃತ ಒಪ್ಪಿಗೆಯೊಂದಿಗೆ ಪ್ರಕಟಗೊಂಡಿದೆ. ಹೆಜಮಾಡಿ ಟೋಲ್ ಪ್ಲಾಜಾದ ಮಾಲಕತ್ವ ಹೊಂದಿರುವ ನವಯುಗ್ ಕಂಪೆನಿಯು ಸಂಗ್ರಹಕ್ಕೆ ಹಿಂದೇಟು ಹಾಕಿರುವುದರಿಂದ ಹೆಜಮಾಡಿಯಲ್ಲಿ ಸಂಗ್ರಹಕ್ಕೆ ತಾತ್ಕಾಲಿಕ ತಡೆ ಬಿದ್ದಿದೆ.

ಜಿಲ್ಲಾಡಳಿತ ಸಮಯಾವಕಾಶ ಕೇಳಿದ್ದರೂ ರಾಜ್ಯ ಸರಕಾರದ ಒಪ್ಪಿಗೆ ಸಿಕ್ಕಿರುವುದರಿಂದ ಯಾವುದೇ ಕ್ಷಣದಲ್ಲಿ ಸಂಗ್ರಹ ಆರಂಭಗೊಳ್ಳಬಹುದು. ಜಿಲ್ಲೆಯ ಸಂಸದ, ಶಾಸಕರು ವಿಧಾನಸಭೆ ಚುನಾವಣೆವರೆಗೆ ಸಂಗ್ರಹ ಮುಂದೂಡುವ ಮೂಲಕ ಜನರ ಕಣ್ಣಿಗೆ ಮಣ್ಣೆರಚುವ ತಂತ್ರ ನಡೆಸಿದ್ದಾರೆ. ಸದ್ಯದಲ್ಲೇ ಹೆಜಮಾಡಿಯಲ್ಲಿ ಹೆಚ್ಚುವರಿ ಟೋಲ್ ಸಂಗ್ರಹ ಆರಂಭಗೊಳ್ಳುವ ಸಾಧ್ಯತೆ ಇದೆ ಎಂಬ ಅಭಿಪ್ರಾಯ ಈ ಸಭೆಯಲ್ಲಿ ವ್ಯಕ್ತವಾಯಿತು.

ಹೆಜಮಾಡಿಯಲ್ಲಿ ಸುರತ್ಕಲ್ ಟೋಲ್ ಸಂಗ್ರಹದ ಆದೇಶವನ್ನು ಹೆದ್ದಾರಿ ಪ್ರಾಧಿಕಾರ ಹಿಂಪಡೆಯುವುದು ಮಾತ್ರ ಶಾಶ್ವತ ಪರಿಹಾರವಾಗಿದ್ದು, ಆ ನಿಟ್ಟಿನಲ್ಲಿ ಎರಡೂ ಜಿಲ್ಲೆಗಳಲ್ಲಿ ವ್ಯಾಪಕ ಪ್ರಚಾರಾಂದೋಲನ ನಡೆಸಲು ಸಭೆಯಲ್ಲಿ ನಿರ್ಧರಿಸಲಾಯಿತು.

ಅಧ್ಯಕ್ಷತೆಯನ್ನು ಮಾಜಿ ಸಚಿವ ವಿನಯ್ ಕುಮಾರ್ ಸೊರಕೆ ವಹಿಸಿದ್ದರು. ಹೋರಾಟ ಸಮಿತಿಯ ಸಂಚಾಲಕ ಮುನೀರ್ ಕಾಟಿಪಳ್ಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾಜಿ ಸಚಿವ ಅಭಯ ಚಂದ್ರ ಜೈನ್, ಬಸ್ ಮಾಲಕರ ಸಂಘದ ಮುಂದಾಳು ಕಿಶನ್ ಹೆಗ್ಡೆ ಕೊಳ್ಕೆಬೈಲ್, ವಿವಿಧ ಸಂಘಟನೆಗಳ ಪ್ರತಿನಿಧಿಗಳಾದ ಎಂ.ಜಿ.ಹೆಗ್ಡೆ, ಸುಂದರ ಮಾಸ್ತರ್, ಸುರೇಶ್ ಕಲ್ಲಾಗರ, ಶೇಖರ ಹೆಜಮಾಡಿ, ರಾಲ್ಫಿ ಡಿಕೋಸ್ತ ಹೆಜಮಾಡಿ, ಶಶಿಧರ ಗೊಲ್ಲ, ಪ್ರಶಾಂತ್ ಜತ್ತನ್ನ ಮತ್ತಿತರರು ಉಪಸ್ಥಿತರಿದ್ದರು.

ಸಿಪಿಐ(ಎಂ) ಮುಖಂಡ ಬಾಲಕೃಷ್ಣ ಶೆಟ್ಟಿ ಸ್ವಾಗತಿಸಿದರು. ಉಡುಪಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಕಾಂಚನ್ ವಂದಿಸಿದರು.

ಉಲ್ಬಣಿಸುತ್ತಿರುವ ಮತೀಯವಾದದ 'ಫೋಬಿಯಾ'... ಪುಟ 3 ರಿಂದ

ಶತಶತಮಾನಗಳು ಉರುಳಿದರೂ ಟಿಪ್ಪುವಿನ ಎದುರು ಮೊಂಡು ಗತ್ತಿ ಹಿಡಿದು ವಸಾಹತುಶಾಹಿ ಕುನ್ನಿಗಳು ಯುದ್ಧವನ್ನು ನಡೆಸುತ್ತಲೇ ಇರುತ್ತಾರೆ. ಅವರು ವಾಸ್ತವದಲ್ಲಿ ವಿರೋದಿಸುವುದು ವಸಾಹತುಶಾಹಿ ವಿರೋಧಿ ಸಂಘರ್ಷದ ಪರಂಪರೆಯನ್ನು. 'ಟಿಪ್ಪು'ವಿನ ಎದುರು ಸೆಣಸಲಾಗದ ಹೇಡಿಗಳು ವಾಲ್ಮೀಕಿ, ಒಕ್ಕಲಿಗ, ಕೊಡವರು ಮುಂತಾದವರನ್ನು ಹಾದಿ ತಪ್ಪಿಸಿ ಮತ್ತೆ ಅಡ್ಡ ನಿಲ್ಲಿಸಲು ಯತ್ನಿಸುತ್ತಲೇ ಇರುತ್ತಾರೆ.

ನಮ್ಮ ನಾಡಿನ ಸಹಿಷ್ಣುತೆ, ಸೌಹಾರ್ದ ಪರಂಪರೆಗೆ ಮತ್ತೆ ಮತ್ತೆ ಮಸಿ ಬಳಿದು ಅವಮಾನಿಸುವ ಕೃತ್ಯಗಳನ್ನು ಸಂಘ ಪರಿವಾರ ಕೈಬಿಡಬೇಕು. ಸತ್ಯವೆಂಬ ಸೂರ್ಯನ ಮುಖಕ್ಕೆ ಮಣ್ಣು ತೂರಿದವರ ಕಣ್ಣಿಗೆ ಮಣ್ಣು ಬೀಳುತ್ತದೆ ಎನ್ನುವ ಸತ್ಯವನ್ನು ಈ ಪರಿವಾರ ಅರ್ಥ ಮಾಡಿಕೊಂಡರೆ ಉತ್ತಮ. ಆದ್ದರಿಂದ ಇಂತಹ ವಿಚಿತ್ರ ಕೃತ್ಯಗಳನ್ನು ನಿಲ್ಲಿಸಬೇಕು. ಸರ್ಕಾರ, ಆಡಳಿತ ಇರುವುದು ಜನಸಾಮಾನ್ಯರ ಬದುಕಿನ ಪ್ರಶ್ನೆಗಳನ್ನು ನೀಗಿಸಿ ಉತ್ತಮ ಬದುಕನ್ನು ಕಟ್ಟಿಕೊಡಲು ಎನ್ನುವುದು ನೆನಪಿಡಬೇಕು. ಇಂತಹ ಅಧಿಕಾರ ಅವಕಾಶಗಳನ್ನು ದುರ್ಬಳಕೆ ಮಾಡಿ ಜನತೆಯ ಮನಸ್ಸಿಗೆ ವಿಭಜನೆ, ವಿದ್ವೇಷದ ವಿಷಪ್ರಾಶನ ಮಾಡಿಸಲು ಅಲ್ಲ ಎನ್ನುವುದು ನೆನಪಿಡಬೇಕು.

"ಬಾಗಿಲೇ ಇಲ್ಲದ ಶೌಚಾಲಯಗಳು, ಕಾಂಪೌಂಡ್ ಇಲ್ಲದ, ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಹಾಸ್ಟೆಲ್‌ಗಳು, ಉಪ್ಪು–ತರಕಾರಿ ಇಲ್ಲದ ನೀರೇ ಸಾಂಬಾರ್ ಆಗಿರುವ ಊಟ, ಶೈಕ್ಷಣಿಕ ತಾಣಗಳಾಗಿರಬೇಕಿದ್ದ ಹಾಸ್ಟೇಲ್‌ಗಳು ರೋಗಗಳ ತಾಣವಾಗುತ್ತಿವೆ. ಹಾಸ್ಟೇಲ್ ವಿದ್ಯಾರ್ಥಿಗಳ ಗೋಳು ಕೇಳುವವರು ಯಾರು ಎಂಬ ಸ್ಥಿತಿ ನಿರ್ಮಾಣವಾಗಿದೆ.

ಹಾಸ್ಟೇಲ್ ನರಕ: ವಿದ್ಯಾರ್ಥಿಗಳ ಗೋಳು ಕೇಳುವವರು ಯಾರು?!

ಗುರುರಾಜ ದೇಸಾಯಿ

ಊಟದ ಮೆನ್ಯೂ

ಮೆಟ್ರಿಕ್ ಪೂರ್ವ	ಮೆಟ್ರಿಕ್ ನಂತರ
ರೂ. 1650/-	ರೂ. 1750/-

ರಾಜ್ಯದಲ್ಲಿ SC/ST/OBC/ಅಲ್ಪಸಂಖ್ಯಾತ/ಆಶ್ರಮಶಾಲೆಗಳು ಸೇರಿ ಒಟ್ಟು 5 ಸಾವಿರಕ್ಕೂ ಹೆಚ್ಚು ಹಾಸ್ಟೇಲ್‌ಗಳಿವೆ. 4 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಇಲ್ಲಿ ಅಧ್ಯಯನ ಮಾಡುತ್ತಿದ್ದಾರೆ. ಮೂಲಭೂತ ಸೌಲಭ್ಯಗಳ ಕೊರತೆ, ಗುಣಮಟ್ಟದ ಊಟದ ಕೊರತೆಯಿಂದ ವಿದ್ಯಾರ್ಥಿಗಳು ದಿನನಿತ್ಯ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ವಿದ್ಯಾರ್ಥಿಗಳ ಶೈಕ್ಷಣಿಕ ತಾಣಗಳಾಗಿರಬೇಕಿದ್ದ ಹಾಸ್ಟೇಲ್‌ಗಳು ರೋಗಗ್ರಸ್ಥ ತಾಣಗಳಾಗಿವೆ. ಸೌಲಭ್ಯಗಳಿಲ್ಲದೆ ನರಳುತ್ತಿರುವ ಹಾಸ್ಟೇಲಗಳಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿರತರಾಗಿದ್ದಾರೆ. ಹಾಸ್ಟೇಲ್‌ನಲ್ಲಿರುವ ವಿದ್ಯಾರ್ಥಿಗಳ ಗೋಳನ್ನು ಆಲಿಸಿ ಅವರ ಸಮಸ್ಯೆಗಳನ್ನು ನಿವಾರಿಸು ಪ್ರಯತ್ನಗಳನ್ನು ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ಮಾಡುತ್ತಲೇ ಇಲ್ಲ. ಮುಖ್ಯವಾಗಿ ಸರಕಾರ ಹಾಸ್ಟೇಲ್‌ಗಳನ್ನು ಬಲಪಡಿಸಲು ಆಸಕ್ತಿ ತೋರದಿರುವುದು ಹಾಸ್ಟೇಲ್‌ಗಳು ಹೀನಾಯ ಸ್ಥಿತಿ ತಲುಪಲು ಕಾರಣವಾಗಿದೆ.

ಬಾಡಿಗೆ ಕಟ್ಟಡದಲ್ಲಿ ಹಾಸ್ಟೇಲ್:

ರಾಜ್ಯದಲ್ಲಿ ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಮೆಟ್ರಿಕ್ ಪೂರ್ವ ಹಾಸ್ಟೇಲ್‌ಗಳ ಸಂಖ್ಯೆ 1237, ಇಲ್ಲಿ 91,454 ವಿದ್ಯಾರ್ಥಿಗಳಿದ್ದಾರೆ. ಮೆಟ್ರಿಕ್ ನಂತರದ ಹಾಸ್ಟೇಲ್‌ಗಳ ಸಂಖ್ಯೆ 635 ಇದ್ದು, 70,143 ವಿದ್ಯಾರ್ಥಿಗಳು ಅಧ್ಯಯನ ನಡೆಸುತ್ತಿದ್ದಾರೆ. ಒಟ್ಟು 1872 ಹಾಸ್ಟೇಲ್‌ಗಳಲ್ಲಿ 850 ಹಾಸ್ಟೇಲ್‌ಗಳಿಗೆ ಸ್ವಂತ ಕಟ್ಟಡ ಇಲ್ಲ. ಇನ್ನೂ ಹಿಂದುಳಿದ ವರ್ಗಳ ಇಲಾಖೆಯ ಹಾಸ್ಟೇಲ್ ಚಿತ್ರಣ ನೋಡುವುದಾದರೆ. ಮೆಟ್ರಿಕ್ ಪೂರ್ವವ ಹಾಸ್ಟೇಲ್‌ಗಳ ಸಂಖ್ಯೆ 1282 ಇದ್ದು, 69,068 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಮೆಟ್ರಿಕ್ ನಂತರದ ಹಾಸ್ಟೇಲ್‌ಗಳ ಸಂಖ್ಯೆ 1156 ಇದ್ದು ಅಲ್ಲಿ 1,58,768 ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಒಟ್ಟು 2438 ಹಾಸ್ಟೇಲ್‌ಗಳಲ್ಲಿ 1031 ಹಾಸ್ಟೇಲ್‌ಗಳಿಗೆ ಸ್ವಂತ ಕಟ್ಟಡ ಇಲ್ಲ.

ಅಂದರೆ ಅರ್ದದಷ್ಟು ಹಾಸ್ಟೇಲ್‌ಗಳು ಬಾಡಿಗೆ ಕಟ್ಟದಲ್ಲಿ ನಡೆಯುತ್ತಿವೆ. ತಿಂಗಳಿಗೆ ಕಡಿಮೆ ಅಂದರೂ 1 ಲಕ್ಷ ರೂ ಹಣ ಬಾಡಿಗೆಗೆ ಖರ್ಚಾಗುತ್ತಿದೆ. ಬಹಳಷ್ಟು ಹಾಸ್ಟೇಲ್‌ಗಳು ಹತ್ತಾರುವರ್ಷದಿಂದ ಒಂದೇ ಜಾಗದಲ್ಲಿ ಬಾಡಿಗೆ ಪಡೆದು ಹಾಸ್ಟೇಲ್ ನಡೆಸುತ್ತಿವೆ. ಇಷ್ಟು ಹಣದಲ್ಲಿ ಒಂದು ಜಾಗ ಖರೀದಿಸಿ ಹಾಸ್ಟೇಲ್ ಕಟ್ಟಲು ಸಾಧ್ಯವಿತ್ತು. ಬಹುಷ ಈ ಹಾಸ್ಟೇಲ್ ಬಾಡಿಗೆಯಲ್ಲಿ ಸರಕಾರಕ್ಕೆ ಕಮೀಷನ್ ಹೋದಂತೆ ಕಾಣಿಸುತ್ತದೆ. ಹಾಗಾಗಿ ಬಾಡಿಗೆ ಮುಕ್ತ ಹಾಸ್ಟೇಲ್‌ಗಳ ನಿರ್ಮಾಣಕ್ಕೆ ಸರಕಾರ ಮುಂದಾಗುತ್ತಿಲ್ಲ.

ಇನ್ನೂ ಹಾಸ್ಟೇಲ್‌ಗಳಲ್ಲಿ ವಾರ್ಡನ್‌ಗಳ ಕೊರತೆ ಕೂಡಾ ಇದ್ದು, ಒಬ್ಬ ವಾರ್ಡನ್ ಎರಡರಿಂದ ಮೂರು ಹಾಸ್ಟೇಲ್‌ಗಳನ್ನು ನೋಡಿಕೊಳ್ತಾ ಇದ್ದಾರೆ. ಹಾಗಾಗಿ ಇವರು ಊಟ, ತಿಂಡಿ ನೀಡುವ ಸಮಯದಲ್ಲಿ ಒಂದೇ ವಸತಿ ನಿಲಯದಲ್ಲಿ ಇರೋದಕ್ಕೆ ಕಷ್ಟವಾಗುತ್ತಿದೆ. ಇಲಾಖೆಯ ನಿಯಮದ ಪ್ರಕಾರ ಒಂದು ರೂಮಿನಲ್ಲಿ 5 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಇರಬಾರದು. ಆದರೆ ಕೊಠಡಿ ಕೊರತೆಯಿಂದ ಒಂದು ರೂಮಿನಲ್ಲಿ 10 ರಿಂದ 15 ವಿದ್ಯಾರ್ಥಿಗಳು ವಾಸಿಸುವಂತಹ ಸ್ಥಿತಿ ಇದೆ. ಮಲಗಲು ಜಾಗವಿಲ್ಲದ ಪರಿಣಾಮ ವಿದ್ಯಾರ್ಥಿಗಳು ಹಾಸ್ಟೆಲ್ ಕಟ್ಟಡದ ಮಹಡಿಯಲ್ಲಿ, ಹೊರ ಆವರಣದಲ್ಲಿ ರಾತ್ರಿ ನಿದ್ರೆಮಾಡಬೇಕಿದೆ. ಮಳೆ, ಚಳಿ ಹೆಚ್ಚಾದರೆ ಎಲ್ಲರೂ ಒಂದೇ ಕೊಠಡಿಯಲ್ಲಿ ಕುರಿ ಹಿಂಡಿನಂತೆ ಮಲಗಬೇಕು. ಬೆಳಗ್ಗೆ ಎದ್ದರೆ ಶೌಚಾಲಯ, ಸ್ನಾನದ ಮನೆಯಲ್ಲಿ ಕ್ಯೂನಿಲ್ಲಬೇಕು.ಹೊಟ್ಟೆ ತುಂಬಾ ಊಟವಿಲ್ಲದೇ, ಕಣ್ ತುಂಬಾನಿದ್ರೆ ಇಲ್ಲದೇ ನೆಮ್ಮದಿಯ ಓದು ಎಂಬುದೇ ಹಾಸ್ಟೆಲ್‌ಗಳಲ್ಲಿ ಗಗನಕುಸುಮವಾಗಿದೆ ಎಂಬುದು ವಿದ್ಯಾರ್ಥಿಗಳ ಆರೋಪವಾಗಿದೆ.

ಸಮಸ್ಯೆಗಳನ್ನು ಹೊದ್ದು ಮಲಗಿರುವ ಹಾಸ್ಟೇಲ್:

ಇನ್ನೂ ಹಾಸ್ಟೇಲ್ ಊಟದ ವಿಚಾರಕ್ಕೆ ಬರುವುದಾದರೆ ಮೆಟ್ರಿಕ್ ಪೂರ್ವವ ಹಾಸ್ಟೇಲ್‌ಗೆ ಸರಕಾರ ಒಂದು ದಿನಕ್ಕೆ 1650 ರೂ ನೀಡಿದರೆ, ಮೆಟ್ರಿಕ್ ನಂತರದ ಹಾಸ್ಟೇಲ್ 1750 ರೂ ನೀಡುತ್ತದೆ. ಅಂದರೆ ದಿನವೊಂದಕ್ಕೆ 55 ರೂ ನಿಂದ 57 ರೂ ಮಾತ್ರ ಆಹಾರ ಭತ್ಯೆ ನೀಡಲಾಗುತ್ತಿದೆ. ಇಷ್ಟು ಹಣದಲ್ಲಿ ಗುಣಮಟ್ಟದ ಊಟ ಕೊಡಲು ಸಾಧ್ಯವೇ ಇಲ್ಲ. ಬೇಳೆ, ತರಕಾರಿ ಇಲ್ಲದ ಸಾಂಬಾರು, ಕಸ ಕಡ್ಡಿಯಿಂದ ಕೂಡಿದ ಮುಗ್ಗುನಾರುವ ಅಕ್ಕಿ, ಉಪ್ಪು ಹಾಕಿದರೆ ಉಪ್ಪಿಟ್ಟು, ಸಕ್ಕರೆ ಹಾಕಿದರೆ ಕೇಸರಿಬಾತ್ ಎನ್ನುವ ಸ್ಥಿತಿ ವಿದ್ಯಾರ್ಥಿಗಳದ್ದು.

ಪ್ರತಿ ಹಾಸ್ಟೇಲ್‌ನಲ್ಲೂ ವಿದ್ಯಾರ್ಥಿಗಳ ಅಧ್ಯಯನಕ್ಕೆ ಅನುಕೂಲವಾಗಲೆಂದು ಗ್ರಂಥಾಲಯಗಳನ್ನು ತೆರೆಯಬೇಕೆಂಬ ನಿಯಮ ಇದೆ. ಆದರೆ ಬಹುತೇಕ ಹಾಸ್ಟೇಲ್‌ಗಳಲ್ಲಿ ಗ್ರಂಥಾಲಯ ಸಿಗುವುದೆ ಇಲ್ಲ. ಇದು ವಿದ್ಯಾರ್ಥಿಗಳ ಅಧ್ಯಯನಕ್ಕೆ ಸಾಕಷ್ಟು ತೊಂದರೆಯಾಗುತ್ತಿದೆ. ರಾಜ್ಯದಲ್ಲಿರುವ ಬಹಳಷ್ಟು ಆಶ್ರಮ ಶಾಲೆಗಳಲ್ಲಿ ಶೌಚಾಲಯ ಸಮಸ್ಯೆಗಳಿವೆ. ಹೊದಿಕೆ, ಕಾಟ್ ನೀಡುವಲ್ಲಿಯೂ ಸರಕಾರ ಹಿಂದೇಟು ಹಾಕುತ್ತಿದೆ. ಮೆಟ್ರಿಕ್ ಪೂರ್ವ ಹಾಸ್ಟೇಲ್ ಮಕ್ಕಳಿಗೆ ನೀಡುವ ಪೇಸ್ಟ್, ಸೋಪ್, ಕೊಬ್ಬರಿ ಎಣ್ಣೆ ಸರಿಯಾಗಿ ವಿತರಿಸುತ್ತಿಲ್ಲ, ವಾರಕ್ಕೊಮ್ಮೆ ವೈದ್ಯಕೀಯ ತಪಾಸಣೆ ಮಾಡಬೇಕೆಂಬ ನಿಯಮ ಇದೆ. ಆದರೆ ಇದೂ ಯಾವ ಹಾಸ್ಟೇಲ್‌ನಲ್ಲಿಯೂ ಜಾರಿ ಇಲ್ಲ. ಖಾಸಗೀ ಬಿಲ್ಡಿಂಗ್ ನಲ್ಲಿ ಹಾಸ್ಟೇಲ್‌ಗಳು ನಡೆಯುತ್ತಿರುವ ಕಾರಣ ಸೌಲಭ್ಯಗಳ ಕೊರತೆ ಹೆಚ್ಚಾಗುತ್ತಲೇ ಇದೆ. ಹಾಸ್ಟೇಲ್‌ಗಳು ಶೈಕ್ಷಣಿಕ ತಾಣದ ಬದಲಾಗಿ ದನದ ದೊಡ್ಡಿಯಾಗುತ್ತಿರುವುದು ದುಃಖದ ವಿಚಾರವಾಗಿದೆ. ಹಾಸ್ಟೇಲ್‌ಗಳು ಹೇಗಿವೆ ಎಂಬುದಕ್ಕೆ ಯಾರೂ ಸರ್ವೇ ಮಾಡಬೇಕಿಲ್ಲ, ಯಾವುದಾದರೊಂದು ಹಾಸ್ಟೇಲ್‌ಗೆ ಭೇಟಿ ನೀಡದರೆ ಸಾಕು ಸಮಸ್ಯೆಗಳೇ ಎಲ್ಲವನ್ನೂ ಹೇಳಿಬಿಡುತ್ತವೆ ಎಂದು ಎಸ್‌ಎಫ್‌ಐ ರಾಜ್ಯಾಧ್ಯಕ್ಷ ಅಮರೇಶ್ ಕಡಗದ್ ಆರೋಪಿಸಿದ್ದಾರೆ.

ಇನ್ನೂ ಕೆಲ ಹಾಸ್ಟೇಲ್‌ಗಳಲ್ಲಿ ಟೆಂಡರ್ ಹೆಸರಿನಲ್ಲಿ ಅಕ್ರಮ ಪುಟ 7 ಕ್ಕೆ

ಹಾಸ್ಟೆಲ್‌ಗಳ ವಿವರ

ಇಲಾಖೆ	ಮೆಟ್ರಿಕ್ ಪೂರ್ವ	ವಿದ್ಯಾರ್ಥಿಗಳ ಸಂಖ್ಯೆ	ಮೆಟ್ರಿಕ್ ನಂತರ	ವಿದ್ಯಾರ್ಥಿಗಳ ಸಂಖ್ಯೆ
ಸಮಾಜ ಕಲ್ಯಾಣ ಇಲಾಖೆ	1237	91,454	0635	70,143
ಬಿಸಿಎಂ	1282	69,068	1156	1,58,768

ಒಟ್ಟು ಹಾಸ್ಟೆಲ್‌ಗಳ ಸಂಖ್ಯೆ	ಸ್ವಂತ ಕಟ್ಟಡ	ಬಾಡಿಗೆ ಕಟ್ಟಡ
ಸಮಾಜ ಕಲ್ಯಾಣ ಇಲಾಖೆ 1872	1022	0850
ಬಿಸಿಎಂ 2438	1407	1031

ಒಳ ಮೀಸಲಾತಿ ನ್ಯಾಯಕ್ಕಾಗಿ ಹೋರಾಟ

ಪರಿಶಿಷ್ಟ ಜಾತಿಯೊಳಗಿನ ಹೊಲೆಯ ಮಾದಿಗರ ಹೋರಾಟವಾಗಬಾರದು ಪರಿಶಿಷ್ಟ ಜಾತಿಯೊಳಗಿನ 101 ಜಾತಿ ಮತ್ತು ಪರಿಶಿಷ್ಟ ಪಂಗಡದ 54 ಜಾತಿಗಳಲ್ಲಿನ ವಂಚಿತವಾಗಿರುವವರಿಗೆ ಪ್ರಾತಿನಿಧ್ಯತೆಯ ಹೋರಾಟವಾಗಬೇಕು.

ಬಿ. ರಾಜಶೇಖರಮೂರ್ತಿ

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ರಾಜ್ಯ ಸಂಸ್ಥಾನ ಆಡಳಿತದಲ್ಲಿ ಬ್ರಾಹ್ಮಣೇತರರಿಗೆ ಶೇ. 75ರಷ್ಟು ಮೀಸಲಾತಿಯನ್ನು ನೀಡಲಾಗಿತ್ತು. ಆದರೆ ಯಾವ ಯಾವ ಜಾತಿಗಳಿಗೆ ಎಷ್ಟು ಎಂದು ವರ್ಗೀಕರಣ ಮಾಡಿರಲಿಲ್ಲ. ಸ್ವಾತಂತ್ರ್ಯಾ ನಂತರ 1950ರಲ್ಲಿ ಸಂವಿಧಾನವು ಜಾರಿಗೆ ಬಂದಾಗ ಪ. ಜಾ. ಮತ್ತು ಪ.ಪಂ.ಗಳನ್ನು ಒಟ್ಟಿಗೆ ಸೇರಿಸಿ ಶೇ.18ರಷ್ಟು ಮೀಸಲಾತಿಯನ್ನು ನೀಡಲಾಯಿತು. 1956ರಲ್ಲಿ ಭಾಷಾವಾರು ಪ್ರಾಂತ್ಯಗಳ ಮರು ವಿಂಗಡಣೆಯ ನಂತರ ಪ.ಜಾ.ಗೆ ಶೇ.15ರಷ್ಟು ಮತ್ತು ಪ.ಪಂ.ಕ್ಕೆ ಶೇ.3ರಷ್ಟು ಮೀಸಲಾತಿಯನ್ನು ಪ್ರತ್ಯೇಕವಾಗಿ ನೀಡಲಾಯಿತು. ಇತ್ತೀಚೆಗೆ ಪರಿಶಿಷ್ಟ ಜಾತಿಗೆ ಶೇ.17 ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.7 ಸದ್ಯದಲ್ಲಿ ಜಾರಿ ಇದೆ.

ಹಿಂದುಳಿದ ವರ್ಗಗಳಿಗೆ 1958ರಿಂದ ರಾಜ್ಯದಲ್ಲಿ ಮೀಸಲಾತಿಯನ್ನು ನೀಡಲಾಯಿತು. ಹಿಂದುಳಿದ ವರ್ಗಗಳ ಮೀಸಲಾತಿಯಲ್ಲಿ ಒಳ ಮೀಸಲಾತಿಯನ್ನು ಕಲ್ಪಿಸಿ ಪ್ರವರ್ಗ-1ಕ್ಕೆ ಶೇ.2, ಪ್ರವರ್ಗ-2ಎಗೆ ಶೇ. 16, ಪ್ರವರ್ಗ-2ಬಿಗೆ ಶೇ. 5, ಪ್ರವರ್ಗ-3ಎಗೆ ಶೇ. 4 ಮತ್ತು ಪ್ರವರ್ಗ-3ಬಿಗೆ ಶೇ. 5 ಎಂಬುದಾಗಿ ಮೀಸಲಾತಿ ನೀಡಲಾಗಿದೆ. ಹೀಗೆ ಕಾಲಕಾಲಕ್ಕೆ ರಾಜ್ಯದಲ್ಲಿ ಒಂದು ರೀತಿಯ ಒಳ ಮೀಸಲಾತಿಯನ್ನು ನೀಡುತ್ತಲೇ ಬರಲಾಗಿದೆ. ಇತ್ತೀಚೆಗೆ ಸಾಮಾನ್ಯ ವರ್ಗದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಕ್ಕೂ (ಇಡಬ್ಲೂಎಸ್)ಶೇ.10 ರಷ್ಟು ಮೀಸಲಾತಿಯನ್ನು ಜಾರಿಗೆ ತರಲಾಗಿದೆ.

ಹೀಗೆ ಮೀಸಲಾತಿ 75 ವರ್ಷಗಳಿಂದ ಹಂತ ಹಂತ ವಿಸ್ತಾರವಾಗುತ್ತಾ, ಜಾರಿಯಲ್ಲಿದೆ.

ಒಳ ಮೀಸಲಾತಿ ಹೋರಾಟ ಕೇವಲ ಪರಿಶಿಷ್ಟ ಜಾತಿಯೊಳಗಿನ ಬಲ(ಹೊಲೆಯ) ಎಡ (ಮಾದಿಗ) ಸಮುದಾಯಗಳೊಳಗಿನ ಕಿತ್ತಾಟವೆಂಬಂತೆ ಬಿಂಬಿಸುತ್ತಿದೆ. ವಾಸ್ತವವಾಗಿ ಒಳ ಮೀಸಲಾತಿ ಜಾರಿಯಾಗ ಬೇಕಾಗಿರುವುದು ಪರಿಶಿಷ್ಟ ಜಾತಿಯೊಳಗಿನ 101 ಜಾತಿಗಳ ಮತ್ತು ಪರಿಶಿಷ್ಟ ಪಂಗಡದ 54 ಜಾತಿಗಳಲ್ಲಿ ಶಿಕ್ಷಣ, ಉದ್ಯೋಗ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ವಂಚಿತವಾಗಿರುವವರ ಪ್ರಾತಿನಿಧ್ಯಕ್ಕಾಗಿ ಎಂಬುದನ್ನು "ಒಳ ಮೀಸಲಾತಿ ಹೋರಾಟ" ನಿರತರಿಗೆ ಮನದಟ್ಟಾಗಬೇಕು.

ಸಂವಿಧಾನದ ಅನುಚ್ಛೇದ 16ರಲ್ಲಿ "ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವ ವರ್ಗಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಮೀಸಲಾತಿಯನ್ನು ರಾಜ್ಯದ ಸೇವೆಗಳಲ್ಲಿ ಒದಗಿಸುವುದು" ಇದೇ ರೀತಿಯಲ್ಲಿ ಅನುಚ್ಛೇದ 46, ಅನುಚ್ಛೇದ 243, ಅನುಚ್ಛೇದ 330, ಅನುಚ್ಛೇದ 332 ಪ್ರಸ್ಥಾಪಿಸಿದಂತೆ, ಈ ಅನುಚ್ಛೇದಗಳ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಹಾಗೂ ರಾಜಕೀಯ ಮೀಸಲಾತಿಯನ್ನು ನೀಡಲಾಗಿದೆ. ಈ ಎಲ್ಲ ಅನುಚ್ಛೇದಗಳ ಪ್ರಕಾರ ಯಾರಿಗೂ ಯಾವುದೇ ರೀತಿಯ ತಾರತಮ್ಯ ತೋರುವಂತಿಲ್ಲ ಎಂದು ನಿರ್ದೇಶಿಸಿದೆ.

ಹೀಗೆ ಸಂವಿಧಾನ ಬದ್ಧವಾಗಿ, 75 ವರ್ಷಗಳಿಂದ ಮೀಸಲಾತಿ ಜಾರಿಯಲ್ಲಿದೆ. ಆದರೂ ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳು ಮತ್ತು ಪರಿಶಿಷ್ಟ ಪಂಗಡದ 52 ಜಾತಿಗಳು ಸೇರಿದಂತೆ ಎಲ್ಲಾ ಜನವರ್ಗಗಳಿಗೆ ಮೀಸಲಾತಿಯ ಸವಲತ್ತುಗಳು ತಲುಪಲೇ ಇಲ್ಲ. ಪರಿಶಿಷ್ಟ ಜಾತಿಯ ಒಂದೆರಡು ಬಲಾಢ್ಯ ಜಾತಿ ಮತ್ತು ಪರಿಶಿಷ್ಟ ಪಂಗಡದ ಒಂದೆರಡು ಜಾತಿಗಳು ಮಾತ್ರ ಮೀಸಲಾತಿಯಿಂದ ದೊರಕುವ ಶಿಕ್ಷಣ, ಉದ್ಯೋಗ, ಆರ್ಥಿಕ ಮತ್ತು ರಾಜಕೀಯ ಅವಕಾಶವನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಈ ವರ್ಗದ ತಳ ಸಮುದಾಯಗಳು ನಮ್ಮ ಪಾಲನ್ನು ನಮಗೆ ನೀಡಿ ಎಂಬ ಕೂಗು ದಿನೇ ದಿನೇ ಕೇಳಿ ಬರುತ್ತಿದೆ. ಈ ಕೂಗು ಇತರೆ ಹಿಂದುಳಿದ ವರ್ಗಗಳಲ್ಲೂ ಕೇಳಿ ಬರುತ್ತಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆ ಸಮುದಾಯಗಳಲ್ಲಿ ಶೇ.65 ಜನರಿಗೆ ವಾಸಿಸಲು ಯೋಗ್ಯವಾದ ವಸತಿ ಸೌಲಭ್ಯಗಳಿಲ್ಲದೆ ಇಂದಿಗೂ ಗುಡಿಸಲುಗಳಲ್ಲಿ ವಾಸಿಸುತ್ತಿರುವುದು ವಾಸ್ತವ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಅಲೆ ಸಮುದಾಯಗಳಲ್ಲಿ ಶೇ.80ರಷ್ಟು ಜನರಿಗೆ ಯಾವುದೇ ರೀತಿಯಾದ ಭೂಮಿಯ ಒಡೆತನವಿಲ್ಲ. ಇವೆರಲ್ಲರೂ ಬಹುತೇಕ ಕೂಲಿ ಕಾರ್ಮಿಕರಾಗಿದ್ದಾರೆ. ಈ ಸಮುದಾಯಗಳಲ್ಲಿ ಶಿಕ್ಷಣ ಪಡೆದಿರುವವರ ಪ್ರಮಾಣ ಅತಿ ಕಡಿಮೆ ಇದೆ. ಉದಾ; ಪರಿಶಿಷ್ಟ ಜಾತಿಯ ದಕ್ಕಲಿಗ, ಸಿಂಧೋಳ್, ಗೋಸಂಗಿ, ಕೊರಚ ಹಾಗೂ ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಜೇನುಕುರುಬ, ಮಲೆಕುಡಿಯ, ಯರವ, ಹಸಲರು ಮುಂತಾದ ಹಲವು ಜಾತಿಗಳ ಸಮುದಾಯಗಳಿಗೆ ಯಾವುದೇ ರೀತಿಯ ಮೀಸಲಾತಿಯ ಸೌಲಭ್ಯಗಳನ್ನು ದಕ್ಕಿಸಿಕೊಳ್ಳವ ಸಾಮರ್ಥ್ಯವು ವಿಲ್ಲ. ಇದೇ ರೀತಿಯಲ್ಲಿ ದೇವದಾಸಿಯರು, ಸಫಾಯಿ ಕರ್ಮಚಾರಿಗಳು ಮತ್ತು ಕೊಳಚೆ ಪ್ರದೇಶ ನಿವಾಸಿಗಳು ಸಹ ಮೀಸಲಾತಿ ಸವಲತ್ತುಗಳನ್ನು ಪಡೆಯಲಾಗುತ್ತಿಲ್ಲ. ಇವರ ಮಕ್ಕಳ ಶೈಕ್ಷಣಿಕ ಮಟ್ಟ ಬಹಳ ಕಡಿಮೆ ಇದೆ. ತತ್ಪರಿಣಾಮವಾಗಿ ಉನ್ನತ ಶಿಕ್ಷಣವಿಲ್ಲ. ಮತ್ತು ಸರ್ಕಾರಿ ಉದ್ಯೋಗವಿಲ್ಲ. ಅಪ್ಪಿ ತಪ್ಪಿ ಕೆಲವರು ಉನ್ನತ ಶಿಕ್ಷಣ ಪಡೆದಿದ್ದರೂ ಸಹ ಈ ವರ್ಗದ ಸಮುದಾಯಗಳು ಬಲಿಷ್ಠ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಜೊತೆ ಸ್ಪರ್ಧೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ವರ್ಗದ ಅನೇಕ ಸಣ್ಣ ಜಾತಿಗಳಿಗೆ ಗ್ರಾಮ ಪಂಚಾಯಿತಿ ಸದಸ್ಯರಾಗಿಯೂ ಚುನಾವಣೆಗಳಲ್ಲಿ ಗೆಲ್ಲಲಿಲ್ಲ. ಕಳೆದ 75 ವರ್ಷಗಳಿಂದ ಮೀಸಲಾತಿ ಜಾರಿಯಲ್ಲಿ ಇದ್ದರೂ ಸಹ ಈ ಸವಲತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಲೆ ಮಾರಿಗಳಿಗೆ, ಅರೆ ಅಲೆಮಾರಿಗಳಿಗೆ, ಆದಿವಾಸಿಗಳಿಗೆ, ದೇವದಾಸಿಯರಿಗೆ, ಕೊಳಚೆ ನಿವಾಸಿಗಳಿಗೆ ಮತ್ತು ಸಫಾಯಿ ಕರ್ಮಚಾರಿಗಳಿಗೆ ಹಾಗೂ ಅನೇಕ ಸಣ್ಣ ಸಣ್ಣ ಹಿಂದುಳಿದ ಜಾತಿಗಳಿಗೆ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳಾಗಲೀ, ಕಲ್ಯಾಣ ಕಾರ್ಯಕ್ರಮಗಳಾಗಲೀ, ಮೀಸಲಾತಿಯ ಸೌಲಭ್ಯಗಳಾಗಲೀ ಪೂರ್ಣ ಪ್ರಮಾಣದಲ್ಲಿ ತಲುಪಿಲ್ಲ. ಇಂದಿಗೂ ಅನೇಕರು ಭಿಕ್ಷಾಟನೆ ಮೂಲಕ ಬದುಕನ್ನು ಸಾಗಿಸುತ್ತಿರುವ ದುಸ್ಥಿತಿಯೂ ಇದೆ. ಉದಾ:ನಗರ ಪ್ರದೇಶಗಳಲ್ಲಿನ ಸಿಗ್ನಲ್ ಗಳಲ್ಲಿ ವೇಷಧಾರಿಗಳಾಗಿ ಬಿಕ್ಷಾಟನೆಯಲ್ಲಿರುವುದನ್ನು ಕಾಣುತ್ತೇವೆ.

ಹೀಗೆ ಇನ್ನೂ ಸಹಸ್ರಾರು ಜನರು ಮೀಸಲಾತಿ ಸೌಲಭ್ಯಗಳಿಂದ ವಂಚಿತರಾಗಿ ಭಿಕ್ಷೆಬೇಡಿ ಜೀವನ ನಡೆಸುತ್ತಿದ್ದಾರೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಈ ಮೀಸಲಾತಿ ನೀತಿಯಿಂದ ತಮಗೆ ನಿರಂತರವಾದ ಬಡತನವನ್ನು ಬಿಟ್ಟು ಬೇರೇನೂ ಸಿಕ್ಕುವುದಿಲ್ಲ ಎಂಬ ಆತಂಕ ಹೆಚ್ಚಾಗುತ್ತದೆ. ಇಂತಹ ಪರಿಸ್ಥಿತಿ ಸಂವಿಧಾನದ ಮೂಲ ಆಶಯಗಳಾದ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ತತ್ವಕ್ಕೆ ವಿರುದ್ಧವಾದದ್ದು. ಇದರಿಂದ ಈ ಜಾತಿಗಳಲ್ಲಿ ಆಂತರಿಕ ಘರ್ಷಣೆಗೆ ಕಾರಣವಾಗಬಹುದು. ಇವರಲ್ಲಿ ಹುಟ್ಟಿಕೊಂಡಿರುವ ಅಸಮಧಾನದತ್ತ ಗಮನಹರಿಸದಿದ್ದರೆ ಇವರ ಒಗ್ಗಟ್ಟಿಗೆ ಧಕ್ಕೆಯಾಗುವುದರಲ್ಲಿ ಸಂದೇಹವಿಲ್ಲ. ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಈ ವರ್ಗದ ಉತ್ತಮ ಸ್ಥಿತಿಯಲ್ಲಿ ಇರುವವರು, ತಮಗಿಂತ ಹೆಚ್ಚು ವಂಚಿತರಾದವರ ಬೇಡಿಕೆಯು ನ್ಯಾಯಯುತವಾದುದೆಂದು ಒಪ್ಪಿಕೊಂಡು ಒಳ ಮೀಸಲಾತಿಗೆ ತಮ್ಮ ಸಮ್ಮತಿಯನ್ನು ನೀಡುವ ಮುಖಾಂತರ ಶೋಷಿತ ಸಮುದಾಯಗಳ ಒಗ್ಗಟ್ಟನ್ನು ರಕ್ಷಿಸಬೇಕು. 2012ರಲ್ಲಿ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗ ಪರಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಸಿದೆ. 10 ವರ್ಷ ಕಳೆದರೂ ಅಧಿಕಾರಕ್ಕೆ ಬಂದೋಗುವ ಯಾವ ಸರ್ಕಾರಗಳು ಪರಿಶೀಲನೆ ಮಾಡುತ್ತಿಲ್ಲ. ವರದಿ ಕೇವಲ ಪರಿಶಿಷ್ಟ ಜಾತಿಗೆ ಸಂಬಂಧಿಸಿದ್ದಾಗಿದೆ. ಅಲ್ಲದೆ ಹಲವಾರು ಪ್ರಶ್ನೆಗಳಿಗೆ ಎಡೆ ಮಾಡಿಕೊಟ್ಟಿದೆ ಎಂಬ ಅಭಿಪ್ರಾಯವು ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಆ ವರಿದಿಯನ್ನು ಪರಿಶೀಲಿಸಿ ತಕ್ಷಣವೇ ಆಳುವ ಸರ್ಕಾರಗಳು ಅಗತ್ಯ ಬಿದ್ದರೆ ನೂತನ ಆಯೋಗವನ್ನು ರಚಿಸಿ ವೈಜ್ಞಾನಿಕವಾಗಿ ಅಧ್ಯಯನ ನಡೆಸುವಂತಾಗಬೇಕು. ಈ ಮುಖಾಂತರವೂ ಕೂಡಾ ಮೀಸಲಾತಿಯ ವ್ಯವಸ್ಥೆಯನ್ನು ಗಟ್ಟಿಗೊಳಿಸುವಂತಹ ರೀತಿಯಲ್ಲಿ ಪುನರ್ ರೂಪಿಸುವ ಅಗತ್ಯವಿದೆ.



2012ರಲ್ಲಿ ನ್ಯಾಯಮೂರ್ತಿ ಎ. ಜೆ.ಸದಾಶಿವ ಆಯೋಗ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ವಿಚಾರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದೆ. 10 ವರ್ಷ ಕಳೆದರೂ ಅಧಿಕಾರಕ್ಕೆ ಬಂದೋಗುವ ಯಾವ ಸರ್ಕಾರಗಳು ಪರಿಶೀಲನೆ ಮಾಡುತ್ತಿಲ್ಲ. ವರದಿ ಕೇವಲ ಪರಿಶಿಷ್ಟ ಜಾತಿಗೆ ಸಂಬಂಧಿಸಿದ್ದಾಗಿದೆ. ಅಲ್ಲದೆ ಹಲವಾರು ಪ್ರಶ್ನೆಗಳಿಗೆ ಎಡೆ ಮಾಡಿಕೊಟ್ಟಿದೆ ಎಂಬ ಅಭಿಪ್ರಾಯವು ಇದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಆ ವರದಿಯನ್ನು ಪರಿಶೀಲಿಸಿ ತಕ್ಷಣವೇ ಆಳುವ ಸರ್ಕಾರಗಳು ಅಗತ್ಯ ಬಿದ್ದರೆ ನೂತನ ಆಯೋಗವನ್ನು ರಚಿಸಿ ವೈಜ್ಞಾನಿಕವಾಗಿ ಅಧ್ಯಯನ ನಡೆಸುವಂತಾಗಬೇಕು.

ಒಳ ಮೀಸಲಾತಿ ಹೋರಾಟವನ್ನು ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಲಾಭ ನಷ್ಟದಲ್ಲೇ ಲೆಕ್ಕಚಾರ ಹಾಕುತ್ತಿವೆ. ಬಿಜೆಪಿಯು ಆರಂಭದಿಂದಲೂ ದಲಿತ-ಹಿಂದುಳಿದ ಸಮುದಾಯಗಳನ್ನು ಒಡೆದು ಆಳುವ ಕುತಂತ್ರಿಗಳ ನೀತಿಯನ್ನೇ ಅನುಸರಿಸುತ್ತಾ ಬರುತ್ತಿದೆ. ಒಳ ಮಿಸಲಾತಿ ಹೋರಾಟ ಕೇವಲ ಪರಿಶಿಷ್ಟ ಜಾತಿಯೊಳಗಿನ ಬಲ(ಹೊಲೆಯ) ಎಡ (ಮಾದಿಗ) ಸಮುದಾಯಗಳೊಳಗಿನ ಕಿತ್ತಾಟವೆಂಬಂತೆ ಬಿಂಬಿಸುತ್ತಿದೆ. ವಾಸ್ತವವಾಗಿ ಒಳ ಮೀಸಲಾತಿ ಜಾರಿಯಾಗಬೇಕಾಗಿರುವುದು ಪರಿಶಿಷ್ಟ ಜಾತಿಯೊಳಗಿನ 101 ಜಾತಿಗಳ ಮತ್ತು ಪರಿಶಿಷ್ಟ ಪಂಗಡದ 54 ಜಾತಿಗಳಲ್ಲಿ ಶಿಕ್ಷಣ, ಉದ್ಯೋಗ, ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕವಾಗಿ ವಂಚಿತವಾಗಿರುವವರ ಪ್ರಾತಿನಿಧ್ಯಕ್ಕಾಗಿ ಎಂಬುದನ್ನು "ಒಳ ಮೀಸಲಾತಿ ಹೋರಾಟ" ನಿರತರಿಗೆ ಮನದಟ್ಟಾಗಬೇಕು. ಈ ಎಲ್ಲ ಕಾರಣಗಳಿಂದ 'ಮೀಸಲಾತಿಯೊಳಗೆ ಮೀಸಲಾತಿ' ಅಥವಾ 'ಒಳಮೀಸಲಾತಿ'ಯ ಅಗತ್ಯವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೆಲ ಬಲಾಢ್ಯ ಜಾತಿ ರಾಜಕೀಯ ನಾಯಕರು ಸೇರಿದಂತೆ ಅವರ ಬೆಂಬಲಿಗರಾದ ಕೆಲ ತಾತ್ವಿಕ ಚಿಂತನೆ ಇಲ್ಲದ ದಲಿತ ಸಂಘಟನೆಗಳು, ಸ್ವಹಿತ ಶಕ್ತಿಗಳಾದ ಕೆಲ ಪ್ರಗತಿಪರರೆನ್ನಿಸಿಕೊಂಡವರು ಒಳ ಮೀಸಲಾತಿಯನ್ನ ವಿರೊಧಿಸುತ್ತಾರೆ. ಒಳಮೀಸಲಾತಿಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿಭಜನಾತ್ಮಕವಲ್ಲ. ದಲಿತ ಸಮುದಾಯಗಳ ಒಗ್ಗಟ್ಟನ್ನು ಇದು ಹಾಳು ಮಾಡುತ್ತದೆ ಎಂಬುದು ಒಂದು ಭ್ರಮೆ. ಇದನ್ನು ಮಿಸಲಾತಿ ವಿರೋಧಿಗಳು ಹುಟ್ಟು ಹಾಕಿರುವ ಒಂದು ವಿಕೃತಿ.

ಇದರ ಬಗ್ಗೆ ಪ್ರಜ್ಞಾವಂತ ಸಮಾಜ ಗಂಭೀರವಾಗಿ ಚಿಂತಿಸಬೇಕಾಗಿದೆ. ಮೀಸಲಾತಿಗೆ ಸಂಬಂಧಿಸಿದ ಚರ್ಚೆಯಲ್ಲಿ ಈ ವಂಚಿತರಿಗೆ ಮೀಸಲಾತಿಯನ್ನು ತಲುಪಿಸುವುದರ ಬಗ್ಗೆ ಮೊದಲನೇ ಆದ್ಯತೆ ಸಿಗಬೇಕಾಗಿದೆ. ಸರ್ಕಾರಗಳು ರಾಜಕೀಯ ಇಚ್ಛಾಶಕ್ತಿಯನ್ನು ತೋರಿ ಈ ದೌರ್ಭಾಗ್ಯರಿಗೆ ಮೀಸಲಾತಿ ಸವಲತ್ತನ್ನು ತಲುಪಿಸುವ ಕಾನೂನುಗಳನ್ನು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಜಾರಿಗೆ ತರಬೇಕಾಗಿದೆ. ಈ ಬಗ್ಗೆ ಜನಪರ ಚಳವಳಿಗಳು ಜನಾಂದೋಲನವನ್ನು ರೂಪಿಸುವ ಮುಖಾಂತರ "ಮೀಸಲಾತಿಯೊಳಗಿನ ಒಳಮೀಸಲಾತಿ ವಿಭನೆಯಲ್ಲ, ಆಗೋಚರವಾಗಿಯೇ ಅತಿ ಹಿಂದುಳಿದವರಿಗೆ ಪ್ರಾತಿನಿಧ್ಯತೆಯಾಗಿದೆ ಎಂಬುದನ್ನು ಮನವರಿಕೆ ಮಾಡಿಕೊಡಬೇಕಾಗಿದೆ.



ಬೆಂಗಳೂರು ದುಡಿಯುವ ವರ್ಗದ ಕೇಂದ್ರ: ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್

ವರದಿ: ವಿನೋದ ಶ್ರೀರಾಮಪುರ

ಬಂಡವಾಳ ಕೇಂದ್ರೀತ, ಅಪರಾಧ ಕೇಂದ್ರೀತ, ಕೋಮುವಾದಿ ಕೇಂದ್ರೀತ ಬೆಂಗಳೂರು ನಿಜವಾಗಿಯೂ ದುಡಿಯುವ ವರ್ಗ ಕೇಂದ್ರೀತ ನಗರವಾಗಿದೆ. ಜನವಿರೋಧಿ–ದೇಶವಿರೋಧಿ ನೀತಿಗಳನ್ನು ಜನತೆಯ ನಡುವೆ ಕೊಂಡ್ಯೊಯ್ಯುವ ಜನರ ಐಕ್ಯತೆಯನ್ನು ಎತ್ತಿಹಿಡಿಯುವ ಮೂಲಕ ಸಿಐಟಿಯು ದುಡಿಯುವ ವರ್ಗದೊಂದಿಗೆ ಕೆಲಸ ಮಾಡುತ್ತಿದೆ ಎಂದು ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು), ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿ ಕಛೇರಿ ?ಜ್ಯೋತಿಬಸು ಭವನ? ನವೀಕೃತಗೊಂಡ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಅವರು, ನವೀಕೃತಗೊಂಡ ಕಟ್ಟಡ ಉದ್ಘಾಟನೆಗೊಳ್ಳುವುದೆಂದರೆ, ಸಿಐಟಿಯು ಸಂಘಟನೆಯು ಕಾರ್ಮಿಕರ ನಡುವೆ ತನ್ನ ಚಟುವಟಿಕೆಯನ್ನು ವಿಸ್ತರಿಸಿಕೊಂಡಿದೆ ಎಂಬುದು. ಕಾಮ್ರೇಡ್ ಜ್ಯೋತಿಬಸು ಅವರು, ಸಿಐಟಿಯು ಆರಂಭದಿಂದ ಉಪಾಧ್ಯಕ್ಷರಾಗಿ ಮತ್ತು ಸಂಘಟಿತ ಕಾರ್ಮಿಕರೊಂದಿಗೆ, ರಾಜಕೀಯದೊಂದಿಗೂ ತಮ್ಮ ತಾವು ತೊಡಗಿಸಿಕೊಂಡವರು. ಬೆಂಗಳೂರು ಕಾರ್ಮಿಕ ವರ್ಗದ ಕೇಂದ್ರವಾಗಿ ವಿಸ್ತರಣೆಗೊಳ್ಳುತ್ತಿದೆ. ಆ ಮೂಲಕ ಸಂಘಟನಾತ್ಮಕ ಹೋರಾಟಕ್ಕೆ ಮಾರ್ಗದರ್ಶನ ಕೇಂದ್ರವಾಗಿ ಈ ಕಟ್ಟಡವೂ ವಿಸ್ತರಣೆಗೊಂಡಿದೆ. ಸಿಐಟಿಯು ಸಂವಿಧಾನವು ಆಳುವ ವರ್ಗದ ಜನ ವಿರೋಧಿ ನೀತಿಗಳನ್ನು, ಶೋಷಣಾ ಸಮಾಜ ವ್ಯವಸ್ಥೆಯನ್ನು ಸೋಲಿಸುವುದರ ಮೂಲಕ ಕಾರ್ಮಿಕ ವರ್ಗದ ರಾಜಕೀಯ ಗುರಿಯನ್ನು ಸಾಧಿಸುವುದಾಗಿದೆ ಎಂದರು.

2023ರ ಜನವರಿಯಲ್ಲಿ ನಡೆಯಲಿರುವ ಸಿಐಟಿಯು ಅಖಿಲ ಭಾರತ ಸಮ್ಮೇಳನ ನಡೆಯುತ್ತಿದ್ದು, ಜನರ ಹಕ್ಕುಗಳನ್ನು ಬಲಪಡಿಸುವುದರೊಂದಿಗೆ, ದೈನಂದಿನ ಪ್ರಶ್ನೆಗಳಿಗೆ ಸ್ಪಂದಿಸುವ ಮೂಲಕ ದೇಶದ ಜನ ವಿಭಾಗವನ್ನು ಉಳಿಸುವ ಕಾರ್ಯದಲ್ಲಿ ಸಿಐಟಿಯು ತೊಡಗಿಸಿಕೊಂಡಿದೆ. ಕಳೆದ ವರ್ಷ ಜಂಟಿ ವೇದಿಕೆಯ ಮೂಲಕ ಹಮ್ಮಿಕೊಂಡ ಎರಡು ದಿನದ ಅಖಿಲ ಭಾರತ ಮುಷ್ಕರವು ಕೋಮುವಾದಿ–ಕಾರ್ಪೊರೇಟ್ ಕೇಂದ್ರೀತ ಸಖ್ಯತೆಯನ್ನು ಬಯಲಿಗೆಳೆಯುವಂತ ಕಾರ್ಯವನ್ನು ಮತ್ತಷ್ಟು ಮುಂದಕ್ಕೆ ಒಯ್ಯಲಾಯಿತು. ಆಳುವ ವರ್ಗದ ಜನ ವಿರೋಧಿ ನೀತಿಗಳನ್ನು ಸೋಲಿಸುವುದು ಅವಶ್ಯಕವಾಗಿದೆ. ದುಡಿಯುವ ವರ್ಗಕ್ಕೆ ನಮ್ಮ ವೈರಿ ಯಾರೆಂಬುದನ್ನು ತಿಳಿಸುವಂತಾಗಬೇಕು. ಈ ಕೇಂದ್ರವು ಅದಕ್ಕೆ ಕೆಲಸ ಮಾಡುತ್ತದೆ ಎದರು.

ರಾಜ್ಯ ರಾಜಕೀಯ ಚಟುವಟಿಕೆಯ ಪ್ರಮುಖ ಕೇಂದ್ರ ಬೆಂಗಳೂರು. ಇಲ್ಲಿ ಸಿಐಟಿಯು ಅಖಿಲ ಭಾರತ ಸಮ್ಮೇಳನ ಹಮ್ಮಿಕೊಂಡಿರುವುದು ದೊಡ್ಡ ಸವಾಲೇ. ಸಮ್ಮೇಳನವನ್ನು ರಾಜ್ಯದ ಎಲ್ಲಾ ಕಡೆಗಳಲ್ಲಿ ಕೊಂಡೊಯ್ಯುವ ಮೂಲಕ ಉತ್ತಮ ರೀತಿಯ ಬೆಳವಣಿಗೆಯಾಗುತ್ತಿದೆ. ಸಂದೇಶದ ತೆಗೆದುಕೊಂಡು ಹೋಗುವುದೆಂದರೆ, ಸಮ್ಮೇಳನ ಯಶಸ್ಸಿಗೆ ಮುನ್ನಡೆಯಾಗಿದೆ. ನಿಧಿ ಸಂಗ್ರಹ ಮಾಡುವ ಮೂಲಕ ಜನರ ಬಳಿಗೆ ಸಂಘಟನೆ ತಲುಪಿಸಲಾಗುತ್ತಿದೆ.

ಕಾರ್ಮಿಕರು ಮತ್ತು ರೈತರ ಸಖ್ಯತೆಯೊಂದಿಗೆ ಕಳೆದ ಸೆಪ್ಟಂಬರ್ 05ರಂದು ದೆಹಲಿಯಲ್ಲಿ ಹಮ್ಮಿಕೊಂಡಿದ್ದ ಸಮಾವೇಶವು ಜನರ ಹಕ್ಕುಗಳ ರಕ್ಷಣೆಗಾಗಿ 2023ರ ಏಪ್ರಿಲ್ 05ರಂದು ಜಂಟಿ ಹೋರಾಟಕ್ಕೆ ಕರೆ ನೀಡಲಾಗಿದೆ. ಇದರಲ್ಲಿ ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರನ್ನು ದೊಡ್ಡ ಪ್ರಮಾಣದಲ್ಲಿ ಅಣಿನೆರೆಸುವ ಕೆಲಸ ಆಗಬೇಕಾಗಿದೆ. ಈ ಹಿಂದೆ ದೆಹಲಿಯಲ್ಲಿ ಜರುಗಿದ ರೈತ–ಕಾರ್ಮಿಕರ ಸಖ್ಯತೆಯ ಜಂಟಿ ಹೋರಾಟದಲ್ಲಿ 1.80 ಲಕ್ಷ ಜನ ಅಣಿನೆರೆದಿದ್ದರು. ಇದೀಗ ಮತ್ತೆ ಮುಂಬರುವ 2023, ಸೆಪ್ಟಂಬರ್ 05ರ ಹೋರಾಟದಲ್ಲಿಯೂ 3 ಲಕ್ಷಕ್ಕೂ ಹೆಚ್ಚಿನ ಜನರನ್ನು ಅಣಿನೆರೆಸುವ ಕೆಲಸ ಆಗಬೇಕಿದೆ. ಇದರಲ್ಲಿ ಕರ್ನಾಟಕದ ದುಡಿಯುವ ವರ್ಗದ ಪಾತ್ರವೂ ಮಹತ್ವದ್ದಾಗಿದೆ. ಆ ಮೂಲಕ ಕೋಮುವಾದಿ–ಕಾರ್ಪೊರೇಟ್ ಕೇಂದ್ರೀತ ಸಖ್ಯತೆಯನ್ನು ಸೋಲಿಸುವ ಗುರಿ ಸಾಧಿಸಬೇಕು ಎಂದು ಹೇಳಿದರು.

ರೈತ–ಕಾರ್ಮಿಕರ ನಡುವಿನ ಹೋರಾಟ ಬಲಪಡಿಸಲು, ವ್ಯಾಪಾಕ ಪ್ರಚಾರವನ್ನು ಕೈಗೊಳ್ಳಲು ಜ್ಯೋತಿಬಸು ಭವನ ದೊಡ್ಡ ಪಾತ್ರವನ್ನು ನಿರ್ವಹಿಸಲಿದೆ ಎಂದು ಹೇಳಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮಾತನಾಡಿ, ಜ್ಯೋತಿ ಬಸು ಭವನ ಈ ಹಿಂದೆ ಬ್ಯಾಂಕ್ ನೌಕರರ ಸಂಘಟನೆಯಾದ ಕರೂರ್ ವೈಶ್ಯ ಬ್ಯಾಂಕ್ ಯೂನಿಯನ್ ನ ಕಟ್ಟಡವಾಗಿತ್ತು. ಅವರು ಕಟ್ಟಡವನ್ನು ಮಾರಾಟ ಮಾಡಬೇಕಾದ ಸಂದರ್ಭ ಎದುರಾದಾಗ, ಇದನ್ನು ಕಾರ್ಮಿಕ ವರ್ಗಕ್ಕೆ ಮೀಸಲಾಗಿರುವಂತೆ ನಿಶ್ಚಯಿಸಿದರು. ಅಂದು ಅವರು ಕಟ್ಟಡವನ್ನು ಸಿಐಟಿಯು ಸಂಘಟನೆಗೆ ಅತಿ ಕಡಿಮೆ ಬೆಲೆಗೆ ಮಾರಾಟ ಮಾಡಿದರು. ಅವರ ಈ ಕಾರ್ಯ ಸ್ಮರಿಸಿವುದು ಅವಶ್ಯವಾಗಿದೆ. ಬ್ಯಾಂಕ್ ನೌಕರರ ಅಂದುಕೊಂಡಂತೆ ನಿರೀಕ್ಷೆಗೂ ಮೀರಿ ಇಂದು ಕಾರ್ಮಿಕರ ನಡುವೆ ಸಂಘಟನೆ ವಿಸ್ತರಿಸಿಕೊಳ್ಳುವ ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂದರು.

ಸಿಐಟಿಯು ಸಂಘಟನೆಗೆ ಬಹಳ ವರ್ಷಗಳ ಕಾಲ ತನ್ನದೇ ಆದ ಸ್ವಂತ ಕಟ್ಟಡವಿರಲಿಲ್ಲ. ಇಂದು ಕೆಆರ್ ಪುರದಲ್ಲಿ ಸೂರಿ ಭವನ, ಸಂಪಂಗಿರಾಮನಗರದಲ್ಲಿ ಸೂರಿ ಭವನ, ಬಸವನಗುಡಿಯಲ್ಲಿ ಜ್ಯೋತಿಬಸು ಭವನ ಕಾರ್ಯವನ್ನು ನಿರ್ವಹಿಸುತ್ತಿದೆ. ಆ ಮೂಲಕ ರಾಜ್ಯದಲ್ಲಿ ಸಿಐಟಿಯು ವಿಸ್ತಾರವಾಗುತ್ತಿದೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ಎಲ್ಲಾ ಚಟುವಟಿಕೆಗಳು ಸ್ತಬ್ಧಗೊಂಡ ಸಂದರ್ಭದಲ್ಲಿ ಸಿಐಟಿಯು ಸಂಘಟನೆ ಮುಂಚೂಣಿಯಾಗಿ ಮಧ್ಯಪ್ರವೇಶ ಮಾಡುವ ಮೂಲಕ ಬಿಡುವಿಲ್ಲದಂತೆ ತೊಡಗಿಸಿಕೊಂಡಿದೆ. ಕಾರ್ಮಿಕರ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವಲ್ಲ, ಬದಲಾಗಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಪರಿಹಾರಗಳನ್ನು ನೀಡುವ ಕೆಲಸ ಮಾಡಲಾಗಿದೆ. ಮೆಡಿಕಲ್ ಕಿಟ್ ನೀಡುವುದು, ಆರೋಗ್ಯ ಸಂಬಂಧಿಸಿ ಸಲಹೆಗಳನ್ನು ನೀಡುವುದು, ಮಾನಸಿಕ ಧೈರ್ಯವನ್ನು ತುಂಬುವ ಕೆಲಸವನ್ನು ಮಾಡಲಾಗಿದೆ. ಆಮ್ಲಜನಕ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಕೇಂದ್ರ ಸ್ಥಾಪಿಸಲಾಯಿತು. ನಂತರದ ದಿನಗಳಲ್ಲಿ ಶ್ರಮಿಕರ ಕ್ಲಿನಿಕ್ ಆರಂಭ ಮಾಡಿ ಅತಿ ಹೆಚ್ಚಿನ ಜನರು ಕೇಂದ್ರಕ್ಕೆ ಬರುವಂತ ಮಾಡಲಾಗಿದೆ ಎಂದರು.

ಬೆಂಗಳೂರಿನಲ್ಲಿ ಸಿಐಟಿಯು 17ನೇ ಅಖಿಲ ಭಾರತ ಸಮ್ಮೇಳನ ಜರುಗುತ್ತಿದ್ದು, ಸಮ್ಮೇಳನವನ್ನು ಯಶಸ್ಸಿನೊಂದಿಗೆ ದುಡಿಯುವ ವರ್ಗ ರಾಜಕೀಯ ಶಕ್ತಿಯನ್ನು ಬಲಪಡಿಸುವ ಕಾರ್ಯವೂ ಆಗಬೇಕಾಗಿದೆ. ರಾಜಕೀಯ ಬದಲಾವಣೆಯ ಗುರಿಯೆಡೆ ಮುನ್ನಡೆಯಬೇಕಿದೆ. ಸಮ್ಮೇಳನದ ಅಂಗವಾಗಿ ಬೆಂಗಳೂರಿನಲ್ಲಿ ಬೀದಿಬದಿ ನಿಧಿ ಸಂಗ್ರಹ ಮಾಡಲಾಗಿದೆ. ಆ ಮೂಲಕ ಪ್ರಚಾರ ಹುರುಪುಪಡೆದುಕೊಂಡಿದೆ. ಜನವರಿ 22ರಂದು ಅಖಿಲ ಸಮ್ಮೇಳನ ಅಂಗವಾಗಿ ನಡೆಯಲಿರುವ ಬೃಹತ್ ಬಹಿರಂಗ ಸಭೆಗೆ ಕೆಂಪು ಸೈನ್ಯವನ್ನು ಅಣಿನೆರೆಸಿ ರಾಜಕೀಯ ಸಂದೇಶ ರವಾನಿಸುವ ಕೆಲಸ ಆಗಬೇಕಾಗಿದೆ. ನಮ್ಮ ಶತ್ರುಗಳಿಗೆ ದುಡಿಯುವ ಜನರ ರಾಜಕೀಯ ಶಕ್ತಿ ಮರಳಿ ಬರುವ ಕೆಲಸ ಆಗಬೇಕಾಗಿದೆ ಎಂದು ಹೇಳಿದರು.

ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿ ಕೆ.ಎನ್.ಉಮೇಶ್ ಮಾತನಾಡಿ, ಜ್ಯೋತಿ ಬಸು ಉದ್ಘಾಟನೆಗೊಳ್ಳುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಒಂದೇ ಜಿಲ್ಲಾ ಸಮಿತಿ ಇತ್ತು. ಇಂದು ಬೆಂಗಳೂರು ಉತ್ತರ, ದಕ್ಷಿಣ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಾಗಿ ನಾಲ್ಕು ಜಿಲ್ಲಾ ಸಮಿತಿಗಳು ಕಾರ್ಯನಿರ್ವಹಿಸುತ್ತಿವೆ. ಇಲ್ಲಿ ನಡೆಯುವ ಕಡಲೆಕಾಯಿ ಪರಿಷೆ ಸಂದರ್ಭದಲ್ಲಿ ಒಮ್ಮೆ ಕಾರ್ಮಿಕರು ಕಛೇರಿಗೆ ಭೇಟಿ ನೀಡಿದ್ದರು. ಅವರೊಂದಿಗೆ ಅವರ ಮಕ್ಕಳು ಸಹ ಭೇಟಿ ನೀಡಿದ್ದಾಗ 'ಇದು ನಮ್ಮಪ್ಪನ ಆಫೀಸ್' ಎಂದರು. ಅಂದರೆ, ಇದು ಯಾರ ಒಬ್ಬರ ಕಛೇರಿಯಲ್ಲ ದುಡಿಯುವ ವರ್ಗದ ಎಲ್ಲಾ ಜನರ ಕಛೇರಿಯಾಗಿದೆ. ಕೋವಿಡ್ ಸಂದರ್ಭದಲ್ಲಿ ಕೆಲಸ ಅನುಭವದ ಆಧಾರದಲ್ಲಿ ನಂತರದ ದಿನಗಳಲ್ಲಿ ಕಳೆದ ವರ್ಷ ಅಕ್ಟೋಬರ್ ಸಮಯದಲ್ಲಿ ಈ ಕಛೇರಿಯನ್ನು ವಿಸ್ತರಿಸಬೇಕೆಂದು ನಿರ್ಧರಿಸಲಾಯಿತು. ಇಂದು ಕಟ್ಟಡ ನವೀಕೃತಗೊಂಡು ಉದ್ಘಾಟನೆಯಾಗಿದೆ. ಕಛೇರಿ ಉದ್ಘಾಟನಾ ಅವಧಿಯಲ್ಲಿ ಜೊತೆಗಿದ್ದ ಕಾರ್ಮಿಕರೊಂದಿಗೆ ಇಂದು ಬೆಳವಣಿಗೆ ಹಂತವಾಗಿ ಅಸಂಘಟಿತ ಕಾರ್ಮಿಕರಾದ ಮನೆಗೆಲಸಗಾರರು, ಕಟ್ಟಡ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳ ನಡುವೆ ಸಿಐಟಿಯು ವಿಸ್ತರಿಸಿದೆ ಮಾತ್ರವಲ್ಲ. ಅವರ ಕೊಡುಗೆ ಬಹಳ ದೊಡ್ಡದಿದೆ ಎಂದು ಸ್ಮರಿಸಿದರು.

ಕಾರ್ಮಿಕರ ನಡುವೆ ಸಿಐಟಿಯು ಸಂಘಟನೆಯ ಕಾರ್ಯಚಟುವಟಿಕೆಗಳು ವಿಸ್ತರಿಸದಂತೆಲ್ಲಾ ವಲಯ ಮಟ್ಟದಲ್ಲಿಯೂ ಸಂಘಟನೆಯು, ತನ್ನದೇ ಆದ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಲ್ಲದೆ, ಕಾರ್ಮಿಕರ ನಡುವಿನ ಈ ಬೆಳವಣಿಗೆ ದುಡಿಯುವ ವರ್ಗದ ರಾಜಕೀಯ ಶಕ್ತಿಯಾಗಿ ರೂಪುಗೊಳ್ಳಬೇಕಿದೆ. ಸಿಐಟಿಯು ಅಖಿಲ ಭಾರತ ಸಮ್ಮೇಳನಕ್ಕೆ ಕೆಲವೇ ದಿನಗಳು ಬಾಕಿ ಇದ್ದು, ಈ ಒಟ್ಟು ದಿನಗಳನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಕಾರ್ಯ ಆಗಬೇಕಾಗಿದೆ ಎಂದರು.

ಸಿಐಟಿಯು ರಾಜ್ಯ ಉಪಾಧ್ಯಕ್ಷ ಕೆ. ಪ್ರಕಾಶ್ ಮಾತನಾಡಿ, ಇತ್ತೀಚೆಗೆ ಅಮೆರಿಕಾ ತನಿಖಾ ಸಂಸ್ಥೆಯೊಂದು ಮೂರು ವರದಿಗಳನ್ನು ಬಿಡುಗಡೆ ಮಾಡಿದ್ದು, ಭೀಮಾ ಕೊರೆಗಾಂವ್ ಪ್ರಕರಣದಲ್ಲಿ ಯುಎಪಿಎ ಕಾಯ್ದೆಯಡಿ ಬಂಧನಕ್ಕೆ ಒಳಗಾದ ಸ್ಟ್ಯಾನ್ ಸ್ವಾಮಿ ಅವರು ಆದಿವಾಸಿಗಳೊಂದಿಗೆ ಕೆಲಸ ಮಾಡುತ್ತಿದ್ದರು. ದೇಶದಲ್ಲಿ ಗಣಿ ಲಾಭಿ ವ್ಯಾಪಕವಾಗಿದ್ದು, ಅದರ ವಿರುದ್ಧ ಸ್ಟ್ಯಾನ್ ಸ್ವಾಮಿ ಅವರ ನಿರಂತರವಾಗಿ ತೊಡಗಿಸಿಕೊಂಡಿದ್ದರು. ಅವರು ಬಂಧನಕ್ಕೆ ಒಳಗಾಗಿ ಜೈಲಿನಲ್ಲಿಯೇ ಆಸುನೀಗಬೇಕಾದ ಪರಿಸ್ಥಿತಿ ಎದುರಾಯಿತು. ಸ್ಟ್ಯಾನ್ ಸ್ವಾಮಿ ಅವರಿಗೆ ತಿಳಿಯದಂತೆ ಕಂಪ್ಯೂಟರ್ ಹ್ಯಾಕರ್‌ಗಳು ಅವರ ಕಂಪ್ಯೂಟರ್ ಗೆ 40 ಕಡತಗಳು ರವಾನೆಯಾಗಿದೆ. ಅಂದರೆ, ಇದರ ಹಿಂದೆ ವ್ಯವಸ್ಥಿತವಾದ ತಂಡವೊಂದು ಕೆಲಸ ಮಾಡಿದೆ. ಆದರೆ, ಈ ಪ್ರಕರಣದಲ್ಲಿ ತನಿಖೆಯನ್ನು ನಡೆಸುತ್ತಿರುವ ಎನ್‌ಐಎ ತಂಡ ಅಮೆರಿಕಾ ತನಿಖಾ ಸಂಸ್ಥೆ ಬಿಡುಗಡೆಗೊಳಿಸಿರುವ ವರದಿ ಬಗ್ಗೆ ಒಂದಂಶವನ್ನು ಗಣನೆಗೆ ತೆಗೆದುಕೊಂಡಿಲ್ಲ. ಯುಎಪಿಎ ಕಾಯ್ದೆಯಡಿ ಬಂಧನಕ್ಕೆ ಒಳಗಾದ 17–18 ಮಂದಿ ಇನ್ನೂ ಜೈಲಿನಲ್ಲಿಯೇ ಇದ್ದಾರೆ. ಬಿಜೆಪಿ ನೇತೃತ್ವದ ನರೇಂದ್ರ ಮೋದಿ ಸರ್ಕಾರದ ಜನ ವಿರೋಧಿ ನೀತಿಗಳನ್ನು ವಿರೋಧಿಸುತ್ತಾ ಬರಲಾಗುತ್ತಿದ್ದು, ಮುಂಬರುವ ದಿನಗಳಲ್ಲಿ ರೈತ ಕಾರ್ಮಿಕರ ಹೋರಾಟಗಾರರ ಮೇಲೆಯೂ ಇಂತಹ ಗೂಢಚಾರ್ಯೆ ಕೆಲಸಗಳು, ಹ್ಯಾಕರ್ ಗಳ ಕೆಲಸಗಳು ನಡೆಯುವ ಸಾಧ್ಯತೆಗಳು ಇವೆ. ಹಾಗಾಗಿ ಇಂತಹ ನೀತಿಗಳನ್ನು ಬಯಲುಗೊಳಿಸಲು ನಾವು ಮನೆ ಮನೆ ಪ್ರಚಾರವನ್ನು ವಿಸ್ತರಿಸುವ ಅವಶ್ಯಕತೆ ಇದೆ ಎಂದರು.

ಸಿಐಟಿಯು ಬೆಂಗಳೂರು ದಕ್ಷಿಣ ಜಿಲ್ಲಾ ಅಧ್ಯಕ್ಷ ಬಿ.ಎನ್. ಮಂಜುನಾಥ್ ಮಾತನಾಡಿ, ಕಾರ್ಮಿಕರ ನಡುವೆ ನಮ್ಮ ಬೆಳವಣಿಗೆ ಮತ್ತು ನಂತರದಲ್ಲಿ ಎದುರಾದ ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ಮಧ್ಯಪ್ರವೇಶದಿಂದಾಗಿ ಸಂಘಟನೆ ವಿಸ್ತರಣೆಯಾಗಿದೆ. ಅಲ್ಲದೆ, ಸದಸ್ಯತ್ವದ ➚





ರಾಜ್ಯಗಳಲ್ಲಿನ ಸಹಕಾರಿ ಸಂಘಗಳನ್ನು ವಶಪಡಿಸಿಕೊಳ್ಳುವ ಉದ್ದೇಶದ ಮಸೂದೆ

ಪ್ರಸ್ತಾವಿತ ಮಸೂದೆ ಒಂದು ಅಪಾಯಕಾರಿ ಕಾನೂನಾಗಿದೆ. ರಾಜ್ಯಗಳ ಕಾನೂನಿನಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘಗಳ ಮೇಲೆ ಕೇಂದ್ರ ಸರಕಾರದ ನಿರ್ಧಾರಗಳನ್ನು ಹೇರಲು ನಡೆಸುವ ನಗ್ನ ಪ್ರಯತ್ನ ಇದಾಗಿದೆ. ತಿದ್ದುಪಡಿಯಾದ 6ನೇ ನಿಯಮದ ಅನ್ವಯ, ಹಾಜರಿದ್ದ ಸದಸ್ಯರಲ್ಲಿ ಮೂರನೇ ಎರಡಕ್ಕಿಂತ ಕಡಿಮೆಯಿರದ ಬಹುಮತದಿಂದ ಮತ್ತು ಸೊಸೈಟಿಯ ಮಹಾಸಭೆಯಲ್ಲಿ ಅಂಗೀಕಾರವಾದ ಗೊತ್ತುವಳಿಯ ಅಧಿಕಾರಯುತ ಬೆಂಬಲದೊಂದಿಗೆ, ಯಾವುದೇ ಸಹಕಾರಿ ಸಂಘವೊಂದು, ಹಾಲಿ ಅಸ್ತಿತ್ವದಲ್ಲಿರುವ ಬಹು–ರಾಜ್ಯ ಸಹಕಾರಿ ಸಂಘದಲ್ಲಿ ವಿಲೀನವಾಗಲು ನಿರ್ಧರಿಸಬಹುದಾಗಿದೆ.

— ಪ್ರಕಾಶ್ ಕಾರತ್ —

ಆಡಳಿತ ಮತ್ತು ಅಧಿಕಾರವನ್ನು ಕೇಂದ್ರೀಕರಿಸುವುದು, ಆ ಮೂಲಕ ಸಂವಿಧಾನದ ಫೆಡರಲ್ ಸ್ವರೂಪವನ್ನು ದುರ್ಬಲಗೊಳಿಸುವುದು ನರೇಂದ್ರ ಮೋದಿ ಸರಕಾರದ ನೀತಿಯ ಪ್ರಮುಖ ಲಕ್ಷಣಗಳಲ್ಲಿ ಒಂದಾಗಿದೆ. ಸಹಕಾರ ಸಚಿವಾಲಯವನ್ನು ರಚಿಸಿ, ಅಮಿತ್ ಷಾ ಅವರನ್ನು ಅದರ ಸಚಿವರನ್ನಾಗಿ ನೇಮಿಸಿರುವುದು, ರಾಜ್ಯಗಳ ಸಾಂವಿಧಾನಿಕ ಅಧಿಕಾರಗಳನ್ನು ಉಲ್ಲಂಘಿಸಲು ಮೋದಿ ಸರಕಾರ ಮಾಡಿದ ಪ್ರಮುಖ ಪ್ರಯತ್ನಗಳಲ್ಲಿ ಒಂದಾಗಿದೆ.

ಸಹಕಾರ ಸಚಿವಾಲಯವನ್ನು ರಚಿಸಿದ ಬೆನ್ನಲ್ಲೇ, ಬಿಜೆಪಿ ಸರಕಾದ ಸಾಹಸವಾದವನ್ನು ಭಾಗಶಃ ನಿಯಂತ್ರಿಸುವ ತೀರ್ಪೊಂದನ್ನು ಸುಪ್ರೀಂ ಕೋರ್ಟ್ ನೀಡಿತು. 2011ರಲ್ಲಿ ಸಂವಿಧಾನದ 97ನೇ ತಿದ್ದುಪಡಿ ಮೂಲಕ ಸಂವಿಧಾನದಲ್ಲಿ IXB ಭಾಗವನ್ನು ಸೇರಿಸಲಾಗಿತ್ತು ಹಾಗೂ ಸಹಕಾರಿ ಸಂಘಗಳಿಗೆ ಸಂಬಂಧಿಸಿದಂತೆ ರಾಜ್ಯ ಮಟ್ಟದ ಕಾನೂನುಗಳಿಗೆ ಕೆಲವು ಷರತ್ತುಗಳನ್ನು ವಿಧಿಸಲಾಗಿತ್ತು. 97ನೇ ತಿದ್ದುಪಡಿಯು ಸ್ಥಳೀಯ ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವುದಿಲ್ಲ, ಬಹು–ರಾಜ್ಯ ಸಹಕಾರಿ ಸಂಘಗಳಿಗೆ ಮಾತ್ರವೇ ಅನ್ವಯವಾಗುತ್ತದೆ ಎಂದು 2022ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ತೀರ್ಪು ಸರಕಾರಕ್ಕೆ ಹಿನ್ನಡೆಯಾಗಿದೆ. ಯಾಕೆಂದರೆ ರಾಜ್ಯ ಸಹಕಾರಿ ಕಾನೂನುಗಳಡಿ ನೊಂದಾಯಿತ ಸ್ಥಳೀಯ ಸಹಕಾರಿ ಸಂಸ್ಥೆಗಳಲ್ಲಿ ಹಸ್ತಕ್ಷೇಪ ಮಾಡಲು 2011ರ ತಿದ್ದುಪಡಿಯನ್ನು ಬಳಸಲು ಅದು ಯೋಚಿಸುತ್ತಿತ್ತು. ಆಗ ಮೋದಿ ಸರಕಾರ ರಾಜ್ಯಗಳಲ್ಲಿ ಹಸ್ತಕ್ಷೇಪ ನಡೆಸಲು, ಬಹು–ರಾಜ್ಯ ಸಹಕಾರಿ ಸೊಸೈಟಿ ಮಾರ್ಗವನ್ನು ತುಳಿಯಲು ನಿರ್ಧರಿಸಿತು. 2011ರ ಸಾಂವಿಧಾನಿಕ ತಿದ್ದುಪಡಿಯನ್ನೇ ಬಳಸಿಕೊಂಡು ಅದೀಗ 2002ರ ಬಹು–ರಾಜ್ಯ ಸಹಕಾರಿ ಸಂಘಗಳ ಕಾನೂನು ತಿದ್ದುಪಡಿ ಮಾಡಲು ಬಹು–ರಾಜ್ಯ ಸಹಕಾರಿ ಸಂಘಗಳು (ತಿದ್ದುಪಡಿ) ಮಸೂದೆ 2022ನ್ನು ಮಂಡಿಸಿದೆ.

ಪ್ರಸ್ತಾವಿತ ಮಸೂದೆ ಒಂದು ಅಪಾಯಕಾರಿ ಕಾನೂನಾಗಿದೆ. ರಾಜ್ಯಗಳ ಕಾನೂನಿನಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘಗಳ ಮೇಲೆ ಕೇಂದ್ರ ಸರಕಾರದ ನಿರ್ಧಾರಗಳನ್ನು ಹೇರಲು ನಡೆಸುವ ನಗ್ನ ಪ್ರಯತ್ನ ಇದಾಗಿದೆ. ತಿದ್ದುಪಡಿಯಾದ 6ನೇ ನಿಯಮದ ಅನ್ವಯ, ಹಾಜರಿದ್ದ ಸದಸ್ಯರಲ್ಲಿ ಮೂರನೇ ಎರಡಕ್ಕಿಂತ ಕಡಿಮೆಯಿರದ ಬಹುಮತದಿಂದ ಮತ್ತು ಸೊಸೈಟಿಯ ಮಹಾಸಭೆಯಲ್ಲಿ ಅಂಗೀಕಾರವಾದ ಗೊತ್ತುವಳಿಯ ಅಧಿಕಾರಯುತ ಬೆಂಬಲದೊಂದಿಗೆ, ಯಾವುದೇ ಸಹಕಾರಿ ಸಂಘವೊಂದು, ಹಾಲಿ ಅಸ್ತಿತ್ವದಲ್ಲಿರುವ ಬಹು–ರಾಜ್ಯ ಸಹಕಾರಿ ಸಂಘದಲ್ಲಿ ವಿಲೀನವಾಗಲು ನಿರ್ಧರಿಸಬಹುದಾಗಿದೆ. ತಿದ್ದುಪಡಿಯಾದ 13ನೇ ನಿಯಮದ ಪ್ರಕಾರ, ಕೇಂದ್ರ ಸರಕಾರದ ಅನುಮೋದನೆಯಿಲ್ಲದೆ ಬಹು–ರಾಜ್ಯ ಸಹಕಾರಿ ಸಂಘಗಳು ಷೇರುಗಳನ್ನು ಮರು ಪೆಯುವುದಾಗಲಿ, ಬಿಡುಗಡೆ ಮಾಡುವುದಾಗಲಿ (ರಿಡಂಪ್ಷನ್) ಮಾಡುವಂತಿಲ್ಲ. ಕೇಂದ್ರ ಸರಕಾರವೇ ಕೇಂದ್ರೀಯ ಚುನಾವಣಾ ಪ್ರಾಧಿಕಾರವನ್ನು ನೇಮಿಸುತ್ತದೆ ಎಂದು 17ನೇ ತಿದ್ದುಪಡಿ ಹೇಳುತ್ತದೆ. 45ನೇ ತಿದ್ದುಪಡಿಯನ್ವಯ ನಿರ್ದೇಶಕ ಮಂಡಳಿಯನ್ನು ಕೇಂದ್ರ ಸರಕಾರವೇ ತನ್ನ ಅಧಿಕಾರ ಚಲಾಯಿಸುವ ಮೂಲಕ ಹೊಸ ಆಡಳಿತಗಾರರನ್ನು ನೇಮಿಸಬಹುದಾಗಿದೆ.

ರಾಜ್ಯಗಳ ಸಹಕಾರಿ ಸ್ವರೂಪದಲ್ಲಿ ಬಹು–ರಾಜ್ಯ ಸಹಕಾರಿ ಸಂಘಗಳನ್ನು ಸೇರಿಸುವುದು ಈ ಎಲ್ಲಾ ತಿದ್ದುಪಡಿಗಳ ಸ್ಪಷ್ಟ ಉದ್ದೇಶವಾಗಿದೆ. ಸ್ಥಳೀಯ ಸಹಕಾರಿ ಸಂಘಗಳ ಕತ್ತು ಹಿಸುಕಲು ಮತ್ತು ಶಿಕ್ಷಾ ಕ್ರಮಗಳು, ವಿಲೀನಗಳು, ಬೋರ್ಡ್‌ಗಳನ್ನು ರದ್ದುಪಡಿಸುವುದು ಮತ್ತು ಚುನಾವಣೆಗಳಲ್ಲಿ ಹಸ್ತಕ್ಷೇಪಗಳ ಮೂಲಕ ರಾಜ್ಯಗಳಲ್ಲಿನ ಇಡೀ ಸಹಕಾರಿ ವ್ಯವಸ್ಥೆಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಕೇಂದ್ರ ಸರಕಾರಕ್ಕೆ ಇದು ಅವಕಾಶ ಕಲ್ಪಿಸುತ್ತದೆ.

ಸಹಕಾರಿ ಸಂಘಗಳ ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ಹೆಚ್ಚಿಸುವುದು ಹಾಗೂ ಸಹಕಾರಿ ಸಂಘಗಳ ಸುಗಮ ಕಾರ್ಯನಿರ್ವಹಣೆಗೆ ಅನುಕೂಲವಾಗಲು 2002ರ ಕಾನೂನಿಗೆ ತಿದ್ದುಪಡಿ ತರಲಾಗುತ್ತದೆ ಎಂಬ 'ತರ್ಕ'ವನ್ನು ಮುಂದಿಡಲಾಗಿದೆ. ಆದರೆ ಈ 'ತರ್ಕವೇ' ತರ್ಕಹೀನವಾಗಿದೆ. ಯಾವುದೇ ಒಂದು ಸಹಕಾರಿ ಸಂಘ ರಾಜ್ಯ ನಿಯಂತ್ರಣದಿಂದ ಕೇಂದ್ರ ನಿಯಂತ್ರಣಕ್ಕೆ ಹೋಗುತ್ತದೆಯೇ ಎನ್ನುವುದಕ್ಕೆ ಯಾವುದೇ ಖಾತರಿಯಿಲ್ಲ. ಪಾರದರ್ಶಕತೆ, ಉತ್ತರದಾಯಿತ್ವ ಇರುತ್ತದೆ ಮತ್ತು ಕಾರ್ಯಕ್ಷಮತೆ ಸುಧಾರಿಸುತ್ತದೆ ಎನ್ನುವುದಕ್ಕೆ ಯಾವುದೇ ಖಾತರಿಯಿಲ್ಲ. ಹಾಗೆ ನೋಡಿದರೆ, ಭಾರತದಾದ್ಯಂತ ಬಹು–ರಾಜ್ಯ ಸಹಕಾರಿ ಸಂಘಗಳು ಬಿಕ್ಕಟ್ಟಿನಲ್ಲಿವೆ. ಒಂಬತ್ತು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ 44 ಬಹು–ರಾಜ್ಯ ಸಹಕಾರಿ ಸಂಘಗಳನ್ನು ಆರ್ಥಿಕ ದುರಾಡಳಿತ ಅಥವಾ ಅದಕ್ಷತೆಗಾಗಿ ಮುಚ್ಚಲಾಗುತ್ತಿದೆ ಎಂದು ಅಮಿತ್ ಷಾ 2021 ಡಿಸೆಂಬರ್‌ನಲ್ಲಿ ಸಂಸತ್ತಿಗೆ ತಿಳಿಸಿದ್ದರು. ಕೇರಳದಂತೆ ಅನೇಕ ರಾಜ್ಯಗಳಲ್ಲಿ ರಾಜ್ಯ ಮಟ್ಟದ ಸಹಕಾರಿ ಸಂಘಗಳು ಹೆಚ್ಚು ದಕ್ಷತೆ ಮತ್ತು ಲಾಭದಾಯಕವಾಗಿ ಕೆಲಸ ಮಾಡುವ ನಿದರ್ಶನವೂ ನಮ್ಮ ಮುಂದಿದೆ. ಇಂಥ ಬಹಳಷ್ಟು ಸಂಘಗಳಿವೆ. ಕೇಂದ್ರ ಸರಕಾರದ ನಿರ್ದೇಶನಗಳಂತೆ, ಒಂದು ಬಹು–ರಾಜ್ಯ ಸಹಕಾರಿ ಸಂಘ ರೂಪಿಸಲು, ಅಮುಲ್ ಐದು ಸ್ಥಳೀಯ ಸಹಕಾರಿ ಸಂಘಗಳೊಂದಿಗೆ ಕೈಜೋಡಿಸುತ್ತಿದೆ ಅಥವಾ ವಿಲೀನಗೊಳ್ಳುತ್ತಿದೆ.

ಪ್ರಸ್ತಾವಿತ ಮಸೂದೆ ಒಂದು ಅಪಾಯಕಾರಿ ಕಾನೂನಾಗಿದೆ. ರಾಜ್ಯಗಳ ಕಾನೂನಿನಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘಗಳ ಮೇಲೆ ಕೇಂದ್ರ ಸರಕಾರದ ನಿರ್ಧಾರಗಳನ್ನು ಹೇರಲು ನಡೆಸುವ ನಗ್ನ ಪ್ರಯತ್ನ ಇದಾಗಿದೆ.

'ಸಹಜ ಕೃಷಿ'ಯ ಉತ್ಪನ್ನಗಳನ್ನು ಪ್ರಮಾಣೀಕರಿಸುವ ಮತ್ತು ಹಾಲು ರಫ್ತು ಮಾಡುವ ಕಾಯಕದಲ್ಲಿ ಈ ಸೊಸೈಟಿ ತೊಡಗಿಸಿಕೊಳ್ಳಲಿದೆ. ಇಂಥ ರಾಜಕೀಯ ಪ್ರೇರಿತ ಕ್ರಮಗಳಿಂದ ರಾಜ್ಯ ಮಟ್ಟದ ಡೈರಿ ಸಹಕಾರಿಗಳು ಮತ್ತು ವೃತ್ತಿಪರರು ನಡೆಸುವ ಅಮುಲ್ ನಂಥ ಸಂಘಗಳು ದುರ್ಬಲಗೊಳ್ಳುತ್ತವೆ. ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ನಿಷ್ಕ್ರಿಯವಾಗಿರುವ ಬಹು–ರಾಜ್ಯ ಸಹಕಾರಿ ಸಂಘಗಳಿಗೆ ಮೋದಿ ಸರಕಾರ ಹೆಚ್ಚು ಹಣ ನೀಡುತ್ತಿರುವುದು ಹಾಗೂ ಹೊಸ ನೆಲೆ ಸ್ಥಾಪಿಸಲು ಕೇರಳದಂಥ ದೂರದ ರಾಜ್ಯಗಳಿಗೆ ಅವುಗಳನ್ನು ಕಳಿಸುವುದರ ಹಿಂದಿನ ಅದರ ಉದ್ದೇಶ ಇನ್ನಷ್ಟು ಸ್ಪಷ್ಟವಾಗುತ್ತದೆ. ಕೇರಳದಲ್ಲಿ ಸ್ಥಳೀಯ ಸಹಕಾರಿ ಸಂಘಗಳನ್ನು ದುರ್ಬಲಗೊಳಿಸುವುದು, ಅವುಗಳ ವ್ಯವಹಾರಗಳನ್ನು ವಹಿಸಿಕೊಳ್ಳುವುದು ಮತ್ತು ರಾಜ್ಯದಲ್ಲಿ ಬಿಜೆಪಿ ರಾಜಕೀಯ ಬಂಡವಾಳವನ್ನು ವಿಸ್ತರಿಸುವುದು ಉದ್ದೇಶವಾಗಿದೆ.

ಪ್ರಾದೇಶಿಕ ವೈವಿಧ್ಯತೆ ಮೇಲೆ ಭಾರತದ ಸಹಕಾರಿ ಕ್ಷೇತ್ರ ತಳವೂರಿದೆ. ಬ್ಯಾಂಕಿಂಗ್ ವಲಯದಲ್ಲಿನ ನವ ಉದಾರವಾದಿ ನೀತಿಗಳು ರಾಜ್ಯಗಳಲ್ಲಿನ ಸಹಕಾರಿ ಸಂಘಗಳನ್ನು ಬಿಕ್ಕಟ್ಟಿಗೆ ತಳ್ಳಿವೆ.

2022ರ ಮಸೂದೆಯಲ್ಲಿ ಪ್ರಸ್ತಾಪಿಸಿರುವಂತೆ ಸಹಕಾರಿ ಸಂಘಗಳ ಮಹತ್ವವನ್ನು ಕಡೆಗಣಿಸಿ ಅವುಗಳನ್ನು ನಾಶ ಮಾಡುವುದು ಕೇಂದ್ರ ಸರ್ಕಾರದ ಉದ್ದೇಶವಿದ್ದಂತೆ ಕಾಣಿಸುತ್ತದೆ. ಈ ಅಸಾಂವಿಧಾನಿಕ ನಡೆಯನ್ನು ಹಿಮ್ಮೆಟ್ಟಿಸಲು ರಾಜ್ಯಗಳು ರಾಜಕೀಯವಾಗಿಯೂ ಕಾನೂನಾತ್ಮಕವಾಗಿಯೂ ಒಗ್ಗಟ್ಟಾಗುವುದು ಅತ್ಯಗತ್ಯ.



ಅನು: ವಿಶ್ವ

ಪ್ರಮಾಣ ಗುಣಾತ್ಮಕವಾಗಿ ಬದಲಾವಣೆಯಾಗಿದೆ. ನವೀಕೃತ ಗೊಂಡ ಜ್ಯೋತಿ ಬಸು ಭವನದ ಕಾರ್ಯಚಟುವಟಿಕೆಯಲ್ಲಿಯೂ ನಮ್ಮ ಜವಾಬ್ದಾರಿ ಹೆಚ್ಚಿದ್ದು, ಎಲ್ಲರೂ ಹೊಣೆ ಹೊರುವ ಮೂಲಕ ಕ್ರಿಯಾಶೀಲವಾಗಿ, ವೇಗವಾಗಿ ಕೆಲಸ ಮಾಡುವುದು ಆಗಬೇಕಾಗಿದೆ. ನಿಗದಿತ ದಿನಾಂಕದೊಳಗೆ ನವೀಕೃತ ಕಟ್ಟಡದ ಎಲ್ಲಾ ಕೆಲಸವನ್ನು ಪೂರ್ಣಗೊಳಿಸಿದ ಕಟ್ಟಡ ಕಾರ್ಮಿಕರಿಗೆ ಹೃತ್ಪೂರ್ವಕ ಅಭಿನಂದನೆಗಳು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿಐಟಿಯು ಅಖಿಲ ಭಾರತ ಸಮ್ಮೇಳನದ ಅಂಗವಾಗಿ ಡಿಸೆಂಬರ್ 19 ರಂದು ಬಿ.ಟಿ. ರಣದಿವೆ ಅವರ ಜನ್ಮದಿನದಂದು ಹಮ್ಮಿಕೊಂಡಿರುವ ಸಾಮೂಹಿಕ ನಿಧಿ ಸಂಗ್ರಹ ಮತ್ತು ಡಿಸೆಂಬರ್ 24 ರಂದು ಬಸವನಗುಡಿ ನ್ಯಾಷನಲ್ ಕಾಲೇಜು, ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣದಲ್ಲಿ ಹಮ್ಮಿಕೊಂಡಿರುವ ಬಹುಭಾಷಾ ಕವಿಗೋಷ್ಠಿ ಕಾರ್ಯಕ್ರಮದ ಭಿತ್ತಿಚಿತ್ರಗಳನ್ನು ಬಿಡುಗಡೆಗೊಳಿಸಲಾಯಿತು. ಅಲ್ಲದೆ, ನವೀಕೃತ ಕಟ್ಟಡದ ವಿನ್ಯಾಸಗಾರ ಎನ್. ದಯಾನಂದ್ ಅವರಿಗೆ ಗೌರವ ಅಭಿನಂದನೆ ಸಲ್ಲಿಸಲಾಯಿತು.

ಕಾರ್ಯಕ್ರಮದ ಸ್ವಾಗತವನ್ನು ಸಿಐಟಿಯು ಬೆಂಗಳೂರು ಉತ್ತರ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮುನಿರಾಜು, ನಿರೂಪಣೆಯನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜು ಮತ್ತು ವಂದಾನಾರ್ಪಣೆ ಯನ್ನು ದಕ್ಷಿಣ ಜಿಲ್ಲಾ ಸಮಿತಿ ಖಜಾಂಚಿ ದೇವಿಕಾ ಅವರು ನೆರವೇರಿಸಿದರು. ವೇದಿಕೆಯಲ್ಲಿ ಉತ್ತರ ಜಿಲ್ಲಾ ಸಮಿತಿ ಅಧ್ಯಕ್ಷ ಪ್ರತಾಪ್ ಸಿಂಹ, ಖಜಾಂಚಿ ಟಿ. ಲೀಲಾವತಿ ಉಪಸ್ಥಿತ ರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಸಿಐಟಿಯು ರಾಜ್ಯ ಉಪಾಧ್ಯಕ್ಷ ಹೆಚ್.ಎನ್. ಗೋಪಾಲಗೌಡ ಅವರು ಧ್ವಜಾರೋಹಣ ಮಾಡಿದರು ಮತ್ತು ತಪನ್ ಸೇನ್ ಅವರು ನಾಮಫಲಕವನ್ನು ಉದ್ಘಾಟನೆ ಮಾಡಿದರು. ಕೆ.ಎಸ್.ಲಕ್ಷ್ಮಿ ಮತ್ತು ತಂಡದವರು ಕ್ರಾಂತಿಗೀತೆಗಳನ್ನು ಹಾಡಿದರು.

ಹಾಸ್ಟೇಲ್ ನರಕ: ವಿದ್ಯಾರ್ಥಿಗಳ ಗೋಳು.... ಪುಟ 4 ರಿಂದ

ನಡೆಯುತ್ತಿದೆ. ಟೆಂಡರ್ ಎನ್ನುವುದು ಹಾಸ್ಟೇಲ್ ವ್ಯವಸ್ಥೆಗೆ ಮಾರಕವಾಗಿದೆ. ಅಕಸ್ಮಾತ್ ಹಾಸ್ಟೇಲ್‌ನಲ್ಲಿ ಒಂದು ವಿದ್ಯುತ್ ಲೈಟ್ ಹಾಳಾದರೆ ಅದನ್ನು ತರಲು ಟೆಂಡರ್ ಆಗುವವರೆಗೂ ಕಾಯಬೇಕು ಇಲ್ಲವೇ ವಾರ್ಡನ್ ಕೈಯಿಂದ ಹಾಕಬೇಕು. ಹೀಗೆ ಹಾಸ್ಟೇಲ್‌ಗಳು ಸಮಸ್ಯೆಗಳ ಮೇಲೆ ಸಮಸ್ಯೆಯನ್ನು ಹೊದ್ದು ಮಲಗಿವೆ ಎಂದು ಹಾಸ್ಟೇಲ್ ನೌಕರರ ಸಂಘಟನೆಯ ಜಂಟಿ ಕಾರ್ಯದರ್ಶಿ ಹನಮೇಗೌಡ ಆರೋಪಿಸಿದ್ದಾರೆ.

ವಿದ್ಯಾರ್ಥಿಗಳ ಸಂಖ್ಯೆಗೆ ತಕ್ಕಂತೆ ಹಾಸ್ಟೆಲ್ ತೆರೆಯಬೇಕು : ಒಂದೆಡೆ ಹಾಸ್ಟೇಲ್ ಸಮಸ್ಯೆಗಳ ನಡುವೆ ಹಾಸ್ಟೇಲ್ ಕೊರತೆಯೂ ವಿದ್ಯಾರ್ಥಿಗಳನ್ನು ಕಾಡುತ್ತಿದೆ. ಅರ್ಜಿ ಹಾಕಿದ ವಿದ್ಯಾರ್ಥಿಗಳಿಗೆ ಹಾಸ್ಟೇಲ್ ಸಿಗುತ್ತಿಲ್ಲ. ಮೂರು ಸಾವಿರಕ್ಕೂ ಹೆಚ್ಚು ಅರ್ಜಿ ಹಾಕಿದರೆ 200 ರಿಂದ 300 ವಿದ್ಯಾರ್ಥಿಗಳಿಗೆ ಮಾತ್ರ ಹಾಸ್ಟೇಲ್ ಸೌಲಭ್ಯ ದೊರೆಯುತ್ತಿದೆ. ಉಳಿದ ವಿದ್ಯಾರ್ಥಿಗಳು ರೂಮ್ ಮಾಡಿಕೊಂಡು ಓದಬೇಕಾದ ಸ್ಥಿತಿ ಇದೆ. ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಹಾಸ್ಟೇಲ್ ನಿರ್ಮಾಣ ಮಾಡಬೇಕು ಎಂದು ವಿದ್ಯಾರ್ಥಿ ಸಂಘಟನೆಗಳು ಹೋರಾಟವನ್ನು ಮಾಡುತ್ತಾ ಬಂದಿವೆ. ಈ ಬಾರಿಯ ಬಜೆಟ್‌ನಲ್ಲಾದರೂ ಸರಕಾರ ಹೆಚ್ಚುವರಿ ಹಾಸ್ಟೇಲ್ ನಿರ್ಮಿಸುವ ಮತ್ತು ಸ್ವಂತ ಕಟ್ಟಡ ನೀಡಿ ಮೂಲಸೌಲಭ್ಯವನ್ನು ಹೆಚ್ಚಿಸುವತ್ತ ಗಮನ ನೀಡಬೇಕಿದೆ.

ಒಟ್ಟಾರೆ ಅಧ್ಯಯನ ಕೇಂದ್ರಗಳಾಗಿರಬೇಕಾದ ಹಾಸ್ಟೇಲ್‌ಗಳು ರೋಗಗ್ರಸ್ಥ ತಾಣಗಳಾಗುತ್ತವೆ. ಕೂಡಲೆ ರಾಜ್ಯ ಸರಕಾರ ಹಾಸ್ಟೇಲ್ಗಳಿಗೆ ಮೂಲಸೌಲಭ್ಯಗಳನ್ನುನೀಡಿ, ಗುಣಮಟ್ಟದ ಆಹಾರವನ್ನು ನೀಡಲು ಮುಂದಾಗಬೇಕಿದೆ. ಇಲ್ಲವಾದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳ ಶಿಕ್ಷಣ ಹಾಗೂ ಆರೋಗ್ಯದ ಮೇಲಾಗುವ ಸಮಸ್ಯೆಗಳಿಗೆ ತಾನೇ ಜವಬ್ದಾರಿಯಾಗಿರುತ್ತೇನೆ ಎಂಬುದನ್ನು ಸರಕಾರ ಮರೆಯಬಾರದು.

ಅಂಜನಾದ್ರಿ: ಸಂಘ ಪರಿವಾರಿಗಳ ಕ್ಷುದಾಗ್ನಿಯಲ್ಲಿ ಹನುಮಂತ



ಡಾ.ಮೀನಾಕ್ಷಿ ಬಾಳಿ

ಆದಿ ಪುರಾಣ ಅಸುರರಿಗೆ ಮಾರಿ,
ವೇದಪುರಾಣ ಹೋತಿಂಗೆ ಮಾರಿ,
ರಾಮಪುರಾಣ ರಕ್ಕಸರಿಗೆ ಮಾರಿ,
ಭಾರತ ಪುರಾಣ ಗೋತ್ರಕ್ಕೆ ಮಾರಿ,
ಎಲ್ಲ ಪುರಾಣ ಕರ್ಮಕ್ಕೆ ಮೊದಲು,
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲಸಂಗಮದೇವಾ.

ಕ್ರಾಂತಿಕಾರಿ ಬಸವಣ್ಣನವರು 12ನೇ ಶತಮಾನದಲ್ಲಿಯೇ ಪುರಾಣ ಕಾವ್ಯಗಳ ಬಗೆಗಿನ ಭಾವ ಲೋಲುಪ್ತತೆಯನ್ನು ಖಂಡಿಸುತ್ತಾರೆ. ಜನ ಸಂಕಥನವನ್ನೆ ಕೇಂದ್ರವಾಗಿಸಿಕೊಂಡು ಅವುಗಳಲ್ಲಿರುವ ಯುದ್ಧಘೋರತನವು ಯಾವತ್ತಿದ್ದರೂ ಮಾನವ ಜನಾಂಗಕ್ಕೆ ಅಪಾಯವೇ ಹೊರತು ಅಲ್ಲಿ ಕಲಿಯಬೇಕಾದುದು ಏನೂ ಇಲ್ಲ. ಸಣ್ಣ ಸಣ್ಣ ಗುಂಪುಗಳನ್ನೆ ರಾಜ್ಯ ಮಾಡಿಕೊಂಡು ಪರಸ್ಪರ ಕಚ್ಚಾಡಿ ಸತ್ತು ಸುಣ್ಣವಾದ ಕಥನಗಳಾದರೂ ಮನುಷ್ಯರ ಅಜ್ಞಾನ ಮತ್ತು ಸ್ವಾರ್ಥದ ಪ್ರತೀಕವಾಗಿಯೇ ಉಳಿದುಕೊಂಡಿವೆ. ಚರಿತ್ರೆಯ ಈ ನಡೆಯು ಸಮುದಾಯಗಳು ಬಡಿದಾಡುತ್ತ ಬೆಳೆದು ಬಂದ ಬಗೆಯನ್ನು ದರ್ಶಿಸುತ್ತವೆ. ಅಷ್ಟರ ಮಟ್ಟಿಗೆ ಅವುಗಳ ಅಧ್ಯಯನ, ಅನುಸಂಧಾನ ಅಪೇಕ್ಷಾರ್ಹವೇನೊ ಸರಿ. ಆದರೆ ಈ ಅಳ್ಳಕವಾದ ಐತಿಹಾಸಿಕ ಪ್ರಸಂಗಗಳು ಪುರಾಣಿಕೃತಗೊಂಡು ದೈವಿಕತೆಗೆ ಏರಿ ಮತೋನ್ಮಾದವಾಗಿ ಆವರಿಸಿಕೊಳ್ಳುವ ಅಮಲು ಇದೆಯಲ್ಲ? ಇದೇ ತುಂಬಾ ಅಪಾಯಕಾರಿ.

ಭಾರತದಲ್ಲಿ ಇತಿಹಾಸ ಮತ್ತು ಪುರಾಣಗಳು ಕಲಸುಮೋಲೋಗರವಾಗಿ ಸಂಕೀರ್ಣ ಪರಂಪರೆಯೊಂದು ನಿತಾಂತವಾಗಿ ಹರಡಿಕೊಂಡಿದೆ. ಪುರಾಣ ಪುಣ್ಯಕಥೆಗಳು ಜನತೆಯ ದಿನ ನಿತ್ಯದ ಬದುಕಿನ ನಿಕಷಗಳಾಗಿ ಅವರ ನೈತಿಕತೆಯನ್ನು ನಿಯಂತ್ರಿಸುವ ಸಂಗತಿಗಳಾಗಿವೆ. ಭಾರತೀಯರು ವರ್ತಮಾನದಿಂದ ಕಳಚಿಕೊಳ್ಳುವಷ್ಟು ಸುಲಭವಾಗಿ ಭೂತದಿಂದ ಅದರಲ್ಲಿಯೂ ಅಮೂರ್ತವಾದ ಐತಿಹ್ಯಗಳಿಂದ ಕಳಚಿಕೊಳ್ಳಲಾರರು. ಹೀಗಾಗಿಯೇ ಅರೆ ಐತಿಹಾಸಿಕವಾಗಿರುವ ರಾಮಾಯಣ, ಮಹಾಭಾರತ, ಭಾಗವತ, ಹದಿನೆಂಟು ಪುರಾಣಗಳು ಇಲ್ಲಿನವರ ಆಸ್ತಿಕ ಭಾವಕೋಶವಷ್ಟೆ ಅಲ್ಲ ಅವರ ಆತ್ಮಸಾತ್ ಅನುಸಂಧಾನಗಳಾಗಿವೆ. ಜೀವ ಜಂಜಡದ ಭಿತ್ತಿಯೊಂದಿಗೆ ಬೆಸೆದುಕೊಂಡಿರುವ ಇವರಿಗೆ ಆ ಮಹಾಕಾವ್ಯಗಳಲ್ಲಿನ ಪಾತ್ರಗಳು ಮಾನವರಂತೂ ಅಲ್ಲವೆ ಅಲ್ಲ. ಎಂತಿದ್ದರೂ ಅವೆಲ್ಲವೂ ಅಖಂಡ ಭೂಮಂಡಲವನ್ನು ನಿಯಂತ್ರಿಸುತ್ತಿರುವ ಮಹಾಶಕ್ತಿಗಳು. ಅವುಗಳ ಆರಾಧನೆಯಲ್ಲಿಯೆ ತಮ್ಮ ಬದುಕಿನ ಎಲ್ಲ ಸಮಸ್ಯೆಗಳಿಗೂ ಪರಿಹಾರ ಎಂಬುದು ಅಚಲವಾದ ನಂಬಿಕೆ. ಇಂಥ ನಂಬಿಕೆಗಳ ಸತ್ಯಾಸತ್ಯತೆ ಬಗೆಗೆ ನಮ್ಮ ಜನರು ಎಂದೂ ತಲೆ ಕೆಡಿಸಿಕೊಂಡವರೆ ಅಲ್ಲ. ತಮ್ಮ ಬದುಕಿನಲ್ಲಿ ಒಳ್ಳೆಯದು ಸಂಭವಿಸಿದರೆ ಅದೆಲ್ಲವೂ ತಾವು ನಂಬಿದ ದೈವದ ದಯೆ. ಕೆಟ್ಟದು ಸರಮಾಲೆಯಾಗಿ ಸುತ್ತಿಕೊಂಡರೆ ಅದಕ್ಕೆಲ್ಲ ತಮ್ಮ ಖೊಟ್ಟಿ ಹಣೆಬರಹ\ಕರ್ಮವೇ ಕಾರಣ ಎಂಬ ಭೋಳೆತನ. ಬಹುಸಂಖ್ಯಾತರ ಈ ಮುಗ್ಧ ನಂಬಿಕೆ ಅಥವಾ ಭೋಳೆತನ ಯಾವತ್ತೂ ಸಮಸ್ಯೆ ಅಲ್ಲ. ಆದರೆ ಈ ಭೋಳೆತನವನ್ನೆ ಬಂಡವಾಳ ಮಾಡಿಕೊಳ್ಳುವ ಆಳುವ ವರ್ಗದ ಆಟಾಟೋಪವೇ ಸಮಸ್ಯೆ. ದೇಶದ ಸಂಪತ್ತನ್ನು ಬೇಷರತ್ತಾಗಿ ಕೊಳ್ಳೆ ಹೊಡೆಯುವ ವ್ಯಾಪಾರಿ ವರ್ಗಕ್ಕೆ ಪ್ರಭುತ್ವವನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು. ಪ್ರಭುತ್ವದ ನಿಯಂತ್ರಣದಲ್ಲಿ ಜನತೆ. ವ್ಯಾಪಾರಿಗಳ ನಿಯಂತ್ರಣದಲ್ಲಿ ಪ್ರಭುತ್ವ. ಹಾಗಾದರೆ ಈ ಜನರನ್ನು ಸುಲಭವಾಗಿ ಬಳಕೆ ಮಾಡಿಕೊಳ್ಳಲು ಧಾರ್ಮಿಕತೆಯಷ್ಟು ಪ್ರಶಸ್ತವಾದ ಸಾಧನ ಇನ್ನೊಂದಿಲ್ಲ. ಧಾರ್ಮಿಕತೆಯನ್ನು ಇಂಬಿಟ್ಟುಕೊಂಡಿರುವ ಪುರಾಣ ಪುಣ್ಯ ಕಥೆಗಳನ್ನು, ಅವುಗಳಲ್ಲಿಯ ನಾಯಕರನ್ನು ಢಾಳವಾಗಿಸಿದಷ್ಟು ಕೋಮುವಾದ ಸಮೃದ್ಧಗೊಳ್ಳುತ್ತದೆ. ಹೀಗಾಗಿಯೇ ಬಿಜೆಪಿಯಂಥ ಕೋಮುವಾದಿ ಪಕ್ಷಗಳಿಗೆ ರಾಮ, ಕೃಷ್ಣ, ದತ್ತಾತ್ರಯ, ಹನುಮಂತ ಇತ್ಯಾದಿ ಪೌರಾಣಿಕ ವೀರರು ದಾಳವಾಗಿ ಬಳಕೆಯಾಗಬೇಕು.

ಕರ್ನಾಟಕದ ದಕ್ಷಿಣ ಭಾಗದಲ್ಲಿ 'ದತ್ತಪೀಠ'ವಾದರೆ ಉತ್ತರದಲ್ಲಿಯೂ ಒಂದು ಪ್ರಯೋಗ ಶಾಲೆ ಬೇಕಲ್ಲವೆ? ಅವರ ವಕ್ರದೃಷ್ಟಿಗೆ ಬಲಿಯಾಗುತ್ತಿರುವುದೇ ಕೊಪ್ಪಳ ಜಿಲ್ಲೆ ಗಂಗಾವತಿ ಬಳಿಯ ಆನೆಗುಂದಿ ಪರ್ವತ ಸಾಲಿನಲ್ಲಿ ನೀರಭ್ರ ಆಕಾಶದ ನೀಲ ಕ್ಯಾನವಾಸಿನಲ್ಲಿ ಮುಚ್ಚಟೆಯಾಗಿ ನೆಲೆಸಿದ್ದ 'ಅಂಜನಾದ್ರಿ' ಎಂಬ ಪುರಾಣ ಪ್ರಸಿದ್ಧ ತಾಣ!. ಶತಮಾನಗಳ ಕಾಲ ಹೊರಗಿನವರಿಗೆ ಅಜ್ಞಾತವಾಗಿದ್ದ ರಾಮಬಂಟ ಹನುಮಂತನೆಂಬ ಬುಡಕಟ್ಟು ವೀರನ ನೆಲೆ ಎಂದು ಹೇಳಲಾಗುತ್ತಿರುವ ಈ ಕನ್ನೆಲ ಸ್ಥಳೀಯರ ಅಧಿದೈವ.

ಪುರಾಣದಲ್ಲಿ ಹನುಮಂತ:

ಸ್ಕಂದ ಪುರಾಣದಲ್ಲಿ ಉಲ್ಲೇಖಗೊಂಡಿರುವ ಕಿಷ್ಕಿಂದೆ, ಪಂಪಾ ಸರೋವರ, ಅಂಜನಾದ್ರಿ ಪರ್ವತ, ವಾಲಿ ಗುಹೆ, ಸುಗ್ರೀವ ವನ ಇತ್ಯಾದಿಗಳ ಸ್ಮೃತಿ ಹೊತ್ತಿರುವ ತಾಣಗಳು ಇಲ್ಲಿಯೇ ಇವೆ ಎಂಬುದು ಶತಮಾನಗಳ ನಂಬಿಕೆ, ವಾಡಿಕೆ. ಈ ಎಲ್ಲ ಐತಿಹ್ಯಗಳು ಭಾರತದ ಜನಪದ ಕಾವ್ಯಗಳಲ್ಲೊಂದಾದ ರಾಮಾಯಣದೊಂದಿಗೆ ತಳಕು ಹಾಕಿಕೊಂಡದ್ದು ಇದೆಯಷ್ಟೇ. ಪುರಾಣದ ಹನುಮಂತನು ನಮ್ಮವರ ಬಾಯಲ್ಲಿ ದೇಸಿ ಸೊಗಡಿನ ಹಣಮಂತ, ಅನಮಂತ, ಆಂಜನೆಯ, ಮಾರುತಿ ಮುಂತಾಗಿ ಕರೆಸಿಕೊಳ್ಳುತ್ತಾನೆ. ಪುರಾಣ ಕಥೆಯಲ್ಲಿ ಈತ ಅಂಜನಾದೇವಿ ಮತ್ತು ಕಪಿಗಳ ರಾಜನಾದ ಕೇಸರಿಗೆ ಹುಟ್ಟಿದ್ದಾನೆ. ಈತನ ಹುಟ್ಟು ಕುರಿತು ಹತ್ತಾರು ಕಥೆಗಳಿವೆ. ಈತ ಶಿವಾಂಶ ಸಂಭೂತನು ಹೌದು, ವಾಯು ಪುತ್ರನು ಹೌದು. ಮಗುವಾಗಿದ್ದಾಗಲೆ ಹಣ್ಣೆಂದು ಭಾವಿಸಿ ಸೂರ್ಯನನ್ನೆ ತಿನ್ನಲು ಹೋಗಿ ಇಂದ್ರನಿಂದ ಚಚ್ಚಿಸಿಕೊಂಡು ದವಡೆ ಉಬ್ಬಿಸಿಕೊಂಡವನು. ಸೂರ್ಯ, ಇಂದ್ರ, ಶಿವ ಎಲ್ಲರೂ ಇವನ ವ್ಯಕ್ತಿತ್ವಕ್ಕೆ ಮನಸೋತು ಹರಸಿದ್ದಾರೆ. ಇಂಥ ಅಪ್ರತಿಮ ಬಲವಂತನೂ ಆತ್ಮಿಕ ಶಕ್ತಿ ಉಳ್ಳಾತನೂ ಆದ ಹನುಮಂತ ರಾಮನ ಆಗಮನದೊಂದಿಗೆ ಬೆಳಕಿಗೆ ಬರುತ್ತಾನೆ. ರಾಮನಿಗೆ ಸುಗ್ರೀವನನ್ನು ಪರಿಚಯಿಸುತ್ತಾನೆ. ರಾಮಚಂದ್ರ ವಾಲಿಯ ವಧೆ ಮಾಡುತ್ತಾನೆ. ಸುಗ್ರೀವ, ಜಾಬವಂತ ಮುಂತಾದ ಕಪಿ ವೀರರ ಪ್ರೇರಣೆಯಿಂದ ಸೀತೆಯನ್ನು ಲಂಕೆಯಲ್ಲಿ ಪತ್ತೆ ಹಚ್ಚಿ ರಾಮನ ದುಗುಡ ಇಲ್ಲವಾಗಿಸುತ್ತಾನೆ. ನಂತರ ನಡೆದದ್ದು ಲಂಕಾ ದಹನ, ರಾವಣ ವಧೆ, ರಾಮಪಟ್ಟಾಭೀಷೇಕ ಇವೆಲ್ಲವೂಗಳು ಜನಜನಿತವೇ ಆಗಿವೆ. ರಾಮಾಯಣದಲ್ಲಿನ 'ಸುಂದರ ಕಾಂಡ' ಭಾಗವು ಹನುಮಂತನ ಮಹಿಮಾತಿಶಯದ ವರ್ಣನೆಗೆ ಮೀಸಲಾಗಿದೆ.

> ಸಂಘ ಪರಿವಾರಿಗಳ ಕ್ಷುದಾಗ್ನಿಯಲ್ಲಿ ತುಂಬಾ ಸರಳವೂ ಶಾಂತವೂ ಸೌಹಾರ್ದಯುತನಾಗಿದ್ದ ಅಂಜನಾದ್ರಿಯ ಹನುಮಂತ ಈಗ ಸಂಘಪರಿವಾರದ ಕೈಗೆ ಸಿಕ್ಕು ದಿಕ್ಕೆಟ್ಟು ಹೋಗಿದ್ದಾನೆ.

ಸ್ಥಳೀಯ ಇತಿಹಾಸಕಾರರಾದ ಪ್ರೊ.ಶರಣಬಸಪ್ಪ ಕೋಲಕಾರ್ ಅವರು ಈ ಕುರಿತು ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಅವರ ಹೇಳಿಕೆ ಪ್ರಕಾರ. "ಹನುಮಂತ ಸ್ಥಳೀಯ ಬುಡಕಟ್ಟು ಜನಾಂಗದ ವೀರ. ಬುಡಕಟ್ಟುಗಳ ಉಳಿವಿಗಾಗಿ ಹತ್ತಾರು ಹೋರಾಟಗಳನ್ನು ಮಾಡಿರುವ ಸಾಧ್ಯತೆ ಇದೆ. ವಾನರರು ಎಂಬುದು ಸ್ಥಳೀಯ ಬುಡಕಟ್ಟು. ಅವರು ಅಪ್ಪಟ ಮನುಷ್ಯರು. ಕೇಸರಿ, ವಾಲಿ, ಸುಗ್ರೀವಾದಿಗಳು ಇಲ್ಲಿನ ಬುಡಕಟ್ಟು ಆಳರಸರು. ಇವರನ್ನೆಲ್ಲ ಕೋತಿಯಂತೆ ಚಿತ್ರಿಸುವ ಪುರಾಣ, ಇವರ ಹೆಂಡತಿಯರಾದ ತಾರಾ, ಅಂಜನಾದೇವಿಯರನ್ನು ಮನುಷ್ಯರ ರೂಪವಾಗಿಸಿದೆ. ಆಂಜನೇಯ ವಾಲಿ ಮುಂತಾದವರಿಗೆ ಎರಡು ಕೈಗಳನ್ನು ತೋರಿಸಲಾಗಿದೆ. ಮೂಲತಃ ಮನುಷ್ಯರಾಗಿದ್ದ ಇವರನ್ನು ಉತ್ತರದ ಕವಿಗಳು ಕಪಿಗಳಾಗಿ ಚಿತ್ರಿಸಿ, ರಾವಣಾದಿಗಳನ್ನು ರಾಕ್ಷಸರನ್ನಾಗಿ ಮಾಡಿದ್ದಿದೆ. ಇದು ಉತ್ತರವು ದಕ್ಷಿಣದ ಮೇಲೆ ಮಾಡಿದ ದುರಾಕ್ರಮಣ ಎನ್ನುತ್ತಾರೆ. ರಾಮಾಯಣದಲ್ಲಿ ಬಂದಿರುವ ಕಿಷ್ಕಿಂದೆ, ಮಾಲ್ಯವಂತ ಪರ್ವತ ಅವೆಲ್ಲ ಇಲ್ಲಿನ ಮೂಲ ಸ್ಥಳಗಳು. ಹೀಗಾಗಿ ಹನುಮಂತ ಹುಟ್ಟಿದ ಸ್ಥಳ ಇದೇ ಆನೆಗುಂದಿಯ ಅಂಜನಾದ್ರಿ ಎಂಬುದು ಅವರ ಸಂಶೋಧನೆಯ ಅಭಿಪ್ರಾಯ. ಆದರೆ ಇತ್ತೀಚೆಗೆ ತಿರುಪತಿ, ಮಧ್ಯಪ್ರದೇಶ, ಛತ್ತಿಸಗಢ ಇತ್ಯಾದಿಗಳಲ್ಲಿ ಹನುಮನ ಜನನವಾಗಿದೆ. ತಮ್ಮದೆ ಹನುಮ ನಾಡು ಎಂಬ ಕೂಗು ಕೇಳಿ ಬರುತ್ತಿದೆಯಾದರೂ ಅವುಗಳಿಗೆ ಯಾವುದೇ ಗಟ್ಟಿಯಾದ ಪುರಾವೆಗಳಿಲ್ಲ. ಆದರೆ ರಾಮಾಯಣದಲ್ಲಿ ಬರುವ ತಾರಾ ಪರ್ವತ, ಹನುಮನಹಳ್ಳಿಯಲ್ಲಿರುವ ಋಷಮುಖ ಪರ್ವತ, ವಾಲಿ ಗುಹೆ, ಅಂಜನಾದ್ರಿ, ಹಂಪಿಯಲ್ಲಿರುವ ಮಾತಂಗ ಪರ್ವತ ಇವೆಲ್ಲವೂ ಆದಿ ಕಾಲದಿಂದಲೂ ಇಲ್ಲಿಯೇ ಸ್ಥಿತವಾಗಿವೆ. ಆದಿ ಶಿಲಾಯುಧಿಂದಲೂ ಇಲ್ಲಿ ಮಾನವವಾಸ ಇದ್ದ ವೆಗ್ಗಳ ಕುರುಹುಗಳು ದೊರೆತಿವೆ. ಉತ್ತರದವರಿಗೆ ಕಬ್ಬಿಣ ಗೊತ್ತೆ ಇರದ ಹಂತದಲ್ಲಿ ಇಲ್ಲಿ ಕಬ್ಬಿಣದ ಅದಿರು ದೊಡ್ಡ




ಪ್ರಮಾಣದಲ್ಲಿ ಕಂಡಿದೆ. ಬಾಣಗಳಿಗೆ ಕಬ್ಬಿಣದ ಮೊನಚು ಸುರುವಾದದ್ದು ಇಲ್ಲಿಂದಲೆ" ಎಂದು ಹೇಳುತ್ತಾರೆ. ಈಗಲೂ ಹಂಪಿಯ ಸುತ್ತಲೂ ಸೊಂಡೂರು ಮುಂತಾದೆಡೆ ಗುಣಮಟ್ಟದ ಅದಿರು ನಿಕ್ಷೇಪಗಳಿರುವುದನ್ನು ಅವರು ನೆನಪಿಸುತ್ತಾರೆ. ಹನುಮಂತನ ಹುಟ್ಟು, ಸ್ಥಳಗಳ ಬಗ್ಗೆ ಹಲವರು ಅಭಿಪ್ರಾಯಗಳೂ ಇವೆ. ಈ ಕುರಿತು ಇನ್ನಷ್ಟು ಸಂಶೋದನೆಗಳು ಬೆಳಕು ಚೆಲ್ಲ ಬೇಕು. ಕರ್ನಾಟಕದಲ್ಲಿ ಹಲವೆಡೆ ಅಂಜನಾದ್ರಿ ಬೆಟ್ಟಗಳು, ಆಂಜನೇಯ ಅಲ್ಲೇ ಹುಟ್ಟಿದ ಎನ್ನುವ ಹಲವು ಸ್ಥಳಗಳಿವೆ. ಮೂಲದಲ್ಲಿ ಹಂಪೆಯ ದೇವತೆ ಹಂಪಮ್ಮ ಇದದ್ದು ಈಗ ಪಂಪಮ್ಮ ಆಗಿದೆ. ಈಗಲೂ ಇಲ್ಲಿ ಮನೆಗೊಬ್ಬ ಅಂಜನಮ್ಮ, ಹಂಪಮ್ಮ ಇರುತ್ತಾರೆ. ಜನಪದರ ಹಾಡಿನಲ್ಲಿ "ಪಂಪಾ ಸರೋವರದೊಳಗ ಹಂಪಮ್ಮ ಕುಂತಾಳ" ಎಂದು ಹಾಡಲಾಗುತ್ತಿದೆ. ಅಂಜನಾದ್ರಿ ಬೆಟ್ಟದಿಂದ ಹತ್ತಿರವಿರುವ ಪಂಪಾ ಸರೋವರದ ದಂಡೆಯ ಮೇಲೆ ಹಂಪಮ್ಮನ ವಿಗ್ರಹವೇ ಇತ್ತು. ಅವಳ ಕೈಯಲ್ಲಿ ತ್ರಿಶೂಲ, ಡಮರು ಇತ್ತು. ಈ ನಡುವೆ ಉತ್ತರದವರು ಬಂದು ಮೂಲದ ಮೂರ್ತಿ ತೆಗೆದು 'ವಿಜಯಲಕ್ಷ್ಮೀ' ಎಂಬ ನಾಜೂಕಿನ ವಿಗ್ರಹ ಸ್ಥಾಪಿಸಿದ್ದಾರೆ. ಶಿವ ಸಂಸ್ಕೃತಿಯಿಂದ ವಿಷ್ಣು ಸಂಸ್ಕೃತಿಗೆ ಅದನ್ನು ಪಲ್ಲಟಗೊಳಿಸುತ್ತಿದ್ದಾರೆ ಎನ್ನುತ್ತಾರೆ ಪ್ರೊ. ಕೋಲಕರ್. ಹಂಪೆಯಲ್ಲಿ ಎರಡು ಪ್ರಮುಖ ಆಂಜನೇಯ ದೇವಸ್ಥಾನಗಳು ವಿಜಯ ನಗರದ ಕಾಲದಿಂದಲೂ ಇವೆ. ಈ ನಾಡು ಮೂಲತಃ ಶಿವ ಸಂಸ್ಕೃತಿಯೊಂದಿಗೆ ತಳಕು ಹಾಕಿಕೊಂಡಿದೆ. ವಾನರರು ಶಿವನ ಆರಾಧಕರು ಎಂಬುದು ವಿದ್ವಾಂಸರ ಅಂಬೋಣ.

ಸ್ಥಳೀಯರ ಜನಪದ ಹನುಮಂತ:

ಸ್ಥಳೀಯರಿಗೆ ಅಂಜನಿ ಪುತ್ರ ಹನುಮಂತ ಆರಾಧ್ಯ ದೈವ. ಆನೆಗುಂದಿ ಸುತ್ತಲಿನ ಚಿಕ್ಕರಾಮಪುರ, ವಿರುಪಾಪುರ ಗಡ್ಡಿ, ಹನುಮನ ಹಳ್ಳಿ, ದಾಸನಳ್ಳಿ, ಹಿರೇಬೆಣಕಲ್ಲ, ಈಚನಾಳ, ಡಗ್ಗಿ ಹೊಸಕೇರಿ, ಲಕ್ಷ್ಮೀ ಕ್ಯಾಂಪ್, ಲಿಂಗರಾಜ ಕ್ಯಾಂಪ್, ಹೊಸಳ್ಳಿ, ಸಂಗಾಪೂರ ಹೀಗೆ ಹತ್ತಾರು ಹಳ್ಳಿಯ ಜನರು ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಕಾಲ್ನಡಿಗೆಯಿಂದ ಅಂಜನಮ್ಮನ ಗುಡ್ಡಕ್ಕೆ ಬಾಜಾ ಬಜಂತ್ರಿಯೊಂದಿಗೆ ತೆರಳಿ ಅಲ್ಲಿಯ ಚಿಕ್ಕ ದೇಗುಲದಲ್ಲಿರುವ ರೂಕ್ಷ ಹನುಮ ಮೂರ್ತಿಯನ್ನು ಪೂಜಿಸಿ ಬಿಂದಿಗೆಯಲ್ಲಿ 'ತೀರ್ಥ'ದ ನೀರು ಹೊತ್ತು ತಮ್ಮೂರುಗಳಿಗೆ ಮರಳುತ್ತಾರೆ. ಅದನ್ನು ಅವರು ಗಂಗಸ್ಥಳ ಪೂಜೆ ಎಂತಲೂ ಕರೆಯುತ್ತಾರೆ. ಅದೇ ನೀರಿನಿಂದ ಊರವರೆಲ್ಲ ಸೇರಿ ಅಡುಗೆ ಮಾಡಿ ತಮ್ಮೂರಿನಲ್ಲಿರುವ ಹನುಮಂತನನ್ನು ಪೂಜಿಸುತ್ತಾರಂತೆ. ಜಾತಿ, ಭೇದಗಳಿಲ್ಲದೆ ಊರವರೆಲ್ಲ ಕಲೆತು ನಡೆಸುವ ಜಾತ್ರೆ ಅದಾಗಿರುತ್ತದೆ. ಇದೆಲ್ಲಾ ಹೆಚ್ಚು ಗದ್ದಲ, ಗಲಾಟೆ ಇಲ್ಲದ ತೀರಾ ಸಹಜ ಕಾರ್ಯವಾಗಿತ್ತು. ಅಲ್ಲೆಲ್ಲೂ ಈವರೆಗೂ ಹನುಮ ಮಾಲೆ ಧರಿಸುವುದು, ಬಿಚ್ಚುವುದು ಅಂತ ಇರಲೇ ಇಲ್ಲ. ಮುಖ್ಯವಾಗಿ ಹನುಮಂತ ಎಲ್ಲ ತಳಸಮುದಾಯದ ದೇವರು. ಎಲ್ಲ ದುಡಿಯುವ ಜನರು ಹನುಮಂತನ ಒಕ್ಕಲು. ಲಿಂಗಾಯತರಿಂದ ಹಿಡಿದು ದಲಿತ, ಕುರುಬ, ಕಬ್ಬಲಿಗ, ನೇಕಾರ, ರೆಡ್ಡಿ, ಈಳಗೇರ, ಉಪ್ಪಾರ ಇತ್ಯಾದಿ ಕುಲ ಹದಿನೆಂಟು ಜಾತಿಯವರು ಹನುಮಂತನನ್ನು ಪೂಜಿಸುತ್ತಾರೆ. ಈ ಭಾಗದಲ್ಲಿ ಊರಿಗೊಂದು ಹನುಮಂತನ ಗುಡಿ ಇದ್ದೇ ಇರುತ್ತವೆ. ಈ ಭಾಗದವರಿಗೆ ರಾಮ ಅಷ್ಟಾಗಿ ಗೊತ್ತಿಲ್ಲ. ಆದರೆ ಹನುಮಂತ ಮಾತ್ರ ಬಹುತೇಕ ಗ್ರಾಮಗಳಲ್ಲಿ ಕಡ್ಡಾಯ ದೇವರು. "ಊರ ಸುಟ್ಟರೂ ಹನುಮಪ್ಪ ಹೊರಗ" ಎಂಬ ಗಾದೆಮಾತು ಇದೆ. ಹೆಚ್ಚು ಕಡಿಮೆ ಊರ ಹೊರಗಿನ ಬಯಲಲ್ಲಿ ಹನುಮಪ್ಪನ ಗುಡಿ ಇರುತ್ತವೆ. ಊರಿಗೆ ಯಾರೆ ಹೊಸಬರು ಬಂದರೂ ಮೊದಲು ಹನುಮಪ್ಪನ ಗುಡಿಗೆ ಬಂದೇ ಬರುತ್ತಾರೆ. ಮದುವೆ, ಕಿರಗುಣಿ, ಜವಳ ಇತ್ಯಾದಿ ಏನೇ ಸಮಾರಂಭಗಳಿರಲಿ ಬೀಗರು ಮೊದಲು ಹನುಮಪ್ಪನ ಗುಡಿಗೆ ಬರುತ್ತಾರೆ. ಗುಡಿಯ ಪೌಳಿಯಲ್ಲೊಂದು ಜಮಖಾನೆ ಹಾಸಿ ಬೀಗರು ಪರಸ್ಪರ ಸಕ್ಕರೆ ತಿನಿಸಿ ಆಲಂಗಿಸಿಕೊಳ್ಳುತ್ತಾರೆ. ಇದನ್ನು ಇದಿರು ಭೆಟ್ಟಿ ಎನ್ನುವುದು ಉಂಟು. ಮನೆಯಲ್ಲಿ ಏನೇ ಅವಘಡ ಸಂಭವಿಸಿದಾಗಲೂ ಒಂದು ರಾತ್ರಿ ಮನೆ ಮಂದಿಯೆಲ್ಲ ಹನುಮಪ್ಪನ ಪೌಳಿಯಲ್ಲಿ ಮಲಗಿ ಬರುವ ವಾಡಿಕೆಯೂ ಕೆಲವೊಂದು ಕಡೆ ಇದೆ. ಹನುಮಂತ ನಮ್ಮನ್ನು ಶನಿ ಕಾಟದಿಂದ ತಪ್ಪಿಸುತ್ತಾನೆ ಎಂಬ ನಂಬಿಕೆಯೂ ಇದೆ. ಆದ್ದರಿಂದಲೇ ಶನಿವಾರ ಹನುಮಪ್ಪನ ವಾರವಾಗಿದೆ. ಶನಿಯಿಂದ ರಕ್ಷಣೆ ಕೊಡುವಾತ ಈತ. ಮಕ್ಕಳು ಅಂಜಿದರೆ, ಹುಡುಗಿಯರು ದೊಡ್ಡವರಾದರೆ ಹನುಮಪ್ಪನಿಗೆ ಹೋಗಿ ಕಾಯಿ, ಕರ್ಪೂರ ಮಾಡುವುದು ವಾಡಿಕೆ. ಹೀಗೆ ವೆಗ್ಗಳ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಗತಿಗಳು ಹನುಮಂತನೊಂದಿಗೆ ಬೆಸೆದುಕೊಂಡಿವೆ. ಗ್ರಾಮದಲ್ಲಿ ಪ್ರತಿಯೊಂದು ಜಾತಿಗೂ ತಮ್ಮದೆ ದೇವರುಗಳು ಇರುತ್ತವೆ. ಆದರೆ ಹನುಮಂತ ಮಾತ್ರ ಎಲ್ಲ ಜಾತಿಯವರಿಗೂ ಕಾಮನ್ ದೇವರು ಆಗಿರುತ್ತಾನೆ. ಸಾಮಾನ್ಯವಾಗಿ ಹಿಂದುಳಿದ ಸಮುದಾಯಗಳು ತುಂಬಾ ಆಸ್ಥೆಯಿಂದ ಹನುಮಂತನನ್ನು ಪೂಜಿಸುತ್ತವೆ. ಕಾರಣ ಹನುಮಂತನ ಸನ್ನಿಧಿಯಲ್ಲಿ ಜಾತಿ ಭೇದ ಅಷ್ಟಾಗಿ ಇರುವುದಿಲ್ಲ.



ಸಂಘ ಪರಿವಾರಿಗಳ ಕ್ಷುದಾಗ್ನಿಯಲ್ಲಿ ತುಂಬಾ ಸರಳವೂ ಶಾಂತವೂ ಸೌಹಾರ್ದಯುತನಾಗಿದ್ದ ಅಂಜನಾದ್ರಿಯ ಹನುಮಂತ ಈಗ ಸಂಘಪರಿವಾರದ ಕೈಗೆ ಸಿಕ್ಕು ದಿಕ್ಕೆಟ್ಟು ಹೋಗಿದ್ದಾನೆ. 2012 ನೇ ಸಾಲಿನಲ್ಲಿ ಹನುಮ ಮಾಲೆ ಧಾರಣೆ ಎಂಬ ಕೋಮುವಾದದ ವಿಷ ಬೀಜವನ್ನು ಆರ್.ಎಸ್.ಎಸ್. ನವರು ತಂದು ಹಾಕಿದ್ದಾರೆ. ಅದ್ಯಾವ ಮಾಯದಲ್ಲಿ ಅವರು ಬಂದರೋ ಸ್ಥಳೀಯರಿಗೆ ಅದು ಜ್ಞಾತವೇ ಆಗಿಲ್ಲವಂತೆ. ಮೊದಲ ವರ್ಷ ಸಂಘ ಪರಿವಾರಕ್ಕೆ ಸೇರಿದ ಬಜರಂಗದಳ ನೇತೃತ್ವದಲ್ಲಿ ಕೇವಲ 30 ಹುಡುಗರು 16 ಜನ ಹುಬ್ಬಳ್ಳಿಯಿಂದ ಮಾಲೆ ಧರಿಸಿ ಬೆಟ್ಟವನ್ನು ಹತ್ತಿ ಸುದ್ಧಿ ಮಾಡಿದರು. ಅನಂತರ ಮುಂದಿನ ವರ್ಷಗಳಲ್ಲಿ ಅದು ದಾಂಗುಡಿಯಿಟ್ಟು ಆರ್.ಎಸ್.ಎಸ್.–ಬಜರಂಗ ದಳ ದವರ ಅವಿರತ ಪ್ರಯತ್ನದಿಂದ ಹೆಚ್ಚು ಪ್ರಚಾರ ಪಡೆಯುತ್ತಿದೆ. ಪ್ರತಿ ವರ್ಷ ಹೊಸ್ತಿಲ ಹುಣ್ಣಿಮೆಗೆ 'ಹನುಮ ಮಾಲಾ' ವಿಸರ್ಜನೆ ಎಂಬ ವೃತ ಸುರು ಮಾಡಿದ್ದಾರೆ. ಹೊಸ್ತಲ ಹುಣ್ಣಿಮೆಯನ್ನು ಅನೂಚಾನವಾಗಿ ದತ್ತ ಜಯಂತಿ ಎಂದು ಆಚರಿಸಲಾಗುತ್ತದೆ. ಇದೇ ತಾರೀಖಿನಂದು ಬಾಬಾ ಬುಡನ್ ಗಿರಿಯಲ್ಲಿ ದತ್ತಮಾಲಾ ಸುರು ಮಾಡಿದ್ದಾರೆ. ಕಲಬುರಗಿ ಜಿಲ್ಲೆಯ ಘಾಣಗಾಪುರದಲ್ಲಿ ಇದೇ ದಿನದಂದು ಜಾತ್ರೆ ಇರುತ್ತದೆ. ಸಾಮಾನ್ಯವಾಗಿ ಎಲ್ಲೆಲ್ಲಿ ದತ್ತಪೀಠಗಳು ಅಲ್ಲೆಲ್ಲ ಹೊಸ್ತಲ ಹುಣ್ಣಿಮೆಯೆಂದು ಜಾತ್ರೆಗಳು ನೆರೆಯುತ್ತವೆ. ಹಾಗೇ ನೋಡಿದರೆ ದತ್ತ ಪರಂಪರೆಯು ಜಾತ್ಯಾತೀತ, ಧರ್ಮ ನಿರಪೇಕ್ಷತೆಯ ಆಚರಣೆಯಾಗಿದೆ. ನಾಥ ಪಂಥದ ಗುರು ಪರಂಪರೆಯೊಂದಿಗೆ ಗುರುತಿಸಿಕೊಂಡಿರುವ ಈ ಆಚರಣೆಯ ಹಿನ್ನೆಲೆಯಲ್ಲಿ ಬಹು ದೊಡ್ಡ ತಾತ್ವಿಕ ಅನ್ವೇಷಣೆ ಮತ್ತು ಅದರ ಭಾಗವಾಗಿ ಆಧ್ಯಾತ್ಮಿಕ ನಡೆಗಳು ಇವೆ. ದತ್ತಪೀಠಗಳಲ್ಲಿ ಅಸಂಖ್ಯ ಸಾಧುಗಳು, ಆರೂಢರು, ಬೈರಾಗಿಗಳು, ಶಾಕ್ತರು ಸೇರುವುದುಂಟು. ಅಲ್ಲಿ ಸೇರಿದ್ದವರ ಜಾತಿ ಪತ್ತೆ ಹಚ್ಚುವುದು ಸಾಧ್ಯವೆ ಇಲ್ಲ. ಹಲವು ಗುರುಪಂಥಗಳ ಸಂಗಮವಾಗಿ ಇವು ಗಮನ ಸೆಳೆಯುತ್ತವೆ. ನಿರಾಕಾರ, ನಿರವಯದ ಉಪಾಸಕರಾದ ಇವರು ಲೋಕ ಕಿಲ್ಬಿಷವನ್ನು ಅಂಟಿಸಿಕೊಳ್ಳದಂತೆ ನಡೆದವರು. ವೈದಿಕ ವರ್ಣಾಶ್ರಮವನ್ನು ಅತಿಗಳೆದ ಶ್ರಮಣ ಪರಂಪರೆಯನ್ನು ಅಪ್ಪಿಕೊಂಡವರು. ಇದರ ಹಿನ್ನೆಲೆಯಲ್ಲಿ ಬಹು ದೊಡ್ಡ ತಾತ್ವಿಕ ಸಂಘರ್ಷ ಮತ್ತು ಆಧ್ಯಾತ್ಮಿಕ ಹುಡುಕಾಟಗಳು ಇವೆ. ಇರಲಿ. ಅದು ಇಲ್ಲಿ ಅಪ್ರಸ್ತುತ.



ಇಂಥ ಅವಿರಳ ಪರಂಪರೆಗಳನ್ನು ಅಪಸವ್ಯಗೊಳಿಸಿ ಕೋಮುವಾದಿಕರಣಕ್ಕೆ ಬಲಿಯಾಗಿಸುತ್ತಿರುವುದು ಸಂಘಿಗಳ ನಿತ್ಯದ ದಾಂಧಲೆಯಾಗುತ್ತಿದೆ. ಮೂಲತಃ ಕೋಮು ಸಾಮರಸ್ಯಕ್ಕೆ ನೆಲೆವನೆಯಾಗಿದ್ದ ಕಲ್ಯಾಣ ಕರ್ನಾಟಕದತ್ತ ಅವರ ಕಾಕ ದೃಷ್ಟಿ ಬಿದ್ದಿದೆ. ಕಳೆದ ಹತ್ತಾರು ವರ್ಷಗಳಿಂದಲೂ ಈ ಭಾಗದಲ್ಲಿ ಕೋಮು ದಳ್ಳುರಿ ಹೊತ್ತಿಸುವ ಹತ್ತಾರು ಪ್ರಯತ್ನಗಳನ್ನು ಅವರು ಮಾಡುತ್ತಲೆ ಇದ್ದಾರೆ. ಆದರೆ ಅವರು ನಿರೀಕ್ಷಿಸಿದಷ್ಟು ಯಶಸ್ಸು ಸಿಗುತ್ತಿಲ್ಲ. 2005 ರಲ್ಲಿ ಕಲಬುರಗಿಯಲ್ಲಿಯೂ ಇಂಥದೊಂದು ಪ್ರಯತ್ನ ಮಾಡಿ ಸೋತದ್ದು ಈಗ ಇತಿಹಾಸ. ಹೀಗೆಂದು ಅವರು ರಾಜಕೀಯವಾಗಿ ಯಶಸ್ಸು ಸಾಧಿಸಿಲ್ಲ ಅಂತೇನೂ ಅಲ್ಲ. ಕಾಂಗ್ರೇಸನ ಜನ ವಿರೋಧಿ ನೀತಿ, ಆಡಳಿತಾತ್ಮಕ ವೈಫಲ್ಯಗಳು, ನಿಷ್ಕ್ರೀಯತೆ, ಅರಾಜಕತೆ, ಅಸಡ್ಡೆತನಗಳಿಂದಾಗಿ ಬಿಜೆಪಿ ಇಲ್ಲಿ ಹುಲುಸಾಗಿಯೇ ಬೆಳೆದಿದೆ. ಆದರೆ ಸಂಘ ಪರಿವಾರದ ವಿಷಾನಿಲ ದಕ್ಷಿಣದಲ್ಲಿಯಂತೆ ದಾವಾನಲವಾಗಿಲ್ಲ. ಆದಾಗ್ಯೂ ಕೋಮು ಲಾವಾರಸವೊಂದು ಒಳಗೊಳಗೆ ಕುದಿಯುತ್ತಿರುವುದನ್ನು ಅಲ್ಲಗಳೆಯಲಾಗದು.

ಕಲಬುರಗಿಯಲ್ಲಿ ಆಗದ್ದು ಕೊಪ್ಪಳದಲ್ಲಿ ಆಗು ಮಾಡಲು ಅವರ ನಿರಂತರ ಶ್ರಮ ಜಾರಿ ಇದೆ. ಹೊಸ್ತಲ ಹುಣ್ಣಿಮೆ ಪೂರ್ವದಲ್ಲಿ ಹನ್ನೊಂದು ದಿನ ಅಥವಾ ಒಂಬತ್ತು ದಿನ ಮುಂಚೆ ಹದಿಹರೆಯದ ಬಡ ಕಾರ್ಮಿಕ, ರೈತಾಪಿ, ನಿರುದ್ಯೋಗಿ ಹುಡುಗರು ಸಂಘಿಗಳ ನಿರ್ದೇಶನದಂತೆ ಮಾಲೆ ಹಾಕುತಾರೆ. ಚಿಕ್ಕ ತುಳಸಿ ಹಾರ ಹಾಕಿಕೊಂಡು ದಿನನಿತ್ಯ ಹನುಮಾನ ಚಾಲೀಸಿ ಪಠಿಸುವುದು. ಭಜನೆ ಮಾಡುವುದು. ಥೇಟ್ ಅಯ್ಯಪ್ಪಸ್ವಾಮಿಯ ವೃತದಂತೆ ಹಾಡು, ಪೂಜೆ, ಗಡ್ಡ ಬಿಡುವುದು ಇತ್ಯಾದಿಗಳನ್ನು ಕೆಲವರು ಮೈಗೂಡಿಸಿಕೊಂಡಿದ್ದಾರೆ. ವೃತ ಮುಗಿದ ನಂತರ ಅಂಜನಾದ್ರಿ ಬೆಟ್ಟಕ್ಕೆ ಬಂದು ಅಲ್ಲಿಯೇ ತುಳಸಿ ಮಾಲೆ ವಿಸರ್ಜಿಬೇಕು. ಅಂದಾಗಲೆ ವೃತ ಪೂರ್ಣ ಪ್ರಮಾಣದಲ್ಲಿ ಫಲಿಸುವುದೆಂಬ ನಂಬಿಕೆಯನ್ನು ಕಸಿ ಮಾಡಲಾಗಿದೆ.

ಈ ವರ್ಷ 2022 ಡಿಸೆಂಬರ್ 5 ರಂದು ಹನುಮ ಜಯಂತಿ ಪ್ರಯುಕ್ತ ಹನುಮ ಮಾಲಾಧಾರಿಗಳ ಮಾಲೆ ವಿಸರ್ಜನೆ ಇತ್ತು. ಒಂದೂವರೆ–2 ಲಕ್ಷ ಜನ ಸೇರುವರೆಂಬ ಸಂಘಪರಿವಾರ ಅಂದಾಜಿನಂತೆ ಜನ ಬರದಿರುವುದು ಮುಖ್ಯ ಬೆಳವಣಿಗೆ. ಬಂದವರೂ ಆ ದಿನ ಸುಮಾರು 20,000 ಜನ, ಇನ್ನೂ ಎರಡು, ಮೂರನೆಯ ದಿನವೂ 2–3 ಸಾವಿರ ಗಂಗಾವತಿ ನಗರದಲ್ಲಿ 5 ರಂದು ನಡೆದ ಬಜರಂಗದಳದ ಬಹಿರಂಗ ರ್‍ಯಾಲಿಯಲ್ಲಿ ಭಾಗಿಯಾದವರು ಕೇವಲ 500 ಜನ. ಇದಕ್ಕೆ ಒಂದು ಕಾರಣ ಕೋಮುಗಲಭೆ ಸಂಭವಿಸಬಹುದು ಎಂಬ ಭಯ. ಜೊತೆಗೆ ಪೋಲೀಸರ ಬಿಗಿ ಕ್ರಮಗಳು, ಬಿಜೆಪಿ ಶಾಸಕರ ಬಗೆಗಿನ ಅತೃಪ್ತಿ, ಇತ್ಯಾದಿ ಕಾರಣಗಳು ಎನ್ನಲಾಗುತ್ತಿದೆ. ಆದಾಗ್ಯೂ ಜನ ಕೋಮುವಾದ ಪ್ರಭಾವ, ಹಿಡಿತದಿಂದ ಪೂರ್ಣ ದೂರ ಸರಿದಿದ್ದಾರೆ ಎಂದು ಹೇಳಲಾಗುವುದಿಲ್ಲ. ಈ ಬಾರಿ ಶಾಂತಿಯುತವಾಗಿ ಹನುಮ ಮಾಲೆ ಮುಗಿದಿದೆ. ಆದರೆ ಸಂಘಪರಿವಾರ ಚುನಾವಣೆ ಹತ್ತಿರ ಇರುವುದರಿಂದ ಅದರ ರಾಜಕೀಯ ತಂತ್ರಗಳ ಬತ್ತಳಿಕೆಯಲ್ಲಿ ಏನಿದೆ? ಗೊತ್ತಿಲ್ಲ. ಆದರೆ ಜನತೆ ಸಾಮರಸ್ಯ, ಶಾಂತಿ ಕಾಪಾಡಿಕೊಳ್ಳುವುದು ಅತೀ ಅಗತ್ಯ.

ವಿರೋಧಿಗಳನ್ನು ಗುರಿಯಾಗಿಸುವ ಕಾರ್ಯಾಚರಣೆ

ಸರಕಾರ ಮತ್ತು ಎನ್‌ಐಎ ಮೇಲೆ ಕಟುದೋಷಾರೋಪಣೆ: ಸಿಪಿಐ(ಎಂ)

ಸ್ಟಾನ್ ಸ್ವಾಮಿಯವರ ಕಂಪ್ಯೂಟರಿನಲ್ಲೂ ಹುಸಿ ಕಡತಗಳನ್ನು ನೆಟ್ಟಿದ್ದರು!

ಅಂತಾರಾಷ್ಟ್ರೀಯ ಖ್ಯಾತಿಯ ಡಿಜಿಟಲ್ ಫೊರೆನ್ಸಿಕ್ ವಿಶ್ಲೇಷಣಾ ಕಂಪನಿ, ಆರ್ಸೆನಲ್ ಕನ್ಸಲ್ಟಿಂಗ್, ಬಿಡುಗಡೆ ಮಾಡಿರುವ ಹೊಸ ವರದಿಯ ಪ್ರಕಾರ, 2017 ರಿಂದ 2019 ರ ನಡುವೆ ಫಾದರ್ ಸ್ಟಾನ್ ಸ್ವಾಮಿ ಅವರ ಕಂಪ್ಯೂಟರ್‌ನಲ್ಲಿ ನಕಲಿ ದಾಖಲೆಗಳನ್ನು ಗುಪ್ತವಾಗಿ ಅಳವಡಿಸಲಾಗಿತ್ತು. ನಂತರ ಇವನ್ನು ಅವರು 'ರಾಷ್ಟ್ರ-ವಿರೋಧಿ' ಎನ್ನಲು ಪುರಾವೆಗಳಾಗಿ ಬಳಸಲಾಯಿತು. ಇದು ಸರಕಾರ ಮತ್ತು ಎನ್‌ಐಎ ಮೇಲೆ ಒಂದು ಅತ್ಯಂತ ಕಟುದೋಷಾರೋಪಣೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

2014 ರಿಂದ ಫಾದರ್ ಸ್ಟಾನ್ ಕಣ್ಗಾವಲಿನಲ್ಲಿ ಇದ್ದರು. ಈ ಅವಧಿಯಲ್ಲಿ ನಲವತ್ತು ಕಡತ(ಫೈಲು)ಗಳನ್ನು ಅವರ ಕಂಪ್ಯೂಟರಿನಲ್ಲಿ ಇಡಲಾಯಿತು. ಫೊರೆನ್ಸಿಕ್ ವರದಿಯ ಪ್ರಕಾರ ಅವನ್ನು ಅವರು ಎಂದಿಗೂ ನೋಡಲೇ ಇಲ್ಲ. ಸಾರ್ವಜನಿಕವಾಗಿ ಬಿಡುಗಡೆಯಾಗಿ ಲಭ್ಯವಿರುವ ಫೊರೆನ್ಸಿಕ್ ಸಾಕ್ಷ್ಯ ವಿಚಾರಣೆ ಪುಣೆ ಪೊಲೀಸರು ಸ್ಟಾನ್ ಸ್ವಾಮಿಯವರನ್ನು ಬಂಧಿಸಲಿದ್ದರು ಎಂಬುದು ಹ್ಯಾಕರ್‌ಗಳಿಗೆ ಮೊದಲೇ ತಿಳಿದಿತ್ತು ಎಂದು ಸೂಚಿಸುತ್ತದೆ ಎಂಬುದು ಇನ್ನೂ ಆಘಾತಕಾರಿ ಸಂಗತಿಯೆಂದು ಪೊಲಿಟ್‌ಬ್ಯುರೊ ಹೇಳಿದೆ. ಹಿಂದಿನ ದಿನವಷ್ಟೇ ಅವರು ತಮ್ಮ ಚಟುವಟಿಕೆಗಳ ಕುರುಹುಗಳನ್ನು ಅಳಿಸಲು ಪ್ರಯತ್ನಿಸಿದರು ಎಂದು ಹೇಳಲಾಗಿದೆ.

ಎಲ್ಲಕ್ಕಿಂತ ಹೇಯ ಸಂಗತಿಯೆಂದರೆ, ಸ್ಟಾನ್ ಸ್ವಾಮಿಯವರಿಗೆ ಜಾಮೀನು ನಿರಾಕರಿಸಲಾಯಿತು, ಅವರಿಗೆ ಕನಿಷ್ಟಸೌಲಭ್ಯಗಳನ್ನು ನಿರಾಕರಿಸಲಾಯಿತು, ಕಸ್ಟಡಿಯಲ್ಲಿ ಅವರ ಸಾವು ಕೊಲೆಗಿಂತ ಕಡಿಮೆ ಏನಲ್ಲ. ಅವರು ಎಂದಿಗೂ ಮಾಡದ ಅಪರಾಧದ ಆರೋಪ ಹೊತ್ತು ಕಸ್ಟಡಿಯಲ್ಲಿ ನಿಧನರಾದರು ಎಂದು ಪೊಲಿಟ್‌ಬ್ಯುರೊ ಈ ಸಂದರ್ಭದಲ್ಲಿ ನೆನಪಿಸಿದೆ.

ಇತರ ಆರೋಪಿಗಳ ಸಾಧನಗಳ ಫೊರೆನ್ಸಿಕ್ ವಿಚಾರಣೆಗಳನ್ನು ಅನುಸರಿಸಿ ಬಂದಿರುವ ಐದನೇ ವರದಿ ಇದು, ಆರೋಪಕ್ಕೆ ಗುರಿಪಡಿಸಬೇಕಾದವರ ಕಂಪ್ಯೂಟರ್‌ಗಳಲ್ಲಿ ನುಸುಳಿ ನಕಲಿ ಫೈಲ್‌ಗಳನ್ನು ಇರಿಸುವ ಮಾದರಿಯನ್ನು ಅನುಸರಿಸಲಾಗಿದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ, ಇದರ ಬಗ್ಗೆ ಆರೋಪಿಗಳಿಗೆ ಏನೇನೂ ತಿಳಿದಿರಲಿಲ್ಲ, ಅಲ್ಲದೆ, ಈ ವಿಚಾರಣೆ ತೋರಿಸುವಂತೆ ಅವರು ಈ ಕಡತಗಳನ್ನು ನೋಡಿಯೂ ಇಲ್ಲ. ಆದರೂ ಈ ನಕಲಿ ಕಡತಗಳೇ ಭೀಮಾಕೋರೆಗಾಂವ್ ಪ್ರಕರಣದ ಎಲ್ಲಾ ಆರೋಪಿಗಳ ವಿರುದ್ಧ ಮುಖ್ಯ ಸಾಕ್ಷ್ಯ ಎಂದು ಹೇಳಲಾಗುತ್ತಿದೆ. ಅವರಲ್ಲಿ ಹೆಚ್ಚಿನವರನ್ನು ಯು.ಎ.ಪಿ.ಎ. ಕರಾಳ ನಿಬಂಧನೆಗಳ ಅಡಿಯಲ್ಲಿ ಜೈಲಿನಲ್ಲಿಡಲಾಗಿದೆ.

ಎನ್‌ಐಎ ಈ ಸಾಕ್ಷ್ಯದ ಬಗ್ಗೆ ತನ್ನದೇ ತನಿಖೆಯನ್ನು ನಡೆಸುವುದಿರಲಿ, ಇದು ಸಾಕ್ಷ್ಯವೆಂದು ಒಪ್ಪಿಕೊಳ್ಳಲು ಕೂಡ ನಿರಾಕರಿಸಿರುವುದು ಅತ್ಯಂತ ಖಂಡನೀಯ. ಎನ್‌ಐಎ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಕೇಂದ್ರ ಸರಕಾರ ಕೂಡ ಈ ವರದಿಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿರುವುದು ಖಂಡನೀಯ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.



(ವ್ಯಂಗ್ಯಚಿತ್ರ: ರಾಜೇಂದ್ರ ಧೋಡಪ್‌ಕರ್)

ಹಿಂದಿನ ವರದಿಗಳ ಜೊತೆಗೆ ಇತ್ತೀಚಿನ ಈ ವರದಿಯು ಈ ಸರ್ಕಾರ ಮತ್ತು ಎನ್‌ಐಎ ತಾವೇ ಸೃಷ್ಟಿಸಿದ ಪುರಾವೆಗಳಲ್ಲದೆ ಬೇರೆ ಯಾವುದೇ ಪುರಾವೆಗಳಿಲ್ಲದವರನ್ನು ಗುರಿಯಾಗಿಸಲು ಮತ್ತು ಜೈಲಿಗೆ ತಳ್ಳಲು ಅನುಸರಿಸುತ್ತಿರುವ ಕಾರ್ಯವಿಧಾನದ ಬಗ್ಗೆ ಒಂದು ಕಟುವಾದ ದೋಷಾರೋಪಣೆಯಾಗಿದೆ ಎಂದು ವರ್ಣಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇಂದು ಈ ಅಪಾಯಕಾರಿ ತಂತ್ರಜ್ಞಾನ ಮತ್ತು ದುಷ್ಟ ತಂತ್ರಾಂಶಕ್ಕೆ ಭೀಮಾಕೋರೆಗಾಂವ್ ಬಂಧಿತರು ಗುರಿಯಾಗಿದ್ದಾರೆ, ನಾಳೆ ಈ ಆಳುವ ವ್ಯವಸ್ಥೆಯ ಯಾವುದೇ ವಿರೋಧಿಯನ್ನು ಇದೇ ರೀತಿ ಗುರಿಯಾಗಿಸಬಹುದು ಎಂದು ಎಚ್ಚರಿಸಿದೆ.

ಎಲ್ಲಾ ಭೀಮಾಕೋರೆಗಾಂವ್ ಆರೋಪಿಗಳನ್ನು ತಕ್ಷಣವೇ ಜೈಲಿನಿಂದ ಬಿಡುಗಡೆ ಮಾಡಬೇಕು, ಎನ್‌ಐಎ ಅವರ ಜಾಮೀನು ಅರ್ಜಿಗಳನ್ನು ಮತ್ತು ಅಥವಾ ಬಿಡುಗಡೆ ಮೇಲ್ಮನವಿಗಳನ್ನು ನಿರಾಕರಿಸಬಾರದು ಮತ್ತು ಲಭ್ಯವಿರುವ ಫೊರೆನ್ಸಿಕ್ ಪುರಾವೆಗಳನ್ನು ಗಣನೆಗೆ ತೆಗೆದುಕೊಂಡು ಪರಿಣಿತ ನ್ಯಾಯೋಚಿತ ಮರು-ಪರೀಕ್ಷೆಯನ್ನು ಒಂದು ಕಾಲಮಿತಿಯ ಚೌಕಟ್ಟಿನಲ್ಲಿ ನಡೆಸಬೇಕು ಎಂದು ತಮ್ಮ ಪಕ್ಷ ಆಗ್ರಹಿಸುವುದಾಗಿ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ದುಷ್ಟಕಾರ್ಯಾಚರಣೆಯ ಮೇಲೆ ಪರದೆ ಎಳೆಯುವ ಯತ್ನ–ಬೃಂದಾಕಾರತ್

ಈ ಫೊರೆನ್ಸಿಕ್ ತನಿಖೆಯಲ್ಲಿ ಕಂಡು ಬಂದ ಸಂಗತಿಗಳು ಸಾರ್ವಜನಿಕವಾಗಿ ಲಭ್ಯ ಇವೆ. ಭಾರತದ, ಮಾತ್ರವಲ್ಲ ಜಗತ್ತಿನ ಎಲ್ಲ ಪತ್ರಿಕೆಗಳಲ್ಲಿ ಇದು ಪ್ರಕಟವಾಗಿದೆ. ನಾಗರಿಕ ಸ್ವಾತಂತ್ರ್ಯಗಳು ಮತ್ತು ನಾಗರಿಕ ಹಕ್ಕುಗಳ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇರುವ ಯಾವುದೇ ಪ್ರಜಾಪ್ರಭುತ್ವ ದೇಶವಾದರೂ ಈ ವರದಿಗಳನ್ನು ಗಂಭೀರವಾಗಿ ತೆಗೆದುಕೊಂಡು, ಕನಿಷ್ಟವಾಗಿ ಒಂದು ನ್ಯಾಯಯುತ ತನಿಖೆಯನ್ನಾದರೂ ನಡೆಸಬೇಕಿತ್ತು, ಮತ್ತು ಆರೋಪಿಯನ್ನು ಜಾಮೀನಿನ ಮೇಲಾದರೂ ಬಿಡುಗಡೆ ಮಾಡಬೇಕಿತ್ತು. ಇದರ ಬದಲು ಎನ್‌ಐಎ ಮತ್ತು ಕೇಂದ್ರ ಸರಕಾರ ಈ ವರದಿಗಳನ್ನು ಸಂಪೂರ್ಣವಾಗಿ ಉಪೇಕ್ಷಿಸಿರುವುದು ದುಷ್ಟಕಾರ್ಯಾಚರಣೆಯೊಂದನ್ನು ಅಡಗಿಸಿಡುವ ಇತ್ತೀಚಿನ ದಶಕಗಳಲ್ಲೇ ಒಂದು ಅತಿದೊಡ್ಡ ಪ್ರಯತ್ನವಾಗಿದೆಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾಕಾರಟ್ ಹೇಳಿದ್ದಾರೆ.

ಪ್ರಧಾನ ಮಂತ್ರಿಗಳು ಜಿ–20 ರ ಅಧ್ಯಕ್ಷತೆಯನ್ನು ವಹಿಸಿಕೊಂಡ ಮೇಲೆ ಭಾರತ ಜಗತ್ತಿನ ಒಂದು ಶ್ರೀಮಂತ ಮತ್ತು ಜೀವಂತ ಪ್ರಜಾಪ್ರಭುತ್ವ ಎಂದು ಜಗತ್ತಿಗೆ ಬಿಂಬಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ಅದಕ್ಕೆ ಪ್ರತಿದಿನ ಹೊಸ ಪುರಾವೆಗಳ ಇಂತಹ ಅಡಚಣೆಗಳು ಎದುರಾಗುತ್ತಿವೆ. ಈ ಅಡಚಣೆಗಳು ಸಾಮಾನ್ಯ ನಾಗರಿಕರಿಂದ ಬರುತ್ತಿಲ್ಲ, ಬದಲಾಗಿ ಕೇಂದ್ರ ಸರಕಾರದ ಮತ್ತು ಆಳುವ ಪಕ್ಷದ ವಿವಿಧ ಮಟ್ಟಗಳ ಮುಖಂಡರುಗಳ ಕ್ರಿಯೆಗಳಿಂದಲೇ ಬರುತ್ತಿದೆ ಎಂದಿರುವ ಅವರು ಒಂದು 'ಶ್ರೀಮಂತ ಮತ್ತು ಜೀವಂತ ಪ್ರಜಾಪ್ರಭುತ್ವ' ಹುಸಿಯೆಂದು ಕಂಡು ಬಂದಿರುವ ಪುರಾವೆಯ ಮೇಲೆ ಯಾವುದೇ ಮಹಿಳೆ ಅಥವ ಪುರುಷರನ್ನು ಜೈಲಿಗೆ ಹಾಕಲು ಸಾಧ್ಯವೇ ಎಂದು ಪ್ರಶ್ನಿಸಿದ್ದಾರೆ. ಭಾರತ ಮತ್ತು ಅದರ ನಾಗರಿಕರಿಗೆ ಎದುರಾಗಿರುವ ಈ ಪ್ರಶ್ನೆಗಳನ್ನು ಜಿ–20ಕ್ಕೆ ಸಂಬಂಧಪಟ್ಟ ಆಡಂಬರ, ಮೆರೆತಗಳಿಂದ ಅಡಗಿಸಿಡಲು ಸಾಧ್ಯವಿಲ್ಲ ಎಂದು ಬೃಂದಾಕಾರತ್ ಹೇಳಿದ್ದಾರೆ.

ಸಂವಾದ

ಮುಂದಿನ ದಿನಗಳಲ್ಲಿ ಆಟೋರಿಕ್ಷಾ, ಟ್ಯಾಕ್ಸಿ ಒಟ್ಟಾರೆ ವಾಹನಗಳ ಎಫ್ ಸಿ ಮಾಡಿಸಲು ಆರ್ ಟಿ ಒ ಇನ್ಸ್ಪೆಕ್ಟರ್ ಹತ್ರ ಹೋಗ್ಬೇಕಿಲ್ಲ ಕಣ್ರೀ. ಸ್ಕ್ಯಾನಿಂಗ್ ಮಷೀನ್ ಹತ್ರ ಹೋಗಿ ನಮ್ಮ ಆಟೋಗಳನ್ನು ಸ್ಕ್ಯಾನ್ ಮಾಡಿಸಬೇಕು.

ಇದೇಗೆ ಸಾಧ್ಯ ಅಂತೀರಾ? ನೀವು ಮೆಟ್ರೋ ರೈಲಿಗೆ ಒಮ್ಮೆಯಾದರೂ ಹೋಗಿರುತ್ತೀರಿ. ಅಲ್ಲಿ ರೈಲ್ವೆ ಫ್ಲಾಟ್ ಫಾರಂ ತಲುಪುವ ಮುನ್ನ ನಿಮ್ಮನ್ನು ಡಿಕೆಕ್ಟರ್ ಮೂಲಕ ತಪಾಸಣೆ ಮಾಡ್ತಾರೆ. ನಿಮ್ಮ ಬಳಿ ಬ್ಯಾಗ್ ಇದ್ದರೆ ಅಲ್ಲಿ ಅಳವಡಿಸಿರುವ ಸ್ಕ್ಯಾನಿಂಗ್ ಮಷೀನ್ ಒಳಗೆ ಬ್ಯಾಗ್ ಇಟ್ಟು ತಪಾಸಣೆ ಮಾಡಿಸಬೇಕು. ಆ ಮಷೀನ್ ಒಳಗೆ ನಮ್ಮ ಬ್ಯಾಗ್ ಹಾದು ಹೋಗುತ್ತಿದ್ದಂತೆ ಹೊರಗಿನ ಸ್ಕ್ರೀನ್ ಮೇಲೆ ನಮ್ಮ ಬ್ಯಾಗ್ ಒಳಗೆ ಏನೇನಿದೆ ಎಲ್ಲವೂ ಕಾಣುತ್ತದೆ. ಅಲ್ಲಿ ಕುಳಿತ ವ್ಯಕ್ತಿ ಈ ಎಲ್ಲವನ್ನೂ ನೋಡುತ್ತಾನೆ. ಭದ್ರತೆಗೆ ತೊಂದರೆಯಾಗುವಂಥ ವಸ್ತು ಏನಾದರೂ ಇದ್ದರೆ ಬ್ಯಾಗ್ ಮತ್ತು ನಮ್ಮನ್ನು ತಪಾಸಣೆಗೆ ಗುರಿ ಮಾಡುತ್ತಾರೆ.

ಆಟೋ ಸ್ಕ್ಯಾನಿಂಗ್ ಹೇಗೆ ಅಂತೀರಾ? ಆಟೋ ಅಥವಾ ಕಾರು ಹಾದುಹೋಗಬಹುದಾದ ದೊಡ್ಡ ಸ್ಕ್ಯಾನಿಂಗ್ ಮಷೀನ್ ಬರುತ್ತದೆ. ಆ ಮಷೀನ್ ಒಳಗೆ ಆಟೋ ನಿಲ್ಲಿಸಬೇಕು. ಮಷೀನ್ ಒಳಗಿನ ಮತ್ತು ಹೊರಗಿನ ಎಲ್ಲಾ ಭಾಗಗಳನ್ನು ಸ್ಕ್ಯಾನ್ ಮಾಡುತ್ತದೆ. ಅದರ ಸಂಪೂರ್ಣ ಚಿತ್ರ ಹೊರಭಾಗದ ಸ್ಕ್ರೀನ್ ಮೇಲೆ ಕಾಣಿಸುತ್ತದೆ. ಯಾವ ಬಿಡಿ ಭಾಗಗಳು ಸವೆದಿವೆ, ಯಾವ ಬಿಡಿ ಭಾಗಗಳು ಎಷ್ಟು ಅನರ್ಹವಾಗಿವೆ, ಟಯರ್ ಮತ್ತು ಟ್ಯೂಬ್ ಉತ್ತಮವಾಗಿವೆ? ಹೆಡ್ ಲೈಟ್, ಬ್ರೇಕ್ ಲೈಟ್, ಸೈಡ್ ಲೈಟ್ ಕೆಲಸ ಮಾಡುತ್ತವೆಯೇ? ರಿಫ್ಲೆಕ್ಟರ್ ಗುಣಮಟ್ಟ ಹೊಂದಿದೆಯೇ? ಪೇಂಟಿಂಗ್ ಮಾಸಿದೆಯೇ? ಟಾಪ್ ಅರಿದಿದೆಯೇ? ಚಾರ್ಸಿ ಎಲ್ಲಾದರೂ ತುಕ್ಕು ಹಿಡಿದಿದೆಯೇ? ಎಂಜಿನ್ ನಲ್ಲಿ ಏನಾದರೂ ತೊಂದರೆ ಇದೆಯೇ? ಬ್ರೇಕ್ ಲೈನಿಂಗ್ ಉತ್ತಮವಾಗಿದೆಯೇ.... ಹೀಗೆ ಅರ್ಹತಾ ಪ್ರಮಾಣ ಪತ್ರ ನೀಡಲು ಏನೆಲ್ಲಾ ಅಗತ್ಯ ಇದೆಯೋ ಅವುಗಳನ್ನೆಲ್ಲಾ ಸ್ಕ್ಯಾನಿಂಗ್ ಮೂಲಕ ಪರಿಶೀಲಿಸುತ್ತಾರೆ.



ಯಾವುದನ್ನು ಬದಲಾಯಿಸ ಬೇಕು ಎಂಬುದನ್ನು ಆ ಮೂಲಕ ಅರ್ಹತಾ ಪ್ರಮಾಣ ಪತ್ರ (ಎಫ್.ಸಿ.) ಪಡೆಯಲು ಅರ್ಹವೇ ಎಂಬುದನ್ನು ನಿರ್ಧರಿಸುತ್ತಾರೆ. ಪ್ರಮಾಣ ಪತ್ರ ಪಡೆಯಲು ಯಾವ ಯಾವ ಬಿಡಿ ಭಾಗಗಳನ್ನು ಬದಲಾಯಿಸಬೇಕು, ಏನೆಲ್ಲಾ ಮಾಡಬೇಕು ಎಂಬ ದೊಡ್ಡ ಪಟ್ಟಿ ಕೊಡುತ್ತಾರೆ.

ಬ್ರೋಕರ್ ಕಡೆಯಿಂದ ಒಂದಷ್ಟು ಲಂಚ ಕೊಟ್ಟು ಎಫ್.ಸಿ. ಮಾಡಿಸಿಕೊಂಡರಾಯ್ತು ಬಿಡ್ರಿ. ಅದಕ್ಯಾಕೆ ತಲೆ ಕೆಡಿಸಿಕೊಬೇಕು ಅಂತೀರಾ? ಅಯ್ಯೋ ಇದನ್ನೆಲ್ಲ ಖಾಸಗಿ ಕಂಪನಿಗಳಿಗೆ ಕೊಡ್ತಾರೆ ಕಣ್ರಿ. ಇದರಲ್ಲಿ ಆರ್.ಟಿ.ಒ. ಕೆಲಸ ಏನೂ ಇರೋದಿಲ್ಲ. ನಿಮ್ಮ ಆಟೋ ಯಾವ ಕಂಪನಿಯದೋ ಆ ಕಂಪನಿ ಪ್ರತಿ ವರ್ಷ ನಿಮ್ಮ ಆಟೋ ಅರ್ಹತೆ ಹೊಂದಿದೆಯೇ ಇಲ್ಲವೋ ಎಂದು ನಿರ್ಧರಿಸುತ್ತವೆ. ಉದಾಹರಣೆಗೆ ನಿಮ್ಮದು ಟಿವಿಎಸ್ ಆಟೋ ಆಗಿದ್ದರೆ ನೀವು ಎಫ್.ಸಿ. ಸರ್ಟಿಫಿಕೇಟ್ ಪಡೆಯಲು ಟಿವಿಎಸ್ ಕಂಪನಿಯವರ ಬಳಿ ಹೋಗಿ ಅರ್ಹತೆ ಇದೆ ಎಂಬ ಪ್ರಮಾಣ ಪತ್ರ ತರಬೇಕು. ಆ ಕಂಪನಿಯ ಬಳಿಯೇ ಆಟೋ ರಿಪೇರಿ ಮಾಡಿಸಬೇಕು. ಅದು ಸೂಚಿಸುವ ರೀತಿಯಲ್ಲಿ ಬಿಡಿ ಭಾಗಗಳನ್ನು ಖರೀದಿಸಿ ಅಳವಡಿಸಿಕೊಳ್ಳಬೇಕು.

ಇದನ್ನೆಲ್ಲ ಸರ್ಕಾರದವ್ರು ಯಾಕ್ ಮಾಡ್ತಾರೆ ಅಂತೀರಾ? ಅದೇ ರೀ ನವ–ಉದಾರೀಕರಣ ನೀತಿ. ಅದೇ ಎಲ್ಲವನ್ನೂ ಖಾಸಗಿ ಬಂಡವಾಳಗಾರರಿಗೆ ಒಪ್ಪಿಸುವ ಖಾಸಗೀಕರಣ ನೀತಿ.

–ಸಿದ್ದಯ್ಯ ಸಿ.

****

ಇನ್ನು ಕೆಲವು ತಿಂಗಳಲ್ಲಿ ರಸ್ತೆಗಳಲ್ಲಿ ಟೋಲ್ ಬೂತ್ ಗಳೇ ಇರೋದಿಲ್ವಂತೆ ಕಣ್ರಿ. ಟೋಲ್ ಬೂತ್ ಫ್ರೀ ರಸ್ತೆಗಳನ್ನಾಗಿ ಮಾಡ್ತಾರಂತ್ರಿ. ಹೀಗಂತ ಕೇಂದ್ರದ ಸಾರಿಗೆ ಮಂತ್ರಿ ನಿತಿನ್ ಗಡ್ಕರಿ ಹೇಳಿದ್ದಾರ್ರೀ. ಹಾಗಂತ ಟೋಲ್ ಶುಲ್ಕ ಕಟ್ಬೋ ಹಾಗಿಲ್ಲ, ಈ ರಸ್ತೆಗಳಲ್ಲಿ ಫ್ರೀಯಾಗಿ ಸಂಚಾರ ಮಾಡ್ಬಹುದು ಅಂತ ತಿಳೀಬೇಡ್ರಿ. ಮಂತ್ರಿ ಹೇಳಿದ್ದು ಟೋಲ್ ಬೂತ್ ಫ್ರೀ ಅಂತಾನೇ ಹೊರತು ಟೋಲ್ ಫ್ರೀ ಅಂತ ಹೇಳಿಲ್ರಿ.

ಇದೇನಪ್ಪ ಟೋಲ್ ಬೂತ್ ಫ್ರೀ ಅಂತೀರಾ? ಟೋಲ್ ಇರೋದಿಲ್ಲ ಅಂದ್ಮೇಲೆ ಟೋಲ್ ಶುಲ್ಕ ಸಂಗ್ರಹ ಮಾಡೋವ್ರು ಯಾರಪ್ಪ ಅಂತೀರಾ? ಟೋಲ್ ಗೇಟ್ ಇಲ್ಲ ಅಂದ್ಮೇಲೆ ನಾವು ಹಣ ಕೊಡದೇ ರಸ್ತೆಗಳಲ್ಲಿ ಓಡಾಡಬಹುದಲ್ಲ ಅಂದ್ಕೊತೀರಾ? ಅದೆಲ್ಲಾ ಆಗೋದಿಲ್ಲ ಬಿಡ್ರಿ. ಹಾಗೇನಾದರೂ ಮಾಡುದ್ರೆ ನಿಮ್ಮ ವಿಳಾಸ ಹುಡುಕ್ಕೊಂಡು ಮನೇಗೇ ಬಂದು ವಸೂಲಿ ಮಾಡ್ತಾರ್ರೀ. ಈಗ ನೀವು ಸಿಗ್ನಲ್ ಜಂಪ್ ಮಾಡಿ ಸಂಚಾರ ನಿಯಮ ಉಲ್ಲಂಘನೆ ಮಾಡುದ್ರೆ ತಿಂಗಳ ನಂತರ ಪೋಲೀಸರು ದಂಡ ವಸೂಲು ಮಾಡ್ತಾರಲ್ಲ ಹಾಗೆ.


ಈಗ ಫಾಸ್ಟ್ಯಾಗ್ಸ್ ವ್ಯವಸ್ಥೆ ಇದೆ ನೋಡ್ರಿ. ಈಗಂತೂ ಫಾಸ್ಟ್ಯಾಗ್ ಪಡೆದು ಅದಕ್ಕೆ ಒಂದಷ್ಟು ಹಣ ತುಂಬಲೇಬೇಕು ಬಿಡ್ರೀ. ವಾಹನದ ಮುಂಭಾಗದ ಗಾಜಿನ ಮೇಲೆ ಫಾಸ್ಟ್ಯಾಗ್ ಸ್ಟಿಕ್ಕರ್ ಅಂಟಿಸಿರಬೇಕು. ನಮ್ಮ ವಾಹನ ಟೋಲ್ ಬೂತ್ ಬಳಿ ಬಂದಾಗ ಅಲ್ಲಿ ಅಳವಡಿಸಿರುವ ಕ್ಯಾಮೆರಾ ಆ ಫಾಸ್ಟ್ಯಾಗ್ ಮೇಲೆ ಕಣ್ಣಾಡಿಸುತ್ತೆ. ಅಥವಾ ಸ್ಕ್ಯಾನಿಂಗ್ ಮಾಡುತ್ತೆ. ಅದರಲ್ಲಿ ನಾವು ತುಂಬಿರುವ ಹಣದಲ್ಲಿ ನಿಗದಿಪಡಿಸಿದ ಶುಲ್ಕ ಕಡಿತ ಆಗುತ್ತೆ. ಅದರಲ್ಲಿ ಇನ್ನೂ ಎಷ್ಟು ಹಣ ಉಳಿದಿದೆ ಎಂಬುದನ್ನೂ ಡಿಸ್ಪ್ಲೇ ಮೂಲಕ ತೋರಿಸುತ್ತೆ. ಗೇಟ್ ತೆರೆದು ವಾಹನ ಮುಂದೆ ಹೋಗಲು ಅನುಮತಿ ನೀಡುತ್ತದೆ. ಈ ವ್ಯವಸ್ಥೆಯಲ್ಲಿ ಮಾನವರ ಅವಶ್ಯಕತೆ ಇರುವುದಿಲ್ಲ.

'ಅಯ್ಯೋ, ನಾನು ಯಾವಾಗಲಾದರೊಮ್ಮೆ ಟೋಲ್ ರಸ್ತೆ ಬಳಕೆ ಮಾಡ್ತೀನ್ರೀ. ನಾನು ಫಾಸ್ಟ್ಯಾಗ್ ಪಡೆಯೋದಿಲ್ಲ. ನಗದು ಹಣ ಕೊಟ್ಟು ಸಂಚಾರ ಮಾಡ್ತೀನಿ' ಪುಟ 14 ಕ್ಕೆ

2014ರ ಚುನಾವಣೆ ಸಮಯದಲ್ಲಿ 'ಗುಜರಾತ್ ಅಭಿವೃದ್ಧಿ ಮಾದರಿ' ಎಂಬ ಅಭಿವೃದ್ಧಿಯ ಕನಸನ್ನು ದೇಶದ ತುಂಬಾ ಬಿತ್ತಿ ಮೋದಿ ಕೇಂದ್ರದ ಗದ್ದುಗೆ ಏರಿ ಕುಳಿತದ್ದು ಎಲ್ಲರಿಗೂ ತಿಳಿದೇ ಇದೆ. ಇಂದಿಗೂ ಬಿಜೆಪಿ, ಸಂಘಪರಿವಾರ ಮತ್ತು ಕಾರ್ಪೊರೇಟ್ ಒಡೆತನದ ಮಾಧ್ಯಮಗಳು ಅಭಿವೃದ್ಧಿಯಲ್ಲಿ ಇತರೆ ರಾಜ್ಯಗಳಿಗಿಂತ ಗುಜರಾತ್ ಮುಂದಿದೆ ಎಂದು ಹೇಳತೊಡಗಿದ್ದಾರೆ. ಬಿಜೆಪಿ ಮತ್ತು ಮೋದಿ ಆಡಳಿತದಿಂದ ಇದು ಸಾಧ್ಯವಾಗಿದೆ ಎಂದು ಅವರು ಹೇಳುತ್ತಾರೆ. ಇದೇ ಸತ್ಯ ಎಂದು ನಂಬಿದವರೂ ಇದ್ದಾರೆ. ಇದು ನಿಜವೇ?

ಸಿದ್ದಯ್ಯ (ಪಿಡಿಯಿಂದ ಸಂಗ್ರಹ)

ಇಂದು ಬೇಕಿರುವುದು ಗುಜರಾತ್ ಮಾದರಿಯೋ? ಕೇರಳ ಮಾದರಿಯೋ?



ಗುಜರಾತ್ ನಿಜವಾಗಿಯೂ ಅಭಿವೃದ್ಧಿ ಹೊಂದಿದೆಯೇ? ಹಸಿವು, ಬಡತನ, ಅಪೌಷ್ಠಿಕತೆಯಿಂದ ನರಳುತ್ತಿರುವವರು, ಶಿಶು ಮರಣ ಪ್ರಮಾಣ, ಮಕ್ಕಳ ರಕ್ತಹೀನತೆ, ಅನಕ್ಷರತೆ, ನಿರುದ್ಯೋಗ, ವಸತಿ ಇಲ್ಲದವರು, ಭ್ರಷ್ಟಾಚಾರ ಇವೆಲ್ಲವೂ ಗುಜರಾತ್ ರಾಜ್ಯದಲ್ಲಿವೆ. ಸೈದ್ಧಾಂತಿಕ ನೆಲೆ ಮತ್ತು ರಾಜಕೀಯ ಐಕ್ಯತೆಯಿಂದ ಹಲವು ದಶಕಗಳ ಕಾಲ ಮತ್ತು ಪ್ರಸ್ತುತ ಆಡಳಿತ ನಡೆಸುತ್ತಿರುವ ಎಡ ಪ್ರಜಾಸತ್ತಾತ್ಮಕ ರಂಗದ– ಎಲ್.ಡಿ.ಎಫ್.ನ ಆಳ್ವಿಕೆಯ ಕೇರಳ ರಾಜ್ಯದ ಅಭಿವೃದ್ದಿಯನ್ನು ಬಂಡವಾಳಶಾಹಿಗಳು ಉದ್ದೇಶಪೂರ್ವಕವಾಗಿ ಮರೆಮಾಚುವ ಪ್ರಯತ್ನ ಮಾಡುತ್ತಿರುತ್ತಾರೆ. ಆದರೆ ವಾಸ್ತವ ಏನು ಹೇಳುತ್ತಿದೆ?

ಗುಜರಾತ್ ಮತ್ತು ಕೇರಳ ಮಾದರಿಗಳು

'ಗುಜರಾತ್ ಮಾದರಿ' ಮತ್ತು ಕೇರಳದ ಜನರ ಅಭಿವೃದ್ಧಿಯ ಮಾರ್ಗದ ನಡುವಿನ ವ್ಯತ್ಯಾಸಗಳನ್ನು ಅಂಕಿ ಅಂಶಗಳ ಸಮೇತ ನೋಡೋಣ.

ಮಕ್ಕಳು ಮತ್ತು ಮಹಿಳೆಯರ ಜೀವನದ ಗುಣಮಟ್ಟವನ್ನು ಅಳೆಯುವ ಹಲವಾರು ಸೂಚಕಗಳು ಗುಜರಾತ್ ರಾಜ್ಯವನ್ನು ಕೇರಳಕ್ಕೆ ಹೋಲಿಸಿದಾಗ ಗಮನಾರ್ಹ ವ್ಯತ್ಯಾಸವನ್ನು ತೋರಿಸುತ್ತವೆ. ಇದು 'ಗುಜರಾತ್ ಮಾದರಿ' ಮತ್ತು ಕೇರಳದ ಜನರ ಅಭಿವೃದ್ಧಿಯ ಮಾರ್ಗದ ನಡುವಿನ ವ್ಯತ್ಯಾಸದ ಚಿತ್ರಣವನ್ನು ನೀಡುತ್ತದೆ.

ಶಿಕ್ಷಣ:

ಪ್ರಾಥಮಿಕ ಶಿಕ್ಷಣ ಹಂತದಲ್ಲಿನ 'ಒಟ್ಟು ದಾಖಲಾತಿ ಅನುಪಾತ' ದ(GER) ಪ್ರಮಾಣ ಗುಜರಾತ್ ಶೇ.96 ರಷ್ಟನ್ನು ಹೊಂದಿದ್ದರೆ, ಕೇರಳ ಶೇ. 100.2 ರ ಅನುಪಾತವನ್ನು ಹೊಂದಿದೆ. ಭಾರತದ ಒಟ್ಟು ಅನುಪಾತ ಶೇ. 103 ರಷ್ಟಿದೆ.

ದ್ವಿತೀಯ ಹಂತದಲ್ಲಿ (9ರಿಂದ 10ನೇ ತರಗತಿ) GER ಗುಜರಾತ್ ಶೇ. 77.4ಕ್ಕೆ ಇಳಿಯುತ್ತದೆ. ಕೇರಳ ಶೇ. 97.2 ರಷ್ಟಿದೆ.

ಹಿರಿಯ ಮಾಧ್ಯಮಿಕ ಹಂತದಲ್ಲಿ (11ರಿಂದ 12ನೇ ತರಗತಿ) GER ಗುಜರಾತ್ ಶೇ. 43.2 ರಷ್ಟಿದ್ದರೆ, ಕೇರಳ ಶೇ.83ರಷ್ಟು ಮುಂದಿದೆ. ಇಲ್ಲಿ ಗುಜರಾತ್ ಭಾರತದ ಸರಾಸರಿ ಶೇ. 51.4 ಕ್ಕಿಂತ ಕೆಳಗಿದೆ.

ಈ ಅಂಕಿ ಅಂಶಗಳು ಗುಜರಾತಿನಲ್ಲಿ ಅರ್ಧಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಹಿರಿಯ ಮಾಧ್ಯಮಿ ಹಂತದ ಹೊತ್ತಿಗೆ ಶಾಲೆಯನ್ನು ತ್ಯಜಿಸುತ್ತಾರೆ ಎಂದು ತೋರಿಸುತ್ತವೆ. (2019–20 ರ ಡೇಟಾ: ಮೂಲ: UDISE)

ಜೀವಿತಾವಧಿ:

ಜನರ ಸರಾಸರಿ ಆಯುಷ್ಯ ಗುಜರಾತಿನಲ್ಲಿ 70.5 ವರ್ಷಗಳಾದರೆ, ಕೇರಳದಲ್ಲಿ 75 ವರ್ಷಗಳು. ಭಾರತದ ಸರಾಸರಿ 70 ವರ್ಷಗಳು. (2016–20 ರ ಡೇಟಾ: ಮೂಲ: SRS, ORGI)

ಶಿಶು ಮರಣ ಪ್ರಮಾಣ

1000 ಜೀವಂತ ಜನನಗಳಲ್ಲಿ, ಒಂದು ವರ್ಷ ವಯಸ್ಸನ್ನು ತಲುಪುವ ಮೊದಲು ಸಾಯುವ ಮಕ್ಕಳ ಸಂಖ್ಯೆ ಗುಜರಾತಿನಲ್ಲಿ 23 ಆಗಿದ್ದರೆ, ಇದು ಕೇರಳದಲ್ಲಿ ಕೇವಲ 6 ಮಾತ್ರ. ಭಾರತದ ಸರಾಸರಿ 28. (2020 ರ ಡೇಟಾ: ಮೂಲ: SRS, ORGI)

ಮಕ್ಕಳ ಆಹಾರ

ಗುಜರಾತಿನಲ್ಲಿ 6 ರಿಂದ 23 ತಿಂಗಳ ನಡುವಿನ ವಯಸ್ಸಿನ ಕೇವಲ ಶೇ. 6 ರಷ್ಟು ಮಕ್ಕಳು ಮಾತ್ರ ಸಾಕಷ್ಟು ಎದೆ ಹಾಲು ಅಥವಾ ನಿರ್ದಿಷ್ಟ ಪ್ರಮಾಣದ ಘನವಲ್ಲದ ಅಥವಾ ವಿವಿಧ ರೀತಿಯ ಘನ ಆಹಾರಗಳು ಮತ್ತು ನಿಯಮಿತ ಮಧ್ಯಂತರ ಆಹಾರಗಳನ್ನು ಪಡೆಯುತ್ತಿದ್ದರೆ, ಕೇರಳದಲ್ಲಿ ಶೇ. 23.5 ರಷ್ಟು ಮಕ್ಕಳು ಇಂತಹ ಆಹಾರ ಪಡೆಯುತ್ತಿವೆ. ಗುಜರಾತಿಗೆ ಹೋಲಿಸಿದರೆ ಕೇರಳದ ಈ ಎಳೆ ವಯಸ್ಸಿನ ಮಕ್ಕಳು ಸಾಕಷ್ಟು ಆಹಾರವನ್ನು ಪಡೆಯುತ್ತಿದ್ದಾರೆ. ಅಖಿಲ ಭಾರತ ಮಟ್ಟದಲ್ಲಿ ಶೇ. 11.3 ಇದೆ. (2019-20; NFHS-5)

ಅಪೌಷ್ಠಿಕತೆ

ಐದು ವರ್ಷದೊಳಗಿನ ಮಕ್ಕಳು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆಯೇ ಎಂದು ಮೌಲ್ಯಮಾಪನ ಮಾಡಲು ಮೂರು ಕ್ರಮಗಳನ್ನು ಬಳಸಲಾಗುತ್ತದೆ.

* ಕುಂಠಿತ (ವಯಸ್ಸಿಗೆ ಕಡಿಮೆ ಎತ್ತರ): ಗುಜರಾತಿನ ನೂರು ಮಕ್ಕಳಲ್ಲಿ 39 ರಷ್ಟು ಮಕ್ಕಳು ಎತ್ತರದಲ್ಲಿ ಕುಂಠಿತರಾಗಿದ್ದಾರೆ. ಕೇರಳದಲ್ಲಿ ನೂರರಲ್ಲಿ 23.4 ಮಕ್ಕಳು ಮತ್ತು ಭಾರತ ಮಟ್ಟದಲ್ಲಿ 35.5 ಮಕ್ಕಳು ಕಡಿಮೆ ಎತ್ತರ ಹೊಂದಿದ್ದಾರೆ.
* ಕ್ಷೀಣತೆ (ಎತ್ತರಕ್ಕೆ ಅನುಗುಣವಾಗಿ ಇರಬೇಕಾದ ತೂಕ): ಗುಜರಾತಿನಲ್ಲಿ ನೂರಕ್ಕೆ 25.1 ಮಕ್ಕಳು ಬಲಹೀನತೆ ಹೊಂದಿದ್ದರೆ ಕೇರಳದಲ್ಲಿ ಪಾಲು ಶೇ. 15.8 ಮತ್ತು ಅಖಿಲ ಭಾರತದ ಸರಾಸರಿ ಶೇ. 19.3.
* ಕಡಿಮೆ ತೂಕ (ವಯಸ್ಸಿನ ತೂಕ): ಗುಜರಾತಿನಲ್ಲಿ ನೂರರಲ್ಲಿ 40 ರಷ್ಟು ಮಕ್ಕಳು ಕಡಿಮೆ ತೂಕವನ್ನು ಹೊಂದಿದ್ದಾರೆ. ಇದು ಕೇರಳದ ಪಾಲು ಸುಮಾರು ಶೇ. 20 ರಷ್ಟಿದೆ. ಭಾರತದ ಸರಾಸರಿ 32 ಶೇ.

ಮಕ್ಕಳ ರಕ್ತಹೀನತೆ:

6 ರಿಂದ 59 ತಿಂಗಳ ವಯಸ್ಸಿನ ಮಕ್ಕಳಲ್ಲಿ, ನಂಬಲಸಾಧ್ಯವಾದ ನೂರರಲ್ಲಿ 79.7 ರಷ್ಟು ಮಕ್ಕಳು ಗುಜರಾತಿನಲ್ಲಿ ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಇದು ಭಾರತದ ಸರಾಸರಿ ಶೇ. 67.1 ಕ್ಕಿಂತಲೂ ಹೆಚ್ಚು ಮತ್ತು ಕೇರಳದ ಸರಾಸರಿ ಶೇ. 39.4 ಕ್ಕಿಂತ ಬಹಳಷ್ಟು ಹೆಚ್ಚು. (2019–20; NFHS-5)

ಮಹಿಳಾ ಶಿಕ್ಷಣ:

ಗುಜರಾತಿನಲ್ಲಿ ನೂರು ಮಹಿಳೆಯರಲ್ಲಿ 73.5 ರಷ್ಟು ಮಹಿಳೆಯರು ಸಾಕ್ಷರರಾಗಿದ್ದರೆ, ಕೇರಳದಲ್ಲಿ ಶೇ. 97.4ರಷ್ಟು ಮಹಿಳೆಯರು ಸಾಕ್ಷರರಾಗಿದ್ದಾರೆ. ಅದಕ್ಕಿಂತ ಮುಖ್ಯವಾಗಿ, ಗುಜರಾತಿನಲ್ಲಿ ನೂರು ಮಹಿಳೆಯರಲ್ಲಿ ಕೇವಲ 34 ಮಹಿಳೆಯರು ಮಾತ್ರ 10 ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಶಾಲಾ ಶಿಕ್ಷಣವನ್ನು ಹೊಂದಿದ್ದಾರೆ. ಕೇರಳದ ನೂರರಲ್ಲಿ 77 ಮಹಿಳೆಯರು 10 ಅಥವಾ ಅದಕ್ಕಿಂತ ಹೆಚ್ಚು ವರ್ಷಗಳ ಶಾಲಾ ಶಿಕ್ಷಣವನ್ನು ಪಡೆದಿದ್ದಾರೆ. ಅಖಿಲ ಭಾರತದ ಸರಾಸರಿ ಶೇ.41. (2019–20; NFHS-5)

ಮಹಿಳೆಯರ ಮದುವೆಯ ವಯಸ್ಸು

ಗುಜರಾತಿನಲ್ಲಿ, 20 ರಿಂದ 24 ವಯಸ್ಸಿನ ಸುಮಾರು ಶೇ. 22 ರಷ್ಟು ವಿವಾಹಿತ ಮಹಿಳೆಯರು ತಾವು 18 ವರ್ಷಕ್ಕಿಂತ ಮುಂಚೆಯೇ ಮದುವೆಯಾಗಿದ್ದೇವೆ ಎಂದು ಹೇಳಿದ್ದಾರೆ. ಇದು ಸರಿಸುಮಾರು ಅಖಿಲ ಭಾರತ ಸರಾಸರಿ ಶೇಕಡಾ 23.3 ರಂತೆಯೇ ಇರುತ್ತದೆ. ಆದರೆ ಕೇರಳದ ಸರಾಸರಿಗಿಂತ (6.3 ಶೇಕಡಾ) ಸುಮಾರು ನಾಲ್ಕು ಪಟ್ಟು ಹೆಚ್ಚು. (2019–20; NFHS-5)

ತಾಯಂದಿರ ಮರಣ ಪ್ರಮಾಣ

ಪ್ರತಿ ಒಂದು ಲಕ್ಷ ಜನನಕ್ಕೆ ಮಗುವಿನ ಜನನದ ಸಮಯದಲ್ಲಿ ಆಗುವ ತೊಡಕುಗಳಿಂದ ಸಾಯುವ ತಾಯಂದಿರ ಸಂಖ್ಯೆ ಗುಜರಾತಿನಲ್ಲಿ 70 ಆಗಿದ್ದರೆ ಕೇರಳದಲ್ಲಿ ಇದು 30 ಮಾತ್ರ. ಇದು ಗುಜತಾತಿನ ಸಂಖ್ಯೆಗಿಂತ ಅರ್ಧದಷ್ಟು ಕಡಿಮೆಯಾಗಿದೆ. ಭಾರತದ ಸರಾಸರಿ 103. (2017–19 ರ ಡೇಟಾ; ಮೂಲ: SRS, ORGI)

ರಕ್ತಹೀನತೆ ಹೊಂದಿರುವ ಮಹಿಳೆಯರು

ಗುಜರಾತಿನಲ್ಲಿ ಸುಮಾರು ಶೇ. 63 ಗರ್ಭಿಣಿಯರು (15 ರಿಂದ 49 ವರ್ಷ ವಯಸ್ಸಿನವರು) ರಕ್ತಹೀನತೆಯಿಂದ ಬಳಲುತ್ತಿದ್ದಾರೆ. ಕೇರಳದಲ್ಲಿ ಇದು ಶೇ. 31.4. ಭಾರತದ ಸರಾಸರಿ ಶೇಕಡಾ 52 ರಷ್ಟಿದೆ. ಅದೇ ವಯೋಮಾನದ ಎಲ್ಲ ಮಹಿಳೆಯರಲ್ಲಿ, ಗುಜರಾತಿನಲ್ಲಿ ಶೇಕಡಾ 65 ರಷ್ಟು ರಕ್ತಹೀನತೆಯಿಂದ ಬಳಲುತ್ತಿದ್ದರೆ, ಭಾರತ ಮಟ್ಟದಲ್ಲಿ ಶೇಕಡಾ 57 ಮತ್ತು ಕೇರಳದಲ್ಲಿ ಶೇಕಡಾ 36 ರಷ್ಟಿದೆ. (2019–20; NFHS-5)

ಗರ್ಬಿಣಿಯರ ಆರೈಕೆ:

ಗುಜರಾತಿನಲ್ಲಿನ ನೂರು ಮಹಿಳೆಯರಲ್ಲಿ 77 ಮಹಿಳೆಯರು ನಾಲ್ಕು ಪ್ರಸವಪೂರ್ವ ಆರೋಗ್ಯ ತಪಾಸಣೆಗಳನ್ನು ಪಡೆದಿದ್ದರೆ, ಕೇರಳದಲ್ಲಿ ಇದು ಸ್ವಲ್ಪ ಹೆಚ್ಚಾಗಿದ್ದು 79 ಪ್ರತಿಶತದಷ್ಟಿದೆ. ಅಖಿಲ ಭಾರತ ಸರಾಸರಿ ಕೇವಲ ಶೇ. 58. ಆದರೆ ಈ ಆರೈಕೆಯ ಪ್ರಮುಖ ಅಂಶದ ವಿಷಯದ ಮೇಲೆ (ಕಬ್ಬಿಣ ಮತ್ತು ಫೋಲಿಕ್ ಆಮ್ಲವನ್ನು (folic acid) ತೆಗೆದುಕೊಳ್ಳುವುದು) ಬಹಳಷ್ಟು ವ್ಯತ್ಯಾಸವಿದೆ. ಗುಜರಾತಿನಲ್ಲಿ ಕೇವಲ ಶೇ.43 ನಿರೀಕ್ಷಿತ ಮಹಿಳೆಯರು 180 ದಿನಗಳವರೆಗೆ ಕಬ್ಬಿಣ/ಫೋಲಿಕ್ ಆಮ್ಲವನ್ನು ತೆಗೆದುಕೊಂಡರೆ, ಕೇರಳದಲ್ಲಿ ಅಂತಹ ಮಹಿಳೆಯರ ಪಾಲು ಶೇಕಡಾ 67 ರಷ್ಟಿದೆ. ಅಖಿಲ ಭಾರತ ಸರಾಸರಿ 26 ಶೇ. (2019–20; NFHS-5)

ಗಂಡನಿಂದ ಹಿಂಸೆ

ಇದುವರೆಗೆ ವಿವಾಹಿತ ಮಹಿಳೆಯರಲ್ಲಿ, ಗುಜರಾತಿನಲ್ಲಿ ಶೇಕಡಾ 14 ರಷ್ಟು ಮಹಿಳೆಯರು ಗಂಡನಿಂದ ಹಿಂಸೆಯನ್ನು ಅನುಭವಿಸಿದ್ದರೆ, ಕೇರಳದಲ್ಲಿ ಇದು ಶೇಕಡಾ 9.9 ರಷ್ಟಿದೆ. ಅಖಿಲ ಭಾರತ ಸರಾಸರಿ ಶೇ 29 ರಷ್ಟಿತ್ತು. (2019–20; NFHS-5)

ಮನೆ ಸೌಲಭ್ಯಗಳು

ಕೇರಳಕ್ಕೆ ಹೋಲಿಸಿದರೆ ಗುಜರಾತಿನಲ್ಲಿ ಶೇ.74 ರಷ್ಟು ಕುಟುಂಬಗಳು ಸುಧಾರಿತ ನೈರ್ಮಲ್ಯ ಸೌಲಭ್ಯವನ್ನು ಹೊಂದಿದ್ದು, ಅಲ್ಲಿ ಸುಮಾರು ಶೇ.99 ರಷ್ಟು ಕುಟುಂಬಗಳು ಅಂತಹ ಸೌಲಭ್ಯಗಳನ್ನು ಹೊಂದಿವೆ. ಅಖಿಲ ಭಾರತ ಸರಾಸರಿ 70 ಶೇ. ಗುಜರಾತಿನಲ್ಲಿ ಸುಮಾರು ಶೇ.67 ಕುಟುಂಬಗಳು ಅಡುಗೆಗಾಗಿ ಶುದ್ಧ ಇಂಧನವನ್ನು ಬಳಸಿದರೆ, ಕೇರಳದಲ್ಲಿ ಶೇ.72. ಭಾರತದ ಸರಾಸರಿ ಶೇ.59. (2019–20; NFHS-5)

ಈಗ ನೀವೇ ಹೇಳಿ, ಯಾವ ಮಾದರಿ ಉತ್ತಮ ಹಾಗೂ ನಿಜಕ್ಕೂ ಅನುಸರಿಸಬೇಕಾದುದು ಯಾವುದು? ಕಾರ್ಪೋರೇಟ್ ಲೂಟಿಗೆ ಪೂರ್ಣವಾಗಿ ತೆರೆದು ಕೊಂಡಿರುವ, ಫ್ಯಾಸಿಸ್ಟ್ ಮಾದರಿಯ ಜನದ್ರೋಹಿ ಗುಜರಾತ್ ಆಡಳಿತವೇ ಅಥವಾ ಸೌಹಾರ್ದತೆ, ಪ್ರಗತಿ, ಶಾಂತಿ, ಸಹಬಾಳ್ವೆ ಮತ್ತು ಜನಪರವಾದ ಎಡ ಪ್ರಜಾಸತ್ತಾತ್ಮಕ ರಂಗದ ದೇಶದಲ್ಲೆ ಪರ್ಯಾಯ ನೀತಿಗಳ ಆಧಾರದಲ್ಲಿ ನಡೆಯುತ್ತಿರುವ ಕೇರಳದ ಪ್ರಗತಿಪರ ಆಡಳಿತವೇ?

‘ಶಾರ್ಟ್‌ಕಟ್ ರಾಜಕೀಯದ ವಿಕೃತಿ’ ಎಂದರೇನು?

ಇದು ಅಮೃತ ಕಾಲ



“ಮತದಾರರು ಶಾರ್ಟ್‌ಕಟ್ ರಾಜಕೀಯವನ್ನು ಸೋಲಿಸಿದ್ದಾರೆ!”
ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

“ಭಾರತದ ರಾಜಕೀಯದಲ್ಲಿ ಒಂದು ವಿಕೃತಿ ಉಂಟಾಗುತ್ತಿದೆ. ಇದು ಶಾರ್ಟ್‌ಕಟ್ ರಾಜಕೀಯದ ವಿಕೃತಿ. ಇದು ದೇಶದ ಹಣವನ್ನು ರಾಜಕೀಯ ಹಿತಾಸಕ್ತಿಗಳಿಗಾಗಿ ಲೂಟಿ ಮಾಡುವ ವಿಕೃತಿ. ತೆರಿಗೆದಾರರು ಕಷ್ಟಪಟ್ಟು ಗಳಿಸಿದ ಹಣವನ್ನು ಲೂಟಿ ಮಾಡುವ ವಿಕೃತಿ. ಶಾರ್ಟ್ ಕಟ್‌ಗಳನ್ನು ಅನುಸರಿಸುವ ಈ ರಾಜಕೀಯ ಪಕ್ಷಗಳು, ಈ ರಾಜಕೀಯ ಮುಖಂಡರು ದೇಶದ ಪ್ರತಿಯೊಬ್ಬರ ತೆರಿಗೆದಾರರರ ಅತಿ ದೊಡ್ಡ ಶತ್ರುಗಳು. ಕೇವಲ ಅಧಿಕಾರಕ್ಕೆ ಬರುವುದೇ ಗುರಿಯಾಗಿರುವ, ಹುಸಿ ಭರವಸೆಗಳನ್ನು ಕೊಟ್ಟು ಅಧಿಕಾರ ಬಾಚಿಕೊಳ್ಳುವುದೇ ಗುರಿಯಾಗಿರುವ ಮಂದಿ ಎಂದೂ ದೇಶವನ್ನು ಕಟ್ಟಲಾರರು. ಭಾರತ ಮುಂದಿನ 25 ವರ್ಷಗಳ ಗುರಿ ಸಾಧನೆಗೆ ಕೆಲಸ ಮಾಡುತ್ತಿರುವಾಗ, ಕೆಲವು ರಾಜಕೀಯ ಪಕ್ಷಗಳು ತಮ್ಮ ವೈಯಕ್ತಿಕ ಹಿತಾಸಕ್ತಿಯಿಂದ ಭಾರತದ ಅರ್ಥವ್ಯವಸ್ಥೆಯನ್ನು ಧ್ವಂಸ ಮಾಡುತ್ತಿದ್ದಾರೆ”

ಪ್ರಧಾನ ಮಂತ್ರಿಗಳು ಹಿಮಾಚಲ ಪ್ರದೇಶ ಮತ್ತು ಗುಜರಾತಿನಲ್ಲಿ ಹಲವಾರು ಚುನಾವಣಾ–ಪೂರ್ವ ಪ್ರಾಜೆಕ್ಟುಗಳನ್ನು ಉದ್ಘಾಟಿಸಿದ ನಂತರ ನಾಗಪುರದಲ್ಲಿ ಕೆಲವು ಯೋಜನೆಗಳನ್ನು ಉದ್ಘಾಟಿಸುತ್ತ ಹೀಗೆ ಹೇಳುತ್ತಿದ್ದಾಗ, ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗಳಿಗೆ ಅವರ ಸರಕಾರದ ವತಿಯಿಂದ ಬರುತ್ತಿದ್ದ ಉತ್ತರಗಳು ಪ್ರಧಾನಿಗಳು ವಾಸ್ತವವಾಗಿ ಈ ಶಾರ್ಟ್‌ಕಟ್‌ಗಳು ಎಂದರೇನು, ಯಾವ ರಾಜಕೀಯ ಮುಖಂಡರ ಯಾವ ಶಾರ್ಟ್‌ಕಟ್‌ಗಳ ಬಗ್ಗೆ, ಅಂದರೆ ಅಡ್ಡದಾರಿಗಳ ಬಗ್ಗೆ ಹೇಳುತ್ತಿದ್ದಾರೆ ಎಂಬ ಗೊಂದಲ ಮೂಡಿಸದೇ ಇರವು.

ಕಾರ್ಪೊರೇಟ್ ಸಾಲ ಮನ್ನಾ

ವಾಣಿಜ್ಯ ಬ್ಯಾಂಕುಗಳು, ಅವುಗಳಲ್ಲಿ ಬಹುಪಾಲು ಸರಕಾರೀ ಒಡೆತನದ ಬ್ಯಾಂಕುಗಳು ದೊಡ್ಡ ಕಾರ್ಪೊರೇಟ್‌ಗಳು ಬಾಕಿ ತೀರಿಸದೆ ಸುಸ್ತಿಯಾದ ಸಾಲಗಳನ್ನು ರೈಟ್‌ಆಫ್ ಮಾಡುವ ಪ್ರಕ್ರಿಯೆ ಇತ್ತೀಚೆಗೆ ಬಹಳಷ್ಟು ಗಮನ ಸೆಳೆದಿದೆ. ಇವು ಕಾರ್ಪೊರೇಟ್ ಸಾಲಮನ್ನಾ ಅಲ್ಲ, ತಾಂತ್ರಿಕವಾಗಿ ಸಂಬಂಧಪಟ್ಟ ಬ್ಯಾಂಕಿನ ಲೆಕ್ಕಪತ್ರದಿಂದ ಹೊರಗಿಡಲಾಗುತ್ತದೆ, ಅದನ್ನು ವಸೂಲು ಮಾಡುವ ಪ್ರಯತ್ನಗಳು ಮುಂದುವರೆಯುತ್ತವೆ ಎಂದು ಆಳುವ ಮಂದಿ ಹೇಳುತ್ತಲೇ ಬಂದಿದ್ದಾರೆ. ರಾಜ್ಯಸಭೆಯಲ್ಲಿ ಸದಸ್ಯರೊಬ್ಬರು ಇಂತಹ ರೈಟ್‌ಆಫ್/ವಸೂಲಿ ಬಗ್ಗೆ ಹೇಳಿದ ಪ್ರಶ್ನೆಗೆ ಸರಕಾರದ ಉತ್ತರ ಹೀಗಿದೆ:(ಕೋಟಿ ರೂ.ಗಳಲ್ಲಿ)

ವರ್ಷ	ರೈಟ್–ಆಫ್	ಮರುವಸೂಲಿ
2017–18	1,61,328	12,881
2018–19	2,36,265	25,501
2019–20	2,34,120	30,016
2020–21	2,02,781	30,104
2021–22	1,74,966	33,534
ಒಟ್ಟು	**10,09,460**	**1,32,036**

ಅಂದರೆ 10 ಲಕ್ಷ ಕೋಟಿ ರೂ.ಗಿಂತಲೂ ಹೆಚ್ಚು ಸುಸ್ತಿಸಾಲಗಳನ್ನು ಲೆಕ್ಕದಿಂದ ಹೊರ ತೆಗೆಯಲಾಗಿದೆ, ಅವುಗಳಲ್ಲಿ ವಸೂಲಾದದ್ದು 1.32ಲಕ್ಷ ಕೋಟಿ ರೂ. ಮಾತ್ರ, ಅಂದರೆ 13% ಮಾತ್ರ! ಆದರೂ ಇದು ಸಾಲಮನ್ನಾ ಅಲ್ಲವಂತೆ.

ಈ ಅಂಕಿ–ಅಂಶಗಳ ಪ್ರಕಾರ 2021–22ರ ಒಂದು ವರ್ಷದಲ್ಲೇ 1,41,462 ಕೋಟಿ ರೂ.ಗಳನ್ನು ರಾಜಾರೋಷವಾಗಿ ಕದಿಯಲು ಬಿಡಲಾಗಿದೆ, ಇದನ್ನು ಸರಕಾರವೇ ಒಪ್ಪಿಕೊಂಡಿದೆ ಎಂದು ಈ ಬಗ್ಗೆ ಟಿಪ್ಪಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.ಕಳೆದ 5ವರ್ಷಗಳಲ್ಲಿ ಹೀಗೆ ‘ಕದಿಯಲು ಬಿಟ್ಟ’ ಹಣದ ಮೊತ್ತ 8.77ಲಕ್ಷ ಕೋಟಿ ರೂ. ಇವುಗಳಲ್ಲಿ 75% ದಷ್ಟು ಸಾರ್ವಜನಿಕ ವಲಯದ ಬ್ಯಾಂಕುಗಳದ್ದು, ಅಂದರೆ ಪ್ರಧಾನಿಗಳು ಹೇಳಿರುವಂತೆ **“ತೆರಿಗೆದಾರರು ಕಷ್ಟಪಟ್ಟು ಗಳಿಸಿದ ಹಣ”!** ಆದರೂ ಇದು ಅವರು ಹೇಳಿರುವ ಶಾರ್ಟ್‌ಕಟ್‌ನಲ್ಲಿ ಬರುತ್ತದೆಯೇ ಗೊತ್ತಿಲ್ಲ.

ಉದ್ಯೋಗ ನಿರ್ಮಾಣದ ಆಶ್ವಾಸನೆ

ಇನ್ನು ಆಳುವ ಪಕ್ಷದ ವರ್ಷಕ್ಕೆ 2 ಕೊಟಿ ಉದ್ಯೋಗ ನಿರ್ಮಾಣದ ಆಶ್ವಾಸನೆಯ ಬಗ್ಗೆ. ಅದೀಗ ಮುಂದಿನ ಒಂದು ವರ್ಷದಲ್ಲಿ 10 ಲಕ್ಷಕ್ಕೆ ಇಳಿದಿದೆ.

ಕೇಂದ್ರ ಸರಕಾರದ ಅಡಿಯಲ್ಲಿಯೇ ಕಳೆದ ಹಲವು ವರ್ಷಗಳಿಂದ ಭರ್ತಿ ಮಾಡದೆ ಖಾಲಿ ಬಿಟ್ಟಿರುವ ಹುದ್ದೆಗಳ ಸರಕಾರವೇ ಕೊಟ್ಟಿರುವ ಅಂಕಿ–ಅಂಶಗಳು ಹೀಗಿವೆ:

* ಕೇಂದ್ರದ 52 ಸಚಿವಾಲಯಗಳ 53 ಇಲಾಖೆಗಳು ಮತ್ತು 2 ಸ್ವತಂತ್ರ ಇಲಾಖೆಗಳಲ್ಲಿ ಭರ್ತಿ ಮಾಡದೇ ಬಿಟ್ಟಿರುವ ಹುದ್ದೆಗಳ ಸಂಖ್ಯೆ 995803
* ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ –41177
* ಉನ್ನತ ಶಿಕ್ಷಣ ವಲಯದಲ್ಲಿ ಬೋಧಕ ಮತ್ತು ಬೋಧಕೇತರ ಹುದ್ದೆಗಳು –40769
* ಕೇಂದ್ರೀಯ ವಿದ್ಯಾಲಯಗಳಲ್ಲಿ –14679
* ಆರೋಗ್ಯ ವಲಯದಲ್ಲಿ –266243
* ಅಂಗನವಾಡಿಗಳಲ್ಲಿ –174057
* ಭಾರತೀಯ ಸೇನೆಯಲ್ಲಿ –146513
* ಕೇಂದ್ರೀಯ ಪೋಲೀಸ್ ಪಡೆಗಳಲ್ಲಿ –116317

45 ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಒಟ್ಟು 18956 ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಲ್ಲಿ 6180 ಹುದ್ದೆಗಳಿಗೆ ನೇಮಕವಾಗಿಲ್ಲ ಎಂದು ಕೇಂದ್ರ ಶಿಕ್ಷಣ ಮತ್ರಿಗಳು ಲೋಕಸಭೆಗೆ ತಿಳಿಸಿದ್ದಾರೆ. ಅಂದರೆ 33% ಹುದ್ದೆಗಳು ನೇಮಕವಿಲ್ಲದೆ ಖಾಲಿ ಇವೆ.

ಈ ಪ್ರಮಾಣ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಒಬಿಸಿ ಮೀಸಲಾತಿಯಲ್ಲಿ ಅನುಕ್ರಮವಾಗಿ 40%, 48% ಮತ್ತು 45%.

2553 ರಲ್ಲಿ 1529 ಪ್ರೊಫೆಸರ್ ಹುದ್ದೆಗಳು, 5110ರಲ್ಲಿ 2347 ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗಳು ಮತ್ತು 11293 ರಲ್ಲಿ 2347 ಅಸಿಸ್ಟೆಮಟ್ ಪ್ರೊಫೆಸರ್ ಹುದ್ದೆಗಳನ್ನು ಖಾಲಿ ಇಡಲಾಗಿದೆ.

10 ಕೋಟಿಯಿಂದ 10ಲಕ್ಷಕ್ಕಿಳಿದ ಆಶ್ವಾಸನೆಯಲ್ಲಿ 75,000 ಹುದ್ದೆಗಳ ಆದೇಶಪತ್ರಗಳನ್ನು ಪ್ರಧಾನಿಗಳು ಹಿಮಾಚಲ ಮತ್ತು ಗುಜರಾತ್ ಚುನಾವಣಾ ಪ್ರಚಾರದ ತುಸು ಮೊದಲು ಅಕ್ಟೋಬರ್‌ನಲ್ಲಿ ಮತ್ತು ಇನ್ನು 75000ದ್ದು ಗುಜರಾತ್ ಚುನಾವಣಾ ಪ್ರಚಾರ ಮುಗಿದು ಮತದಾನದ ವೇಳೆಯಲ್ಲಿ ಟಿವಿಯಲ್ಲಿ ದೂರಹಂಚಿಕೆ ಮೂಲಕ ಹಂಚಿದ್ದಾರೆ. ಉಳಿದದ್ದು ...?


ಮೇಲೆ ಹೇಳಿದಂತೆ, ಹುಸಿ ಭರವಸೆಗಳನ್ನು ಕೊಟ್ಟು ಅಧಿಕಾರ ಬಾಚಿಕೊಳ್ಳುವುದೇ ಗುರಿಯಾಗಿರುವ ಮಂದಿ ಎಂದೂ ದೇಶವನ್ನು ಕಟ್ಟಲಾರರು ಎಂದು ಸ್ವತಃ ಪ್ರಧಾನಿಗಳೇ ಸಾರಿದ್ದಾರೆ!.

ಅಲ್ಲದೆ, ಆಶ್ವಾಸನೆಗಳನ್ನು ನಿಭಾಯಿಸಲು 5 ವರ್ಷಗಳ ಆಳ್ವಿಕೆಯಿದ್ದರೂ ಚುನಾವಣೆಯ ಸಂದರ್ಭದಲ್ಲೇ ಉದ್ಘಾಟನೆಗಳ ಉತ್ಸವ ಏಕೆ?

ಇದು ಅವರ ಪ್ರಕಾರ ಶಾರ್ಟ್‌ಕಟ್ ರಾಜಕೀಯದ ಭಾಗವಾಗುತ್ತದೋ ಇಲ್ಲವೋ ತಿಳಿದಿಲ್ಲ.

ಪುಟ 14 ಕ್ಕೆ

‘ನಿರ್ಭಯ’ ಪ್ರಕರಣದ ನಂತರ ಮಹಿಳೆಯರ ಭದ್ರತೆಗೆಂದು 2013ರಲ್ಲಿ ನಿಯೋಜಿಸಲಾದ ನಿರ್ಭಯಾ ನಿಧಿಯ 30 ಕೋಟಿ ರೂ.ಗಳಿಂದ ಮುಂಬೈ ಪೊಲಿಸ್ ಈ ವರ್ಷ ಖರೀದಿಸಿದ್ದ ವಾಹನಗಳಲ್ಲಿ 47 ಬೊಲೆರೊ ಕಾರುಗಳನ್ನು ಈಗ ಬಿಜೆಪಿಯ ನೆರವಿನಿಂದ ಅಧಿಕಾರ ಪಡೆದು ಅದರೊಂದಿಗೆ ಸರಕಾರ ನಡೆಸುತ್ತಿರುವ ಏಕನಾಥ ಶಿಂಧೆ ಬಣದ ಶಾಸಕರು ಮತ್ತು ಸಂಸದರ ಭದ್ರತೆಗೆ ಕೊಡಲಾಗಿದೆ –ಸುದ್ದಿ



ವ್ಯಂಗ್ಯಚಿತ್ರ ಕೃಪೆ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಚುನಾವಣಾ ಆಯೋಗ ಮತ್ತು ಮಾದರಿ ಆಚಾರ ಸಂಹಿತೆ

ಗುಜರಾತ್ ಚುನಾವಣಾ ಪ್ರಚಾರದ ವೇಳೆಯಲ್ಲಿ ಗೃಹ ಮಂತ್ರಿ ಅಮಿತ್ ಷಾ ಗುಜರಾತಿನಲ್ಲಿ ಕಾಂಗ್ರೆಸಿನಿಂದಾಗಿ ಧೈರ್ಯ ಪಡೆದು ಗಲಭೆಗಳಲ್ಲಿ ತೊಡಗಿದ್ದವರಿಗೆ ಒಂದು ಪಾಟ ಕಲಿಸಿದ ನಂತರ 2002ರಿಂದ ಶಾಶ್ವತ ಶಾಂತಿ ನೆಲೆಸಿದೆ ಎಂದು ಹೇಳಿರುವುದು ಮಾದರಿ ಆಚಾರ ಸಂಹಿತೆಯನ್ನಾಗಲೀ ಬೇರೆ ಯಾವುದೇ ಕಾಯ್ದೆಯನ್ನಾಗಲೀ ಉಲ್ಲಂಘಿಸಿಲ್ಲ ಎಂದು ಚುನಾವಣಾ ಆಯೋಗದ ಒಬ್ಬ ‘ಅನಾಮಧೇಯ’ ಅಧಿಕಾರಿ ಹೇಳಿರುವುದಾಗಿ ವರದಿಯಾಗಿದೆ. ಏಕೆಂದರೆ ಈ ಭಾಷಣದಲ್ಲಿ ಯಾವುದೇ ಸಮುದಾಯವನ್ನು ಉಲ್ಲೇಖಿಸಿಲ್ಲ ಎಂದು ಅವರು ಹೇಳಿದ್ದಾರಂತೆ.

ಚುನಾವಣಾ ಪ್ರಚಾರ, ಮತದಾನ ಮುಗಿದು ಫಲಿತಾಂಶ ಬಂದ ಮೇಲೆ ಈ ಸುದ್ದಿ ಬಂದಿದೆ. ಅದೂ ಆಯೋಗದ ಒಬ್ಬ ‘ಅನಾಮಧೇಯ’ ಅಧಿಕಾರಿಯಿಂದ!

ಕೆಲವರು ಈ ಸುದ್ದಿಯ ಹಿನ್ನೆಲೆಯಲ್ಲಿ, ಈ ಮೊದಲು 2014ರಲ್ಲಿ ಇದೇ ಚುನಾವಣಾ ಆಯೋಗ ಶಾಮಿಲಿ ಚುನಾವಣಾ ಪ್ರಚಾರದಲ್ಲಿ “ಇದು ಕೇವಲ ಇನ್ನೊಂದು ಚುನಾವಣೆ ಅಲ್ಲ, ನಮ್ಮ ಸಮುದಾಯಕ್ಕೆ ಮಾಡಿರುವ ಅವಮಾನದ ಹಗೆ ತೀರಿಸಬೇಕಾದ ಸಮಯ...” ಎಂದು ಹೇಳಿದುದಕ್ಕೆ ಅವರ ಪ್ರಚಾರ ಕಾರ್ಯದ ಮೇಲೆ ನಿಷೇಧ ಹಾಕಿತ್ತು, ಪ್ರಚಾರದಲ್ಲಿ ಬೈಗುಳ ಅಥವ ಹೀಯಾಳಿಸುವ ಭಾಷೆ ಬಳಸುವುದಿಲ್ಲ ಎಂದು ಭಾಷೆ ಕೊಟ್ಟ ಮೇಲೆಯೇ ಅದನ್ನು ತೆಗೆಯಲಾಗಿತ್ತು ಎಂಬುದನ್ನು ನೆನಪಿಸಿಕೊಂಡಿದ್ದಾರೆ. ಏಕೆಂದರೆ ಆಗಲೂ ಷಾ ಅವರು ಯಾವುದೇ ಸಮುದಾಯದ ಹೆಸರನ್ನು ಉಲ್ಲೇಖಿಸಿರಲಿಲ್ಲ.

ಸ್ವಾಯತ್ತ ಚುನಾವಣಾ ಆಯೋಗ ಪ್ರಜಾಪ್ರಭುತ್ವದ ಹೃದಯ. ಜಗತ್ತಿನ ಬೇರೆಲ್ಲೂ ಚುನಾವಣಾ ಆಯುಕ್ತರನ್ನು ಆಳುವ ಸರಕಾರ ಏಕಪಕ್ಷೀಯವಾಗಿ ನೇಮಿಸುವುದಿಲ್ಲ ಎಂದು ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಶಿ ಹೇಳಿದ್ದಾರೆ.



ವ್ಯಂಗ್ಯಚಿತ್ರ: ರಾಜೇಂದ್ರ ಧೋಡಪ್‌ಕರ್





ದಾರಿಗಾಣದಾಗಿರುವ ನವ-ಉದಾರವಾದದ ಆಳ್ವಿಕೆಯಲ್ಲಿ ಜಾಗತಿಕವಾಗಿ ಹೆಚ್ಚುತ್ತಿದೆ ದುಡಿಯುವ ವರ್ಗದ ಪ್ರತಿರೋಧ

ನವ-ಉದಾರವಾದೀ ವ್ಯವಸ್ಥೆ ತಾನು ಸೃಷ್ಟಿಸಿರುವ ಪರಿಸ್ಥಿತಿಗಳನ್ನು ಬಳಸಿಕೊಂಡು ಉತ್ಪಾದನೆಯನ್ನು ಸ್ಥಳಾಂತರಿಸುವ ಬೆದರಿಕೆ ಒಡ್ಡಿಯೋ, ಕಿರು ಉತ್ಪಾದನೆಯನ್ನು ಕಾರ್ಪೊರೇಟ್ ದಾಳಿಗೆ ಒಳಪಡಿಸಿಯೋ ಅಥವ ಖಾಸಗೀಕರಣದ ಮೂಲಕವೋ ಒಟ್ಟಾರೆಯಾಗಿ ಬಂಡವಾಳದ ವಿರುದ್ಧದ ಹೋರಾಟದಲ್ಲಿ ದುಡಿಯುವ ವರ್ಗವನ್ನು ದುರ್ಬಲಗೊಳಿಸುತ್ತದೆ. ಇಂತಹ ಸನ್ನಿವೇಶದಲ್ಲಿಯೂ, ಕಾರ್ಮಿಕರ ರಣೋತ್ಸಾಹ ಹೆಚ್ಚುತ್ತಿರುವ ವಿದ್ಯಮಾನವನ್ನು ಈಗ ಕಾಣುತ್ತಿದ್ದೇವೆ. ಬ್ರಿಟನ್ನಿನಲ್ಲಿ ಇತ್ತೀಚೆಗಿನ ದಶಕಗಳಲ್ಲೇ ಅತಿದೊಡ್ಡದಾದ ರೈಲ್ವೆ ಮುಷ್ಕರ ಇದಕ್ಕೆ ಒಂದು ಉದಾಹರಣೆಯಷ್ಟೇ. ಇತರ ಯುರೋಪಿಯನ್ ದೇಶಗಳಲ್ಲೂ ಇದೇ ಪರಿಸ್ಥಿತಿ ಇದೆ. ಇಲ್ಲಿಯವರೆಗೂ ಕಾರ್ಮಿಕರ ತುಲನಾತ್ಮಕ ಜಡತೆಯು ನವ-ಉದಾರವಾದಿ ಯುಗದ ಎದ್ದುಕಾಣುವ ಲಕ್ಷಣವಾಗಿತ್ತು. ಅದೀಗ ಕೊನೆಗೊಳ್ಳುತ್ತಿದೆ. ಹಣದುಬ್ಬರದ ಮಾರ್ಗವಾಗಿ ನವ-ಉದಾರವಾದವು ತಮ್ಮ ಜೀವನ ಮಟ್ಟದ ಮೇಲೆ ಎಸಗುತ್ತಿರುವ ನೇರ ಹಲ್ಲೆಯನ್ನು ಎಲ್ಲೆಡೆಯಲ್ಲೂ ಕಾರ್ಮಿಕರು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಈ ಹಲ್ಲೆಯು, ದಾರಿಕಾಣದಂತಾಗಿರುವ ನವ-ಉದಾರವಾದದ ಪರಿಸ್ಥಿತಿಯ ಸಂಕೇತವಾಗಿದೆ.

ಪ್ರೊ.ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ನವ-ಉದಾರವಾದಿ ಆಳ್ವಿಕೆಯು, ಎಲ್ಲೆಡೆಯೂ ವರ್ಗ ಬಲಾಬಲದಲ್ಲಿ ಬದಲಾವಣೆಯನ್ನು ಸಹಜವಾಗಿಯೇ ದುಡಿಯುವ ವರ್ಗದ ವಿರುದ್ಧವಾಗಿಯೇ ತರುತ್ತದೆ. ಹಲವಾರು ಕಾರಣಗಳಿಗಾಗಿ ಈ ಬದಲಾವಣೆ ಸಂಭವಿಸುತ್ತದೆ. ಮೊದಲನೆಯದು, ಬಂಡವಾಳವು ಜಾಗತಿಕವಾಗಿ ಚಲಿಸುವ ಅವಕಾಶ ಹೊಂದಿದೆ. ಆ ಅವಕಾಶವು ಶ್ರಮ ಶಕ್ತಿಗೆ (ಕಾರ್ಮಿಕರಿಗೆ) ಲಭ್ಯವಿಲ್ಲ. ಆದುದರಿಂದ, ಜಾಗತಿಕವಾಗಿ ಚಲಿಸುವ ಬಂಡವಾಳವು ಒಂದು ದೇಶದ ದುಡಿಯುವ ವರ್ಗವನ್ನು ಮತ್ತೊಂದರ ವಿರುದ್ಧ ಎತ್ತಿಕಟ್ಟುತ್ತದೆ. ಒಂದು ದೇಶದ ಕಾರ್ಮಿಕರು ಮುಷ್ಕರ ನಡೆಸಿದಾಗ, ಬಂಡವಾಳವು ತನ್ನ ಉತ್ಪಾದನೆಯನ್ನು ಮತ್ತೊಂದು ದೇಶಕ್ಕೆ ಸ್ಥಳಾಂತರಿಸುವ ಆಯ್ಕೆಯನ್ನು ಹೊಂದಿದೆ. ಬಂಡವಾಳವು ಒಡ್ಡುವ ಈ ರೀತಿಯ ಸ್ಥಳಾಂತರದ ಬೆದರಿಕೆಯೇ ಪ್ರತಿಯೊಂದು ದೇಶದ ಕಾರ್ಮಿಕರ ಹೋರಾಟದ ಹುಮ್ಮಸ್ಸನ್ನು ಮೊಟಕುಗೊಳಿಸುತ್ತದೆ.

ಮುಷ್ಕರಗಳು ಒಂದು ದೇಶದಲ್ಲಿ ಮಾತ್ರವಲ್ಲದೆ, ಹಲವು ಹತ್ತು ದೇಶಗಳಲ್ಲಿ ಏಕಕಾಲದಲ್ಲಿ ಘಟಿಸುವ ರೀತಿಯಲ್ಲಿ ಕಾರ್ಮಿಕರನ್ನು ಒಂದು ವೇಳೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಘಟಿಸಿದ್ದರೆ, ಆಗ ಬಂಡವಾಳವು ತನ್ನ ಉತ್ಪಾದನೆಯನ್ನು ಮತ್ತೊಂದು ದೇಶಕ್ಕೆ ಸ್ಥಳಾಂತರಿಸುವ ಬೆದರಿಕೆ ಹಾಕುತ್ತಿರಲಿಲ್ಲ. ಕಾರ್ಮಿಕ ವರ್ಗಕ್ಕೆ ತನ್ನ ವ್ಗ್ರ್ಕಾಂಯ್ರ್ಾಚ್ರ್ಣ್ಗ್ಳ್ನ್ನು ಅಂತಾರಾಷ್ಟ್ರೀಯವಾಗಿ ಸಂಯೋಜಿಸುವುದು ಇನ್ನೂ ಸಾಧ್ಯವಾಗಿಲ್ಲ. ಹಾಗಾಗಿ, ಸ್ಥಳಾಂತರದ ಬೆದರಿಕೆಗಳು ಇನ್ನೂ ಪರಿಣಾಮಕಾರಿಯಾಗಿಯೇ ಉಳಿದಿವೆ. ಕಾರ್ಮಿಕರು ಒಂದು ವೇಳೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಘಟಿತರಾಗಿದ್ದರೂ, ಉತ್ಪಾದನೆಯನ್ನು ಸಂಪೂರ್ಣವಾಗಿ ಹೊಸದೊಂದು ಸ್ಥಳಕ್ಕೆ ಸ್ಥಳಾಂತರಿಸುವ ಬೆದರಿಕೆಯನ್ನು ಬಂಡವಾಳವು ನಿಲ್ಲಿಸದು. ಆದರೂ ಹಾಗೆ ಮಾಡುವುದು ಅದಕ್ಕೆ ಹೆಚ್ಚು ಕಷ್ಟಕರವಾಗುತ್ತಿತ್ತು. ಪ್ರಸ್ತುತ ಉತ್ಪಾದನಾ ನೆಲೆಗಳಲ್ಲಿಯೂ ಕಾರ್ಮಿಕರು ಅಂತಾರಾಷ್ಟ್ರೀಯವಾಗಿ ಸಂಘಟಿತರಾಗಿಲ್ಲ ಎಂಬುದು ಕೂಡ ಬಂಡವಾಳದ ಪರವಾಗಿ ಕೆಲಸ ಮಾಡುತ್ತದೆ ಮತ್ತು ಎಲ್ಲೆಡೆಯೂ ಕಾರ್ಮಿಕರ ಹೋರಾಟದ ಹುಮ್ಮಸ್ಸಿನ ಮಟ್ಟವನ್ನು ತಗ್ಗಿಸುತ್ತದೆ.

ಬಂಡವಾಳದ ಕೇಂದ್ರೀಕರಣವು ಕಾರ್ಮಿಕರ ಹೋರಾಟದ ಹುಮ್ಮಸ್ಸನ್ನು ತಗ್ಗಿಸುವ ಒಂದು ಸಾಧನ ಎಂಬುದು ಎಲ್ಲರಿಗೂ ಗೊತ್ತಿರುವ ಸತ್ಯಾಂಶವೇ. ಚೆದುರಿದ ಚಟುವಟಿಕೆಗಳಲ್ಲಿ ಅಥವಾ ಚೆದುರಿದ ಭೌಗೋಳಿಕ ನೆಲೆಗಳಲ್ಲಿ ಬಂಡವಾಳವು ಹೂಡಿಕೆಯಾಗಿರುವುದರಿಂದ, ಯಾವುದೇ ನಿರ್ದಿಷ್ಟ ಸ್ಥಳದಲ್ಲಿ ಅಥವ ಕ್ಷೇತ್ರದಲ್ಲಿ ನಡೆಯಬಹುದಾದ ಕಾರ್ಮಿಕರ ಸಮರಧೀರ ಕಾರ್ಯಾಚರಣೆಯು ಬಂಡವಾಳದ ಸ್ಥಳಾಂತರದ ಬೆದರಿಕೆಯನ್ನು ಎದುರಿಸ ಬೇಕಾಗುತ್ತದೆ. ಈ ಪ್ರಕಾರವಾಗಿ ಕೇಂದ್ರೀಕೃತಗೊಂಡ ಬಂಡವಾಳವು ಕಾರ್ಮಿಕರ ಸಮರಧೀರ ಕಾರ್ಯಾಚರಣೆಗಳನ್ನು ನಿರ್ಬಂಧಿಸುತ್ತದೆ.

ಅದೇ ನಿಟ್ಟಿನಲ್ಲಿ ಕೆಲಸ ಮಾಡುವ ಎರಡನೆಯ ಅಂಶವೆಂದರೆ: ಉತ್ಪಾದನಾ ಚಟುವಟಿಕೆಗಳು ಬಂಡವಾಳಶಾಹಿ ದೇಶಗಳ ಮಹಾನಗರಗಳಿಂದ ಅಂಚಿನ ದೇಶಗಳಿಗೆ ಸ್ಥಳಾಂತರಗೊಂಡರೂ ಮತ್ತು ಆ ಮೂಲಕವಾಗಿ ಆ ಮಹಾನಗರಗಳ ಕಾರ್ಮಿಕರ ಚೌಕಾಶಿಯ ಶಕ್ತಿಯನ್ನು ಮತ್ತು ಅವರ ಮುಷ್ಕರದ ಶಕ್ತಿಯನ್ನು ದುರ್ಬಲಗೊಳಿಸಿದರೂ ಸಹ, ಅಂಚಿನ ದೇಶಗಳಲ್ಲಿರುವ ಕಾರ್ಮಿಕರ ಮೀಸಲು ಪಡೆಯೂ ಖಾಲಿಯಾಗುವುದಿಲ್ಲ ಮತ್ತು ಕಾರ್ಮಿಕರ ಹೋರಾಟದ ಕೆಚ್ಚೂ ಹೆಚ್ಚುವುದಿಲ್ಲ.

ಮೆಟ್ರೊಪೊಲಿಟನ್ ಅಥವ ಬಂಡವಾಳದ ಮಹಾನಗರಗಳ ಕಾರ್ಮಿಕರನ್ನು ಅಂಚಿನಲ್ಲಿರುವ ದೇಶಗಳ ಕಾರ್ಮಿಕ-ಮೀಸಲು ಪಡೆಯೊಂದಿಗೆ ತಳಕು ಹಾಕುವ ಮೂಲಕ, ಅವರನ್ನು ನವ-ಉದಾರವಾದವು ನಿಯಂತ್ರಿಸುತ್ತದೆ ಎಂಬ ಅಂಶವನ್ನು ಸಷ್ಟವಾಗಿ ಗುರುತಿಸಲಾಗಿದೆ. ಮೆಟ್ರೋಪಾಲಿಟನ್ ಕಾರ್ಮಿಕರ ಮತ್ತು ಅಂಚಿನಲ್ಲಿರುವ ದೇಶಗಳ ಕಾರ್ಮಿಕರ ಪರಿಸ್ಥಿತಿಗಳಲ್ಲಿ ಅಂತರ ಹೆಚ್ಚುತ್ತಿದ್ದುದು ಜಾಗತಿಕ ಅರ್ಥವ್ಯವಸ್ಥೆಯನ್ನು ಬಂಡವಾಳ ಮತ್ತು ಕಾರ್ಮಿಕರು ಚಲಿಸಲು ಅವಕಾಶವಿಲ್ಲದ ಎರಡು ಭಾಗಗಳಾಗಿ ವಿಂಗಡಿಸಿದ ಹಿಂದಿನ ಅವಧಿಯ ಲಕ್ಷಣವಾಗಿತ್ತು. ಆದರೆ, ಈಗ ಇಂತಹ ಸನ್ನಿವೇಶ ಮುಂದುವರೆಯಲು ಸಾಧ್ಯವಿಲ್ಲ. ಆದರೆ, ನವ-ಉದಾರವಾದವು ಅತ್ತ ಈರೀತಿಯ ಸ್ಥಳಾಂತರದ ನೆರವಿನಿಂದ ಕಾರ್ಮಿಕ ಮೀಸಲುಗಳನ್ನು ಬಳಸಿಕೊಂಡು, ಅಂಚಿನ ದೇಶಗಳ ಅರ್ಥವ್ಯವಸ್ಥೆಯ ಕ್ಷಿಪ್ರ ಬೆಳವಣಿಗೆಯನ್ನು ಸಾಕಾರಗೊಳಿಸುವ ಭರವಸೆಯನ್ನು ಅವರಿಗೆ ನೀಡಿತ್ತು. ಅಂದರೆ, ವಸಾಹತುಶಾಹಿ ಮತ್ತು ಅರೆ-ವಸಾಹತುಶಾಹಿ ಬಿಟ್ಟುಹೋಗಿರುವ ಈ ಮೀಸಲುಗಳು (ನಿಜ, ನವ-ಉದಾರವಾದಿ ಸಿದ್ಧಾಂತವು ಈ ಸಂಗತಿಯನ್ನು ಗುರುತಿಸುವುದಿಲ್ಲ) ಅಂತಿಮವಾಗಿ ಕ್ಷೀಣಿಸುತ್ತವೆ ಎಂಬ ಭರವಸೆಯನ್ನು ನವ-ಉದಾರ್ವಾದ್ವ್ು ಹೊಂದಿತ್ತು.

ಆದರೆ, ಅಂಚಿನಲ್ಲಿರುವ ದೇಶಗಳ ಪರಿಸ್ಥಿತಿಗಳನ್ನು ಸುಧಾರಿಸುವುದಾಗಿ ಕೊಟ್ಟ ಮಾತನ್ನು ನವ-ಉದಾರವಾದವು ಉಳಿಸಿಕೊಳ್ಳಲಿಲ್ಲ. ವಾಸ್ತವವಾಗಿ, ಅಂಚಿನ ದೇಶಗಳ ಕಾರ್ಮಿಕ ಮೀಸಲುಗಳ ಪ್ರಮಾಣವನ್ನು ಇಳಿಕೆ ಮಾಡುವ ಬದಲು, ನವ-ಉದಾರವಾದಿ ಆಳ್ವಿಕೆಯು ಅದನ್ನು ಹೆಚ್ಚಿಸಿದೆ. ಅಂದರೆ ಅಲ್ಲಿ ನಿರುದ್ಯೋಗದ ಹೆಚ್ಚಳದಲ್ಲಿ ನವ-ಉದಾರವಾದವೂ ಭಾಗಿಯಾಗಿದೆ. ನಿಜ, ಇದು ಉದ್ಯೋಗದಲ್ಲಿರುವ ಕಾರ್ಮಿಕರ ಸಂಖ್ಯೆಯ ಇಳಿಕೆಯ ಮೂಲಕ ಪ್ರಕಟಗೊಂಡಿರಲಿಕ್ಕಿಲ್ಲ, ಬದಲಿಗೆ ಪ್ರತಿಯೊಬ್ಬ ಕಾರ್ಮಿಕನು ಕೆಲಸ ಮಾಡುವ ದಿನಗಳ ಸಂಖ್ಯೆಯ ಇಳಿಕೆಯ ರೂಪದಲ್ಲಿ ನಿರುದ್ಯೋಗವು ಪ್ರಕಟಗೊಳ್ಳಬಹುದು.

ನಿರುದ್ಯೋಗದ ಈ ರೀತಿಯ ಹೆಚ್ಚಳವು ನವ-ಉದಾರವಾದದ ಎರಡು ಗುಣಲಕ್ಷಣಗಳಿಂದ ಸಂಭವಿಸುತ್ತದೆ. ಒಂದು, ಕಿರುಉತ್ಪಾದನೆಯ ಮತ್ತು ರೈತಾಪಿ-ಕೃಷಿಯ ವಲಯಗಳನ್ನು ಕಾರ್ಪೊರೇಟ್ ಬಂಡವಾಳ ಮತ್ತು ಕೃಷಿ-ಉದ್ದಿಮೆಗಳ ಅತಿಕ್ರಮಣಕ್ಕೆ ಮುಕ್ತಗೊಳಿಸುವ ಉದ್ದೇಶದಿಂದ ಈ ವಲಯಗಳಿಗೆ ಸರ್ಕಾರವು ಒದಗಿಸುತ್ತಿದ್ದ ಬೆಂಬಲವನ್ನು ಹಿಂತೆಗೆದುಕೊಳ್ಳುವ ಕ್ರಮ. ಎರಡನೆಯ ಗುಣಲಕ್ಷಣವೆಂದರೆ, ಗಡಿಯಾಚೆಯಿಂದ ಸರಕುಗಳು ಮತ್ತು ಸೇವೆಗಳು ಮುಕ್ತವಾಗಿ ಹರಿಯಲು ಅನುವಾಗುವಂತೆ ಅರ್ಥವ್ಯವಸ್ಥೆಯನ್ನು ತೆರೆದಿಡುವ ಕ್ರಮ. ಆಮದು ಮಾಡಿಕೊಂಡ ಸರಕುಗಳು ಮತ್ತು ಸೇವೆಗಳು ಸ್ಥಳೀಯ ಉತ್ಪನ್ನಗಳಿಗೆ ಹೊಡೆತಕೊಡುವುದರಿಂದ, ಪ್ರತಿಯೊಬ್ಬ ಉತ್ಪಾದಕನೂ ಮಾರುಕಟ್ಟೆಯಲ್ಲಿ ತನ್ನ ಪಾಲನ್ನು ಉಳಿಸಿಕೊಳ್ಳಲು, ಗುಣಮಟ್ಟದ ವಸ್ತುಗಳನ್ನು ತಯಾರಿಸುವ ಸಲುವಾಗಿ, ಉನ್ನತ ಮಟ್ಟದ ತಂತ್ರಜ್ಞಾನವನ್ನು ಬಳಸಿಕೊಳ್ಳುವ ಒತ್ತಾಯಕ್ಕೆ ಒಳಗಾಗುತ್ತಾನೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶ್ರಮ ಶಕ್ತಿಯ ಮೇಲಿನ ಉಳಿತಾಯವೇ ತಂತ್ರಜ್ಞಾನದ ಒಂದು ಮಾದರಿಯಾಗಿ ಉಳಿದಿರುವುದರಿಂದಾಗಿ, ತಾಂತ್ರಿಕ ಅನ್ವೇಷಣೆಗಳ ಫಲವಾಗಿ ಹೆಚ್ಚುವ ಕಾರ್ಮಿಕರ ಉತ್ಪಾದಕತೆಯು ಉದ್ಯೋಗಗಳ ಕುಸಿತದಲ್ಲಿ ಪರಿಣಮಿಸುತ್ತದೆ. ಈ ರೀತಿಯಲ್ಲಿ, ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ, ಒಂದು ಕಡೆಯಲ್ಲಿ ಉದ್ಯೋಗಗಳು ಕುಗ್ಗುತ್ತವೆ ಮತ್ತು ಅದೇ ಸಮಯದಲ್ಲಿ, ತಮ್ಮ ಕಸುಬಿನಿಂದ ಹೊರಹಾಕಲ್ಪಟ್ಟ ರೈತರು ಮತ್ತು ಕುಶಲಕರ್ಮಿಗಳು ಉದ್ಯೋಗ ಬಯಸುವವರ ಸಂಖ್ಯೆಯನ್ನು ಹೆಚ್ಚಿಸುತ್ತಾರೆ. ಹಾಗಾಗಿ, ಕಾರ್ಮಿಕ ಮೀಸಲು ಪಡೆಯ ಗಾತ್ರವು ತುಲನಾತ್ಮಕವಾಗಿ ಹೆಚ್ಚುತ್ತದೆ. ಈ ವಿದ್ಯಮಾನವು ಎಲ್ಲಾ ದೇಶಗಳಲ್ಲೂ ದುಡಿಯುವ ವರ್ಗದ ಪರಿಸ್ಥಿತಿಯನ್ನು ದುರ್ಬಲಗೊಳಿಸುತ್ತದೆ.

ಪುಟ 14 ಕ್ಕೆ

ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ, ಒಂದು ಕಡೆಯಲ್ಲಿ ಉದ್ಯೋಗಗಳು ಕುಗ್ಗುತ್ತವೆ ಮತ್ತು ಅದೇ ಸಮಯದಲ್ಲಿ, ತಮ್ಮ ಕಸುಬಿನಿಂದ ಹೊರಹಾಕಲ್ಪಟ್ಟ ರೈತರು ಮತ್ತು ಕುಶಲಕರ್ಮಿಗಳು ಉದ್ಯೋಗ ಬಯಸುವವರ ಸಂಖ್ಯೆಯನ್ನು ಹೆಚ್ಚಿಸುತ್ತಾರೆ. ಹಾಗಾಗಿ, ಕಾರ್ಮಿಕ ಮೀಸಲು ಪಡೆಯ ಗಾತ್ರವು ತುಲನಾತ್ಮಕವಾಗಿ ಹೆಚ್ಚುತ್ತದೆ. ಈ ವಿದ್ಯಮಾನವು ಎಲ್ಲಾ ದೇಶಗಳಲ್ಲೂ ದುಡಿಯುವ ವರ್ಗದ ಪರಿಸ್ಥಿತಿಯನ್ನು ದುರ್ಬಲಗೊಳಿಸುತ್ತದೆ.



ಬಂಡವಾಳಶಾಹಿ ಬಿಕ್ಕಟ್ಟುಗಳು ಹೊಂದಿರುವ ವಿಶಿಷ್ಟ ಗುಣಲಕ್ಷಣವೆಂದರೆ, ಅವುಗಳನ್ನು ಆಗಾಗ ಪರಿಹರಿಸುವ ಪ್ರಯತ್ನಗಳೇ ವಿಭಿನ್ನರೂಪದ ಬಿಕ್ಕಟ್ಟುಗಳಿಗೆ ಕಾರಣವಾಗುತ್ತವೆ. ನವ-ಉದಾರವಾದಿ ಬಂಡವಾಳಶಾಹಿಯು ಒಟ್ಟಾರೆಯಾಗಿ ಜಾಗತಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮತ್ತು ಯಾವುದೇ ಒಂದು ನಿರ್ದಿಷ್ಟ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮಿಗುತಾಯದ ಪಾಲು ಹೆಚ್ಚುವಂತೆ ನೋಡಿಕೊಂಡಿತು. ಆದರೆ ಮಿಗುತಾಯದ ಈ ಹೆಚ್ಚಳದಿಂದಾಗಿಯೇ ಸೃಷ್ಟಿಯಾದ ಒಂದು ಅತಿ-ಉತ್ಪಾದನಾ ಪ್ರವೃತ್ತಿಯು ಬಿಕ್ಕಟ್ಟನ್ನು ಉಂಟುಮಾಡಿತು.

‘ಶಾರ್ಟ್‌ಕಟ್ ರಾಜಕೀಯದ ವಿಕೃತಿ’ ಎಂದರೇನು......

ಪುಟ 12 ರಿಂದ

ಎಂಟು ವರ್ಷಗಳಲ್ಲಿ ಸರಕಾರೀ ಜಾಹೀರಾತುಗಳಿಗೆ 6491 ಕೋಟಿ ರೂ.!

ಸಂಸತ್ತಿನಲ್ಲಿ ಸರಕಾರದ ಪರವಾಗಿ ನೀಡಿದ ಮಾಹಿತಿಗಳ ಪ್ರಕಾರ 2014ರಿಂದ ಡಿಸೆಂಬರ್ 7, 2022ರ ವರೆಗೆ ಮೋದಿ ಸರಕಾರ ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಜಾಹೀರಾತುಗಳಿಗೆ ಮಾಡಿದ ವೆಚ್ಚ ಹೀಗಿದೆ:

2014–15	437.67	ಕೋಟಿ
2015–16	531.60	“
2016–17	609.15	“
2017–18	468.92	“
2018–19	514.28	“
2019–20	317.11	“
2020–21	167.98	“
2021–22	101.24	“
2022–23	76.84	“ಡಿಸೆಂಬರ್ 7, 2022ರ ವರೆಗೆ

ಶಿಕ್ಷಣ, ಉದ್ಯೋಗ ಇತ್ಯಾದಿ ಸಾರ್ವಜನಿಕ ವೆಚ್ಚಗಳನ್ನು ವಿಳಂಬ ಮಾಡಬಹುದು, ಆದರೆ ಜಾಹೀರಾತುಗಳಿಗೆ ಎಂದೂ ವಿಳಂಬವಿಲ್ಲ, ಈ ಸರಕಾರ ಎಲ್ಲವನ್ನೂ ಫೋಟೋಗಳ ಬಲಿಪೀಠದಲ್ಲಿ ಇಡುತ್ತದೆ ಎಂದು ಸೀತಾರಾಂ ಯೆಚುರಿ ಈ ಕುರಿತು ಟಿಪ್ಪಣಿ ಮಾಡಿದ್ದಾರೆ.

ಆದರೆ ಪ್ರಧಾನಿಗಳು ಇದು ಶಾರ್ಟ್‌ಕಟ್ ರಾಜಕೀಯದ ಭಾಗ ಎಂದು ಖಂಡಿತಾ ಭಾವಿಸಿರಲಿಕ್ಕಿಲ್ಲ.

ಸಂವಾದ

..........ಪುಟ 10 ರಿಂದ

ಅಂತೀರಾ?

ಇಂದು ಅದಕ್ಕೂ ಅವಕಾಶ ಇದೇರಿ. ಆದರೆ ದುಬ್ಬಟ್ಟು ಹಣ ಕೊಡ್ಬೇಕು ನೋಡ್ರಿ. ಆಯ್ಯೋ, ಇದು ತುಂಬಾ ಅನ್ಯಾಯ ಅಲ್ವಾ ಅಂತ ನಿಮ್ಮಷ್ಟಕ್ಕೆ ನೀವೇ ಗೊಣಗಿ ಕೊಳ್ಬೇಕಷ್ಟೆ.

ಈಗೇನೋ ಟೋಲ್ ಫ್ಲಾಜಾ ಇದೆ. ಫಾಸ್ಟ್ಯಾಗ್ ಇದೆ. ಫಾಸ್ಟ್ಯಾಗ್ ಬೇಡ ಅಂದ್ರೆ ದುಪ್ಪಟ್ಟು ಹಣ ಕೊಟ್ಟು ಓಡಾಡಬಹುದು. ಮುಂದೆ ಇವ್ಯಾವುದೂ ಇರೋದಿಲ್ಲ ನೋಡ್ರಿ. ರಸ್ತೆ ಬಳಕೆ ಮಾಡಿಕೊಂಡಿದ್ದಕ್ಕೆ ಶುಲ್ಕದ ಹಣವನ್ನು ನಮ್ಮ ಬ್ಯಾಂಕ್ ಖಾತೆಯಿಂದಲೇ ತಗೋತಾರೆ ನೋಡ್ರಿ.

ಅದೇನಪ್ಪ ಅಂದ್ರೆ, ಶುಲ್ಕ ಕೊಡಬೇಕಾದ ರಸ್ತೆ ಬಳಸುವ ಎಲ್ಲಾ ವಾಹನಗಳಲ್ಲಿ ಜಿಪಿಎಸ್ ಉಪಕರಣ ಅಳವಡಿಸಿಕೊಳ್ಳಬೇಕ್ರಿ. ಸರ್ಕಾರದ ಬಳಿ ಮತ್ತೊಂದು ತಂತ್ರಜ್ಞಾನ ಅಳವಡಿಸೋ ಬಗ್ಗೆ ಚಿಂತನೆ ಮಾಡ್ತಿದೆಯಂತೆ ರೀ. ಅದು ವಾಹನದ ನಂಬರ್ ಪ್ಲೇಟ್ ಅನ್ನು ಕಂಪ್ಯೂಟರೈಸ್ ಮಾಡುವ ಮೂಲಕ ಟೋಲ್ ಶುಲ್ಕ ಸಂಗ್ರಹ ಮಾಡೋ ವಿಧಾನ ಅಂತೆ ರೀ. ನಮ್ಮ ಬ್ಯಾಂಕ್ ಖಾತೆಗೆ ಲಿಂಕ್ ಮಾಡ್ಬೇಕ್ರಿ. ನಮ್ಮನ್ನು ನಮ್ಮ ಚಲನೆಯನ್ನು ಉಪಗ್ರಹ ವೃಂದ



ಗಮನಿಸುತ್ತಿರುತ್ತದೆ ನೋಡಿ.

ನಾವು ಯಾವುದಾದರೂ ಶುಲ್ಕದ ರಸ್ತೆಗೆ ಪ್ರವೇಶ ಮಾಡಿದ ತಕ್ಷಣ ಅಲ್ಲಿಂದ ಲೆಕ್ಕ ಹಾಕೋಕೆ ಶುರು ಮಡುತ್ತೆ. ನೀವು ಆ ರಸ್ತೆಯಿಂದ ಹೊರ ಬರುತ್ತಿದ್ದಂತೆ ಆ ರಸ್ತೆಯಲ್ಲಿ ಸಂಚರಿಸಿದ ದೂರದ ಲೆಕ್ಕ ಹಾಕಿ ಶುಲ್ಕದ ಹಣವನ್ನು ನಮ್ಮ ಬ್ಯಾಂಕ್ ಅಕೌಂಟಿಂದ ತಗೊಳ್ಳುತ್ತೆ ರೀ.

ಅಂದ್ರೆ ನಿಮ್ಮ ಬ್ಯಾಂಕ್ ಅಕೌಂಟಲ್ಲಿ ಹಣ ಇಟ್ಟೇ ಇರ್ಬೇಕ್ರಿ. ಅಕೌಂಟಲ್ಲಿ ಹಣ ಇಲ್ದಿದ್ರೆ ಅದನ್ನು ಬಡ್ಡಿ ಸಾಲ ಅಂತ ಮಾಡ್ತಾರೇನೊ ಇನ್ನೂ ಗೊತ್ತಿಲ್ರಿ.

ಒಟ್ಟಾರೆ ಹೇಳೋದಾದರೆ, ಟೋಲ್ ಬೂತ್ ಇರೋದಿಲ್ಲ. ಶುಲ್ಕ ಸಂಗ್ರಹ ಮಾಡೋಕೆ ಕೆಲಸಗಾರರು ಬೇಕಿಲ್ಲ. ದೇಶಾದ್ಯಂತ ಈಗಿರುವ ಲಕ್ಷಾಂತರ ಇಂತಹ ಉದ್ಯೋಗಿಗಳು ಕೆಲಸ ಕಳ್ಕೊತ್ತಾರೆ. ಎಲ್ಲವನ್ನೂ ಕಂಪ್ಯೂಟರ್ ಗಳು, ಉಪಗ್ರಹಗಳು ನಿರ್ವಹಣೆ ಮಾಡ್ತವೆ. ಹಣ ಇಲ್ದಿದ್ರೆ ರಸ್ತೆ ಮೇಲೆ ಓಡಾಡೋ ಆಗಿಲ್ಲ.

ಬಂಡವಾಳಗಾರರು ಹೆಚ್ಚೆಚ್ಚು ಲಾಭ ಬಯಸ್ತಾರೆ ವಿನಃ, ಜನರಿಗೆ ಉದ್ಯೋಗ ಕೊಡ್ಬೇಕು ಅಂತ ಅವರಿಗೆ ಅನಿಸೋದಿಲ್ರಿ. ನಮ್ಮ ಪ್ರಧಾನಿ ಮೋದಿ ಬಯಸಿದ ನಗದು ರಹಿತ ವ್ಯವಹಾರಕ್ಕೆ ಇದು ಪೂರಕವಾಗಿದೆ ಅಲ್ವೇನ್ರಿ? ಮುಕ್ತ ಆರ್ಥಿಕ ನೀತಿ, ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳ ಪರಿಣಾಮ ಅಂದ್ರೆ ಇದೇ ನೋಡ್ರಿ.

ದಾರಿಗಾಣದಾಗಿರುವ ನವ–ಉದಾರವಾದದ ಆಳ್ವಿಕೆಯಲ್ಲಿ ಜಾಗತಿಕವಾಗಿ ಹೆಚ್ಚುತ್ತಿದೆ...

ಪುಟ 13 ರಿಂದ

ಎಲ್ಲೆಡೆಯೂ ಕಾರ್ಮಿಕರ ಪರಿಸ್ಥಿತಿಯನ್ನು ದುರ್ಬಲಗೊಳಿಸುವ ಮೂರನೇ ಅಂಶವೆಂದರೆ, ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣ. ಸಾರ್ವಜನಿಕ ವಲಯದ ಉದ್ದಿಮೆಗಳ ಕಾರ್ಮಿಕರು ಖಾಸಗಿ ವಲಯದ ಉದ್ದಿಮೆಗಳ ಕಾರ್ಮಿಕರಿಗಿಂತ ಉತ್ತಮವಾಗಿ ಸಂಘಟಿತರಾಗಿರುತ್ತಾರೆ ಎಂಬುದು ಈ ಎರಡೂ ವಲಯಗಳಲ್ಲಿ ಅಸ್ತಿತ್ವದಲ್ಲಿರುವ ಸಂಘಟನೆಗಳ ವ್ಯಾಪ್ತಿಯ ಮೂಲಕ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಅಮೆರಿಕಾದ ಸಾರ್ವಜನಿಕ ವಲಯದ ಮೂರನೇ ಒಂದು ಭಾಗದಷ್ಟು ಸಂಖ್ಯೆಯ ಉದ್ಯೋಗಿಗಳು (ಶಿಕ್ಷಣ ಕ್ಷೇತ್ರವೂ ಸೇರಿದಂತೆ) ಸಂಘ ಕಟ್ಟಿಕೊಂಡಿದ್ದಾರೆ ಮತ್ತು ಖಾಸಗಿ ವಲಯದಲ್ಲಿ ಕೇವಲ ಶೇ. ಏಳರಷ್ಟು ಉದ್ಯೋಗಿಗಳು ಮಾತ್ರ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಹಾಗಾಗಿ, ಖಾಸಗೀಕರಣವು ದುಡಿಯುವ ವರ್ಗದ ಕಾರ್ಮಿಕರ ಹೋರಾಟದ ಕೆಚ್ಚನ್ನು ತಗ್ಗಿಸುವ ಪರಿಣಾಮ ಹೊಂದಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಪರಿಸ್ಥಿತಿಯು ಒಟ್ಟಾರೆಯಾಗಿ ಕಾರ್ಮಿಕರ ಹುಮ್ಮಸ್ಸನ್ನು ತಗ್ಗಿಸುವಲ್ಲಿ ಪರಿಣಮಿಸುತ್ತದೆ.

ಈ ಕಾರಣದಿಂದಾಗಿಯೇ ಇನ್ನೂ ಗಣನೀಯ ಪ್ರಮಾಣದ ಸಾರ್ವಜನಿಕ ವಲಯವನ್ನು ಹೊಂದಿರುವ ಫ್ರಾನ್ಸ್ ದೇಶವು ಕಾರ್ಮಿಕರ ದಿಟ್ಟ ಹೋರಾಟಗಳಿಗೆ ಸಾಕ್ಷಿಯಾಗುತ್ತಲೇ ಇದೆ. ವಿಖ್ಯಾತ ಹೋರಾಟಗಳ ಇತಿಹಾಸದೊಂದಿಗೆ ಗಣನೀಯ ಪ್ರಮಾಣದ ಸಾರ್ವಜನಿಕ ವಲಯವನ್ನು ಹೊಂದಿದ ಭಾರತದಲ್ಲಿ ಮೆಲ್ಲ ಮೆಲ್ಲಗೆ ಸಾಗುತ್ತಿರುವ ಬೃಹತ್ ಖಾಸಗೀಕರಣದಿಂದಾಗಿ ಕಾರ್ಮಿಕರ ಹೋರಾಟಗಳು ಹೆಚ್ಚು ಕಷ್ಟಕರವಾಗಿವೆ. ಹಾಗಾಗಿ, ಟ್ರೇಡ್ ಯೂನಿಯನ್‌ಗಳನ್ನು ಸಂಘಟಿಸುವ ಕಾರ್ಯವು ಸಣ್ಣ–ಕೈಗಾರಿಕಾ ವಲಯದತ್ತ ತಿರುಗಿದೆ.

ಈ ಸನ್ನಿವೇಶದಲ್ಲಿ ಗಮನ ಸೆಳೆಯುವ ಅಂಶವು ಯಾವುದೆಂದರೆ, ಬಂಡವಾಳದ ವಿರುದ್ಧದ ಹೋರಾಟದಲ್ಲಿ ದುಡಿಯುವ ವರ್ಗವನ್ನು ನವ–ಉದಾರವಾದವು ದುರ್ಬಲಗೊಳಿಸುತ್ತದೆ ಎಂಬುದಲ್ಲ, ಅದರ ಹೊರತಾಗಿಯೂ ಕಾರ್ಮಿಕರ ಉತ್ಸಾಹ, ಧೈರ್ಯ, ಸಾಹಸಗಳು ಹೆಚ್ಚುತ್ತಿರುವ ವಿದ್ಯಮಾನಕ್ಕೆ ನವ–ಉದಾರವಾದವು ಸಾಕ್ಷಿಯಾಗಿದೆ ಎಂಬುದು. ಬ್ರಿಟನ್‌ನಲ್ಲಿ ಹಿಂದಿನ ಬೇಸಿಗೆಯಲ್ಲಿ ಕಂಡ ಇತ್ತೀಚಿನ ದಶಕಗಳಲ್ಲೇ ಅತಿದೊಡ್ಡ ಮುಷ್ಕರವೂ ಸೇರಿದಂತೆ ಹಲವಾರು ಮುಷ್ಕರಗಳನ್ನು ರೈಲ್ವೆ ಕಾರ್ಮಿಕರು ಈ ವರ್ಷದಲ್ಲಿ ನಡೆಸಿದ್ದಾರೆ. ಪ್ರಸ್ತುತದಲ್ಲಿ, ರೈಲ್ವೆ ಕಾರ್ಮಿಕರು ತಮ್ಮ ಉದ್ಯೋಗದಾತರು ನೀಡಿದ ವೇತನ ಪ್ರಸ್ತಾಪವನ್ನು ಕ್ಷುಲ್ಲಕವೆಂದು ತಿರಸ್ಕರಿಸಿದ್ದಾರೆ. ಮತ್ತು ಡಿಸೆಂಬರ್ ಮತ್ತು ಜನವರಿಯಲ್ಲಿ ಮುಂದಿನ ಮುಷ್ಕರ ಹೂಡುವ ಬೆದರಿಕೆ ಹಾಕಿದ್ದಾರೆ. ರೈಲ್ವೆ ಕಾರ್ಮಿಕರು ಏಕಾಂಗಿಯಲ್ಲ. ಅಂಚೆ ನೌಕರರು, ದಾದಿಯರು, ಆಂಬ್ಯುಲೆನ್ಸ್ ಕಾರ್ಮಿಕರು ಮತ್ತು ಇತರರು ಮುಷ್ಕರದಲ್ಲಿ ತೊಡಗಿದ್ದಾರೆ ಅಥವಾ ಮುಷ್ಕರ ಹೂಡಲಿದ್ದಾರೆ. ಈ ಸಂಬಂಧವಾಗಿ, ಆಡಳಿತಾರೂಢ ಕನ್ಸರ್ವೇಟಿವ್ ಪಕ್ಷದ ಅಧ್ಯಕ್ಷರು "ಅಗತ್ಯ ಸೇವೆಗಳನ್ನು" ಒದಗಿಸಲು ಸೇನೆಯನ್ನು ನಿಯೋಜಿಸುವ ಮಾತನಾಡಿದ್ದಾರೆ. ಜರ್ಮನಿಯಲ್ಲಿ, ಬಂದರು ಕಾರ್ಮಿಕರು, ಸಾರ್ವಜನಿಕ ಸಾರಿಗೆ ಕಾರ್ಮಿಕರು, ವಾಯುಯಾನ ಭದ್ರತಾ ಕಾರ್ಮಿಕರು, ಕಟ್ಟಡ ಕಾರ್ಮಿಕರು ಮತ್ತು ರೈಲ್ವೆ ಕಾರ್ಮಿಕರು ಎಲ್ಲರೂ ಮುಷ್ಕರಗಳಲ್ಲಿ ತೊಡಗಿದ್ದಾರೆ. ಅಥವಾ ಶೀಘ್ರದಲ್ಲೇ ಮುಷ್ಕರದಲ್ಲಿ ತೊಡಗಲಿದ್ದಾರೆ. ಇತರ ಯುರೋಪಿಯನ್ ದೇಶಗಳಲ್ಲೂ ಇದೇ ಪರಿಸ್ಥಿತಿ ಇದೆ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಇಲ್ಲಿಯವರೆಗೂ ಕಾರ್ಮಿಕರ ತುಲನಾತ್ಮಕ ಜಡತೆಯು ನವ–ಉದಾರವಾದಿ ಯುಗದ ಎದ್ದುಕಾಣುವ ಲಕ್ಷಣವಾಗಿತ್ತು. ಅದು ಕೊನೆಗೊಳ್ಳುತ್ತಿದೆ.

ಕಾರ್ಮಿಕರ ರಣೋತ್ಸಾಹ ಹೆಚ್ಚುತ್ತಿರುವ ಬಗ್ಗೆ ಪಶ್ಚಿಮ ದೇಶಗಳ ಪತ್ರಿಕೆಗಳಲ್ಲಿ ಕಂಡುಬರುವ ಮಾದರಿ ವಿವರಣೆ ಏನೆಂದರೆ, ಹಣದುಬ್ಬರವೇ ಈ ಎಲ್ಲದಕ್ಕೂ ಕಾರಣ ಎಂಬುದು. ಉಕ್ರೇನ್ ಯುದ್ಧ ಅಥವಾ ಪೂರೈಕೆ ಸರಪಳಿಗಳಲ್ಲಿ ಕೋವಿಡ್–ಪ್ರೇರಿತ ಅಡಚಣೆಗಳಂತಹ ಅಂಶಗಳಿಂದ ಹಣದುಬ್ಬರ ಉಂಟಾಗಿದೆ ಎಂದು ನಂಬಲಾಗಿದೆ. ಈ ಅಂಶಗಳು ನವ–ಉದಾರವಾದಿ ಬಂಡವಾಳಶಾಹಿಯ ಕಾರ್ಯಾಚರಣೆಗೆ ಸಂಪೂರ್ಣವಾಗಿ ಹೊರಗಿನವು ಎಂದು ಭಾವಿಸಲಾಗಿದೆ.

ಈ ವಿವರಣೆಯು ಎರಡು ಸ್ಪಷ್ಟಕಾರಣಗಳಿಂದಾಗಿ ಅಸಮರ್ಪಕವಾಗಿದೆ. ಮೊದಲನೆಯದು, ಕೋವಿಡ್ ಪ್ರಸಂಗವಾಗಲಿ ಅಥವಾ ಉಕ್ರೇನ್ ಯುದ್ಧವಾಗಲಿ ನವ–ಉದಾರವಾದಿ ಬಂಡವಾಳಶಾಹಿಯ ಕಾರ್ಯಾಚರಣೆಗೆ ಹೊರಗಿನದಲ್ಲ ಎಂಬುದು ಉಕ್ರೇನ್ ಯುದ್ಧದ ಸಂದರ್ಭದಲ್ಲಿ ಸ್ಪಷ್ಟವಾಗಿದೆ. ಉಕ್ರೇನ್ ಯುದ್ಧದ ಸೃಷ್ಟಿಯು ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರಾಬಲ್ಯವನ್ನು ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಅಡಕವಾಗಿದೆ. ಅದನ್ನು ನವ–ಉದಾರವಾದಿ ಬಂಡವಾಳಶಾಹಿಯೂ ಸಮರ್ಥಿಸುತ್ತದೆ. ಆದರೆ, ಕೋವಿಡ್ ಪ್ರಸಂಗವೂ ಸಹ ನವ–ಉದಾರವಾದಿ ಬಂಡವಾಳಶಾಹಿಗೆ ಹೊರಗಿನದಲ್ಲ. ಲಸಿಕೆ ತಂತ್ರಜ್ಞಾನದ ಮೇಲೆ ಹೊಂದಿದ ಏಕಸ್ವಾಮ್ಯ ನಿಯಂತ್ರಣ ಮತ್ತು ಲಸಿಕೆ ತಂತ್ರಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳಲು ನಿರಾಕರಿಸಿರುವುದು ಸಾಂಕ್ರಾಮಿಕದ ವ್ಯಾಪಕತೆಗೆ ಮತ್ತು ತೀವ್ರತೆಗೆ ಕಾರಣವಾಗಿದೆ. ಅದೂ ಅಲ್ಲದೆ, ಲ್ಯಾನ್ಸೆಟ್ ಎಂಬ ಪತ್ರಿಕೆಯು ನೇಮಿಸಿದ ಸಮಿತಿಯ ವರದಿಯ ಪ್ರಕಾರ, ಕೋವಿಡ್ ಮೂಲವು ಸಾಮ್ರಾಜ್ಯಶಾಹಿಯ ಪರವಾಗಿ ಮಿಲಿಟರಿ–ಸಂಬಂಧಿತ ಸಂಶೋಧನಾ ನಿರತ ಪ್ರಯೋಗಾಲಯದಲ್ಲಿ ನೆಲೆಸಿದೆ ಮತ್ತು ವೈರಸ್ ಅಲ್ಲಿಂದ ಆಕಸ್ಮಿಕವಾಗಿ ಹರಡಿದೆ.

ಪ್ರಸ್ತುತ ಹಣದುಬ್ಬರವು ನವ–ಉದಾರವಾದಿ ಬಂಡವಾಳಶಾಹಿಗೆ ಹೊರಗಿನದಲ್ಲ ಎಂಬುದಕ್ಕೆ ಇರುವ ಎರಡನೆಯ ಕಾರಣವು ಹೀಗಿದೆ. ಬಂಡವಾಳಶಾಹಿ ಬಿಕ್ಕಟ್ಟುಗಳು ಹೊಂದಿರುವ ವಿಶಿಷ್ಟ ಗುಣಲಕ್ಷಣವೆಂದರೆ, ಅವುಗಳನ್ನು ಆಗಾಗ ಪರಿಹರಿಸುವ ಪ್ರಯತ್ನಗಳೇ ವಿಭಿನ್ನರೂಪದ ಬಿಕ್ಕಟ್ಟುಗಳಿಗೆ ಕಾರಣವಾಗುತ್ತವೆ. ನವ–ಉದಾರವಾದಿ ಬಂಡವಾಳಶಾಹಿಯು ಒಟ್ಟಾರೆಯಾಗಿ ಜಾಗತಿಕ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮತ್ತು ಯಾವುದೇ ಒಂದು ನಿರ್ದಿಷ್ಟ ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಮಿಗುತಾಯದ ಪಾಲು ಹೆಚ್ಚುವಂತೆ ನೋಡಿಕೊಂಡಿತು. ಆದರೆ ಮಿಗುತಾಯದ ಈ ಹೆಚ್ಚಳದಿಂದಾಗಿಯೇ ಸೃಷ್ಟಿಯಾದ ಒಂದು ಅತಿ–ಉತ್ಪಾದನಾ ಪ್ರವೃತ್ತಿಯು ಬಿಕ್ಕಟ್ಟನ್ನು ಉಂಟುಮಾಡಿತು. ಬಂಡವಾಳಶಾಹಿ ದೇಶಗಳಲ್ಲಿ ಪ್ರಮುಖವಾಗಿರುವ ಅಮೆರಿಕಾ, ತನ್ನ ಬಡ್ಡಿ ದರಗಳನ್ನು ಶೂನ್ಯಕ್ಕೆ ಹತ್ತಿರದಲ್ಲಿರುವ ಮಟ್ಟದಲ್ಲಿ ಇರಿಸುವ ಮೂಲಕ ಮತ್ತು "ಸುಲಭ ಹಣ ಲಭ್ಯತೆ"ಯ (quantitative easing) ಕ್ರಮವನ್ನು ಪಾಲಿಸುವ ಮೂಲಕ, ಬಿಕ್ಕಟ್ಟನ್ನು ನಿವಾರಿಸಲು ಅನೇಕ ವರ್ಷಗಳ ಕಾಲ ಪ್ರಯತ್ನಿಸಿತು.

ಬಂಡವಾಳಗಾರರು ಯಾವುದೇ ಕ್ರಮವನ್ನು ಕೈಗೊಳ್ಳುವ ಮೊದಲು ಅದಕ್ಕೆ ಸಂಬಂಧಿಸಿದ ಅಪಾಯಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸುತ್ತಾರೆ. ಅತಿಕಡಿಮೆ ಬಡ್ಡಿ ದರಗಳಲ್ಲಿ ಅಗಾಧ ಪ್ರಮಾಣದ ಹಣ ಲಭ್ಯವಾಗುವ ಪರಿಸ್ಥಿತಿಯು ಕಾರ್ಪೊರೇಟ್‌ಗಳಿಗೆ ತಮ್ಮ ಲಾಭದ ಅಂತರವನ್ನು ಹೆಚ್ಚಿಸುವ ಸಂಬಂಧವಾಗಿ ಎದುರಾಗುವ ಅಪಾಯಗಳನ್ನು ಬಹುಮಟ್ಟಿಗೆ ತಗ್ಗಿಸುತ್ತದೆ. ಈ ಕಾರಣದಿಂದಾಗಿಯೇ ಹಲವಾರು ಅಮೆರಿಕನ್ ಕಾರ್ಪೊರೇಷನ್‌ಗಳು ತಮಗೆ ಒದಗಿದ ಮೊದಲ ಅವಕಾಶದಲ್ಲೇ ತಮ್ಮ ಲಾಭದ ಅಂತರವನ್ನು ಹೆಚ್ಚಿಸಿಕೊಂಡವು, ಅದು ಹಣದುಬ್ಬರವನ್ನು ತ್ವರಿತಗೊಳಿಸಿತು. ಹಣದುಬ್ಬರವನ್ನು ಉಲ್ಬಣಗೊಳಿಸುವಲ್ಲಿ ಇತರ ಅಂಶಗಳು ನಿಸ್ಸಂದೇಹವಾಗಿಯೂ ಕೆಲಸ ಮಾಡಿವೆ. ಆದರೆ, ಪ್ರಸ್ತುತ ಹಣದುಬ್ಬರದ ಈ ಮೂಲ ಕಾರಣವನ್ನು ಮರೆಯುವಂತಿಲ್ಲ.

ಹಣದುಬ್ಬರದ ಮಾರ್ಗವಾಗಿ ನವ–ಉದಾರವಾದವು ತಮ್ಮ ಜೀವನ ಮಟ್ಟದ ಮೇಲೆ ಎಸಗುತ್ತಿರುವ ನೇರ ಹಲ್ಲೆಯನ್ನು ಎಲ್ಲೆಡೆಯಲ್ಲೂ ಕಾರ್ಮಿಕರು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ. ಈ ಹಲ್ಲೆಯು, ದಾರಿಕಾಣದಂತಾಗಿರುವ ನವ–ಉದಾರವಾದದ ಪರಿಸ್ಥಿತಿಯ ಸಂಕೇತವಾಗಿದೆ.

ಡಿಸೆಂಬರ್ 2022 ಯು.ಕೆ. ಯಲ್ಲಿ ಸರಣಿ ಕಾರ್ಮಿಕರ ಮುಷ್ಕರಗಳ ಚಾರಿತ್ರಿಕ ತಿಂಗಳಾಗಲಿದೆ. 27 ಲಕ್ಷಕ್ಕೂ ಹೆಚ್ಚು ವಿವಿಧ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಸದಸ್ಯರಾಗಿರುವ ಯೂನಿಯನುಗಳು ಸಂಯೋಜಿತ ಮುಷ್ಕರಗಳ ಸರಣಿಯನ್ನೇ ಘೋಷಿಸಿವೆ. ರೈಲು, ಬಂದರು, ಪೋಸ್ಟ್ ಸೇವಾ ಕಾರ್ಮಿಕರು, ಶಾಲಾ ಕಾಲೇಜು ವಿ.ವಿಗಳ ಅಧ್ಯಾಪಕರು, ನರ್ಸುಗಳ ಮುಷ್ಕರಗಳ ಸರಣಿ ಈ ತಿಂಗಳಲ್ಲಿ ನಡೆಯಲಿದೆ. 1980ರ ದಶಕದಲ್ಲಿ ಥ್ಯಾಚರ್ ಯೂನಿಯನುಗಳನ್ನು ಮಣಿಸಿ ಮುಷ್ಕರಗಳು ಅಪರಾಧಗಳೋ ದುರ್ವರ್ತನೆಗಳೋ ಎಂಬಂತೆ ಮಾಡಿದ್ದ ಪರಿಸ್ಥಿತಿ ತೀವ್ರ ಬದಲಾವಣೆ ಕಂಡು ಬರುತ್ತಿದೆ. ಜನಾಂಗೀಯ, ವಲಸೆಗಾರರ ಬೇದಭಾವ ತಾರತಮ್ಯ ಹುಟ್ಟು ಹಾಕಿ ಕಾರ್ಮಿಕರ ಐಕ್ಯತೆಯನ್ನು ಮುರಿದು, ನವ-ಉದಾರವಾದಿ 'ಮಿತವ್ಯಯ'ದ ಹೆಸರಲ್ಲಿ ಕಲ್ಯಾಣ ಕ್ರಮಗಳಲ್ಲಿ ಕಡಿತ ಮಾಡುವ ಯು.ಕೆ ಸರಕಾರದ ಮತ್ತು ಪಕ್ಷಗಳ ಬಲಪಂಥೀಯ ರಾಜಕಾರಣಕ್ಕೆ ಕಾರ್ಮಿಕರ ಸಂಯೋಜಿತ ಮುಷ್ಕರಗಳ ಸರಣಿ ಸವಾಲು ಹಾಕುವ ಸಾಧ್ಯತೆ ಹೆಚ್ಚಿದೆ.



ಸುನಕ್ ಗೆ 27 ಲಕ್ಷ ಯು.ಕೆ ಕಾರ್ಮಿಕರ ಸರಣಿ ಮುಷ್ಕರಗಳ ಸವಾಲು

ಡಿಸೆಂಬರ್ 2022 ಯು.ಕೆ.ಯಲ್ಲಿ ಸರಣಿ ಕಾರ್ಮಿಕರ ಮುಷ್ಕರಗಳ ಚಾರಿತ್ರಿಕ ತಿಂಗಳಾಗಲಿದೆ 27 ಲಕ್ಷಕ್ಕೂ ಹೆಚ್ಚು ವಿವಿಧ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಸದಸ್ಯರಾಗಿರುವ ಯೂನಿಯನುಗಳು ಸಂಯೋಜಿತ ಮುಷ್ಕರಗಳ ಸರಣಿಯನ್ನೇ ಘೋಷಿಸಿವೆ. ರೈಲು, ಬಂದರು, ಪೋಸ್ಟ್ ಸೇವಾ ಕಾರ್ಮಿಕರು, ಶಾಲಾ ಕಾಲೇಜು ವಿ.ವಿಗಳ ಅಧ್ಯಾಪಕರು, ನರ್ಸುಗಳ ಮುಷ್ಕರಗಳ ಸರಣಿ ಈ ತಿಂಗಳಲ್ಲಿ ನಡೆಯಲಿದೆ. ಇಂತಹ ಮುಷ್ಕರಗಳ ಆಸ್ಫೋಟ ಹಲವು ದಶಕಗಳ (ಬಹುಶಃ 1980ರ ದಶಕದ) ನಂತರ ನಡೆಯುತ್ತಿದೆ. ಇದಕ್ಕೆ ಕಾರಣವೂ ಚಾರಿತ್ರಿಕವೇ. ಆದರೆ ಕಳೆದ 200 ವರ್ಷಗಳಲ್ಲಿ ಮೊದಲ ಬಾರಿಗೆ 2008 ನಂತರದ ಈ ವರೆಗಿನ ಅವಧಿಯಲ್ಲಿ ಯಾವುದೇ ಕಾರ್ಮಿಕರ ಆದಾಯ ಏರಿಕೆ ಆಗಿಲ್ಲ. ಬೆಲೆಏರಿಕೆ ಆದಾಯವನ್ನು ತಿಂದು ಹಾಕುತ್ತಿದೆ. ಕಳೆದ ನಾಲ್ಕು ದಶಕಗಳಲ್ಲೇ ಜೀವನಾವಶ್ಯಕ ವಸ್ತುಗಳ ಗರಿಷ್ಠ (ಶೇ.11) ಬೆಲೆ ಏರಿಕೆ ಮತ್ತು ಇಂಧನ ಬೆಲೆಗಳಲ್ಲಿ ಶೇ.80ರಷ್ಟು ಭಾರೀ ಏರಿಕೆ ಇದಕ್ಕೆ ಕಾರಣ. ಈ ಬೆಲೆಏರಿಕೆ ಭರಿಸುವ ವೇತನ ಏರಿಕೆ ಕೊಡಬೇಕೆಂಬುದು ಕಾರ್ಮಿಕರ ಪ್ರಧಾನ ಹಕ್ಕೊತ್ತಾಯ.

ಜಗದ ಸುತ್ತ

ವಸಂತರಾಜ ಎನ್.ಕೆ.

ಕ್ರಿಸ್ಮಸ್, ಹೊಸ ವರ್ಷದ ಅವಧಿ ಎಂದು ಕರೆಯಲಾಗುವ ಮುಂದಿನ 2-3 ವಾರಗಳಲ್ಲಿ ರೈಲು ಕಾರ್ಮಿಕರು 48 ಗಂಟೆಗಳ ನಾಲ್ಕು ಸರಣಿ ಮುಷ್ಕರಗಳಿಗೆ (ಡಿಸೆಂಬರ್ 13-14, 16-17, ಜನವರಿ 3-4, 6-7) ಕರೆ ಕೊಟ್ಟಿದ್ದಾರೆ. ನೆಟ್ವರ್ಕ್ ರೈಲ್ ಮತ್ತು 14 ಇತರ ರೈಲು ಕಂಪನಿಗಳ ಕಾರ್ಮಿಕರ ಯೂನಿಯನುಗಳು ಮೊದಲ ಸುತ್ತಿನ ಮುಷ್ಕರವನ್ನು ಡಿಸೆಂಬರ್ 13-14ರಂದು ನಡೆಸಿದ್ದಾರೆ. ರೈಲು, ಜಲಸಾರಿಗೆ ಮತ್ತು ಇತರ ಸಾರಿಗೆ ಕಾರ್ಮಿಕರ (Rail, Maritime and Transport - RMT) ಯೂನಿಯನು ಈ ಮುಷ್ಕರದಲ್ಲಿ ಸೇರಿದ್ದಾರೆ. ಈಗಾಗಲೇ CWU (Communication Workers' Union) ಗೆ ಸೇರಿದ ರಾಯಲ್ ಮೈಲ್ (ಪೋಸ್ಟ್) ಕಾರ್ಮಿಕರು ಕ್ರಿಸ್ಮಸ್ ವರೆಗೂ ಮುಷ್ಕರ ಮಾಡುತ್ತಿದ್ದಾರೆ. 10 ಸಾವಿರ ಉದ್ಯೋಗಗಳನ್ನು ಕಡಿತದ ವಿರುದ್ಧವೂ ಅವರು ಮುಷ್ಕರ ಹೂಡಿದ್ದಾರೆ. ರಾಯಲ್ ಮೈಲ್ ಪೋಸ್ಟಲ್ ವ್ಯವಹಾರದ ಅಜೆಂಡಾ ವಿಫಲವಾಗಿದ್ದು ಕಾರ್ಮಿಕರನ್ನು ಅದರ ಬಲಿಪಶು ಮಾಡಲಾಗುತ್ತಿದೆ ಎಂದು ಯೂನಿಯನ್ ಆಪಾದಿಸಿದೆ. ರಾಯಲ್ ಮೈಲ್ ನ್ನು ಸಾರ್ವಜನಿಕ ಸೇವೆಯಾಗಿ ಉಳಿಸಿಕೊಳ್ಳಲೂ ನಮ್ಮ ಹೋರಾಟ ಎಂದೂ ಯೂನಿಯನ್ ಹೇಳಿದೆ. ಕಳೆದ 40 ವರ್ಷಗಳಲ್ಲೇ ಮೊದಲ ಬಾರಿಗೆ ಸ್ಕಾಟ್ಲೆಂಡ್ ಶಾಲಾಶಿಕ್ಷಕರು ರಾಷ್ಟ್ರೀಯ ಮುಷ್ಕರಕ್ಕೆ ಮುಂದಾಗಿದ್ದಾರೆ. ಶೇ.11 ಬೆಲೆಏರಿಕೆ ಆಗುತ್ತಿರುವಾಗ ಅವರಿಗೆ ಯೋಜಿಸಲಾದ ಶೇ.5 ವೇತನ ಏರಿಕೆ 'ಅವಮಾನಕರ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯು.ಕೆ. ಯ ಅತಿ ದೊಡ್ಡ ನರ್ಸ್ ಗಳ ಯೂನಿಯನ್ ಆದ RCN (Royal College of Nursing) ಯೂನಿಯನ್ ಡಿಸೆಂಬರ್ 15 ರಂದು ಮುಷ್ಕರಕ್ಕೆ ಕರೆ ಕೊಟ್ಟಿದೆ. ದೇಶದಾದ್ಯಂತ ನರ್ಸ್ ಗಳು ಪ್ರತಿಭಟಿಸುತ್ತಿದ್ದಾರೆ. ರಾಷ್ಟ್ರೀಯ ಆರೋಗ್ಯ ಸೇವೆಯ (NHS) 76 ಆಸ್ಪತ್ರೆಗಳು ಮತ್ತು ಕ್ಲಿನಿಕ್ ಗಳ 1 ಲಕ್ಷಕ್ಕೂ ಹೆಚ್ಚು ನರ್ಸ್‌ಗಳು ಮುಷ್ಕರ ಹೂಡಿದ್ದಾರೆ. ಸ್ಕಾಟ್ಲೆಂಡಿನ ನರ್ಸ್‌ಗಳು ಸಹ ಮುಷ್ಕರದ ಹಾದಿಯಲ್ಲಿದ್ದಾರೆ. ನರ್ಸ್ ಗಳು ಬೆಲೆ ಏರಿಕೆಗಿಂತ ಶೇ.5 ಹೆಚ್ಚು ವೇತನ ಏರಿಕೆ ಕೇಳಿದ್ದು ಸರಕಾರ ಅದನ್ನು ತಿರಸ್ಕರಿಸಿದೆ. ಅವರ ವೇತನ ದೀರ್ಘ ಅವಧಿಯಲ್ಲಿ ಸ್ಥಗಿತಗೊಂಡಿದೆ. ಕೊವಿಡ್ ಮಹಾರೋಗದ ಅವಧಿಯಲ್ಲಿ ತಮ್ಮ ಜೀವದ ಹಂಗು ತೊರೆದು ಜೀವಗಳನ್ನು ರಕ್ಷಿಸಿದ ನರ್ಸ್ ಗಳಿಗೆ ಸೂಕ್ತ ಪರಿಹಾರ ಸಿಕ್ಕಿಲ್ಲ ಇದರಿಂದಾಗಿ ಹೆಚ್ಚೆಚ್ಚು ನರ್ಸ್ ಗಳು NHS ನ್ನು ಬಿಡುತ್ತಿದ್ದಾರೆ. ಬ್ರೆಕ್ಸಿಟ್ ನಿಂದಾಗಿ ಯುರೋಪಿನ ಇತರ ದೇಶಗಳ ನರ್ಸ್ ಗಳು ಕೆಲಸ ಬಿಡುತ್ತಿದ್ದಾರೆ. ಖಾಲಿಯಾದ ಹುದ್ದೆಗಳು ಭರ್ತಿಯಾಗಿಲ್ಲ. ಇದರಿಂದಾಗಿ ಈಗಿರುವ ನರ್ಸ್ ಗಳ ಕೆಲಸದ ಹೊರೆ ಅಸಹನೀಯವಾಗಿ ಹೆಚ್ಚಿದೆಯೆಂದು ನರ್ಸ್ ಗಳು ಆಕ್ರೋಶಗೊಂಡಿದ್ದಾರೆ. NHS ವ್ಯವಸ್ಥೆಯೇ ಕುಸಿದು ಬೀಳುವ ಹಂತದಲ್ಲಿದೆ. NHS ನ್ನು ಖಾಸಗೀಕರಿಸಲು ಖಾಸಗಿ ಆಸ್ಪತ್ರೆಗಳ ಲಾಬಿ ಒತ್ತಡದಿಂದಾಗಿ ನರ್ಸ್‌ಗಳನ್ನು ಬೇಕೆಂತಲೇ ಕೆಟ್ಟಾಗಿ ನಡೆಸಿಕೊಳ್ಳಲಾಗುತ್ತಿದೆ ಎಂದು ಯೂನಿಯನುಗಳು ಆಪಾದಿಸಿವೆ. ಹಿಂದೆ ಉತ್ತಮ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯೆಂದು ಪ್ರಸಿದ್ಧವಾಗಿದ್ದ NHS ನ್ನು ಉಳಿಸಿಕೊಳ್ಳಲು ಸಹ ಹೋರಾಟ ನಡೆಯುತ್ತಿದೆಯೆಂದು ಯೂನಿಯನುಗಳು ಹೇಳುತ್ತಿವೆ.

ಅಂಬುಲೆನ್ಸ್, ವಿಮಾನ ನಿಲ್ದಾಣ, ಗಡಿಪೋಸ್ಟ್, ರಾಷ್ಟ್ರೀಯ ಹೆದ್ದಾರಿ, ಬಸ್ ಡ್ರೈವರ್, ಅಗ್ನಿಶಾಮಕ ದಳ, ಹವಾಮಾನ ಕಚೇರಿ, ಡ್ರೈವಿಂಗ್ ನಿರೀಕ್ಷಣೆ ಮುಂತಾದ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು, ಸಿಬ್ಬಂದಿ ಹಾಗೂ ಸರಕಾರಿ ನೌಕರರೂ ಸಹ ಮುಷ್ಕರಕ್ಕ ಕರೆ ನೀಡುತ್ತಿದ್ದಾರೆ.

ಈ ನಡುವೆ ಯು.ಕೆ ಆರ್ಥಿಕ ಹಿಂಜರಿತವನ್ನು ಕಾಣುತ್ತಿದೆ. ಈ ವರ್ಷ ಆರ್ಥಿಕ ಶೇ.2 ರಷ್ಟು ಕುಸಿಯಲಿದೆ. 2024ರ ವರೆಗೂ ಆರ್ಥಿಕವು ಕೊವಿಡ್-ಪೂರ್ವ ಸ್ಥಿತಿಗೆ ಮರಳುವ ಲಕ್ಷಣಗಳು ಇಲ್ಲ. ಅಧಿಕೃತ ಅಂದಾಜುಗಳ ಪ್ರಕಾರವೇ ನಿಜಬೆಲೆಗಳಲ್ಲಿ ಕುಟುಂಬದ ಆಧಾಯ ಶೇ.7ರಷ್ಟು ಕುಸಿದು 2013-14 ರ ಮಟ್ಟಕ್ಕೆ ತಲುಪಿದೆ. 5 ಲಕ್ಷ ಜನ ಉದ್ಯೋಗ ಕಳೆದುಕೊಳ್ಳಲಿದ್ದಾರೆ.

ಯು.ಕೆ ಕಾರ್ಮಿಕರು ರಿಷಿ ಸುನಕ್ ಸರಕಾರಕ್ಕೆ ಈ ಸರಣಿ ಮುಷ್ಕರಗಳ ಮೂಲಕ ಎಚ್ಚರಿಕೆ ನೀಡುತ್ತಿದ್ದರೂ, ಪ್ರಧಾನಿ 'ಆರ್ಥಿಕ ಸಂಕಟ'ಗಳನ್ನು ಮುಂದೆ ಮಾಡಿ ಕಾರ್ಮಿಕರ ವೇತನ ಏರಿಕೆಯ ಹಕ್ಕೊತ್ತಾಯಗಳನ್ನು ಈಡೇರಿಸಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಕೇಂದ್ರೀಯ ಬ್ಯಾಂಕ್ ಆದ ಬ್ಯಾಂಕ್ ಆಫ್ ಇಂಗ್ಲೆಂಡ್ ವೇತನೇರಿಕೆಯನ್ನು ವಿರೋಧಿಸಿದ್ದು ಇದು 'ವೇತನ-ಬೆಲೆ ಸುರುಳಿ'ಗೆ ಕಾರಣವಾಗಲಿದೆಯೆಂದು ಎಚ್ಚರಿಸಿದೆ. ಆದರೆ 'ಆರ್ಥಿಕ ಸಂಕಟ'ಗಳು ಇದ್ದಾಗ್ಯೂ ಹಿಂದಿನ ಲಿಝ್ ಟ್ರಸ್ ಸರಕಾರ ಭಾರೀ ಶ್ರೀಮಂತರಿಗೆ ಭಾರೀ ತೆರಿಗೆ ಕಡಿತ ಘೋಷಿಸಿತ್ತು. ಅಲ್ಲದೆ ರಕ್ಷಣಾ ವೆಚ್ಚವನ್ನು ಶೇ.2.2ರಿಂದ 3.0 ಕ್ಕೆ ಏರಿಸಿತ್ತು. ಈ ನೀತಿಯ ಪ್ರಕಾರ ವಾರ್ಷಿಕ ರಕ್ಷಣಾ ವೆಚ್ಚವು, ಈ ದಶಕದ ಆರಂಭದಲ್ಲಿದ್ದ 48 ಶತಕೋಟಿ ಪೌಂಡ್ ಗಳಿಂದ ದಶಕದ ಕೊನೆಯ ಹೊತ್ತಿಗೆ 100 ಶತಕೋಟಿ ಪೌಂಡ್ ಗಳಿಗೇರಲಿದೆ. ಇದನ್ನು ಮತ್ತು ಶ್ರೀಮಂತರಿಗೆ ತೆರಿಗೆ ವಿನಾಯಿತಿಗಳನ್ನು ಕಾರ್ಮಿಕರು, ಜನತೆ ಪ್ರಶ್ನೆ ಮಾಡಲಾರಂಭಿಸಿದ್ದಾರೆ. ಈ ಕ್ರಮಗಳನ್ನು 'ಆರ್ಥಿಕ ಸಂಕಟ'ಗಳ ಕಾರಣಕ್ಕೆ ಪ್ರಧಾನಿ ಸುನಕ್ ಹಿಂತೆಗೆದುಕೊಳ್ಳುವ ಕ್ರಮವೇನೂ ಕೈಗೊಂಡಿಲ್ಲ.

ರಕ್ಷಣಾ ವೆಚ್ಚವನ್ನು ಇಮ್ಮಡಿಗೊಳಿಸುವಷ್ಟು ಭದ್ರತಾ ಬೆದರಿಕೆ ಯು.ಕೆ. ಗೆ ಇಲ್ಲ. ಯು. ಎಸ್ ಜತೆಗೆ ಜಾಗತಿಕ ವ್ಯೂಹದ ಉದ್ದೇಶಗಳಿಗಾಗಿ ಯು.ಕೆ ಸರಕಾರ, ವಿದೇಶಗಳಲ್ಲಿ ಅನಗತ್ಯ ಮಿಲಿಟರಿ ಮಧ್ಯಪ್ರವೇಶ ಮತ್ತು ದುಸ್ಸಾಹಸಗಳನ್ನು ಮಾಡುತ್ತಿದೆ. ಯು.ಕೆಯ ಹಿತಾಸಕ್ತಿಗಳು ಇಲ್ಲದಾಗಲೂ ಇಂತಹ ಕಾರ್ಯಾಚರಣೆ ಮಾಡುತ್ತಿದೆ. ಉಕ್ರೇನ್ ಯುದ್ಧದಲ್ಲೂ ಅನಗತ್ಯವಾಗಿ ಹೆಚ್ಚಿನ ಮಧ್ಯಪ್ರವೇಶ ಮಾಡಿದೆ. ಬಾಲ್ಟಿಕ್ ಸಮುದ್ರದಲ್ಲಿ ರಶ್ಯನ್ ಗ್ಯಾಸ್ ಪೈಪ್ ಲೈನ್ ಸ್ಫೋಟ ಯು.ಕೆ ಯ ರಾಯಲ್ ನೇವಿಯ ಕೃತ್ಯವೆಂದು ರಶ್ಯನ್ ಅಧ್ಯಕ್ಷ ಪುಟಿನ್ ಆಪಾದಿಸಿದ್ದಾರೆ. ಉಕ್ರೇನ್ ಯುದ್ಧದ ಸಂದರ್ಭದಲ್ಲಿ ರಶ್ಯದ ಮೇಲೆ ಹೊರಿಸಿದ ಆರ್ಥಿಕ ದಿಗ್ಬಂಧನ ಕ್ರಮಗಳೂ ಭಾರೀ ಬೆಲೆ ಏರಿಕೆಗೆ ಕಾರಣವಾಗಿದ್ದು ಮಾತ್ರವಲ್ಲದೆ, ಯು.ಕೆಯ ಆರ್ಥಿಕ ಸಂಕಟಗಳಿಗೆ ಕಾರಣವಾಗಿದೆ, ಎಂಬ ಮಾತು ಕೇಳಿ ಬರುತ್ತಿದೆ. ಆರ್ಥಿಕ ಸಂಕಟಗಳು ಹೆಚ್ಚುತ್ತಿದ್ದಂತೆ ಸರಕಾರದ ವಿದೇಶ ಮತ್ತು ರಕ್ಷಣಾ ನೀತಿ ಹೆಚ್ಚೆಚ್ಚು ಪ್ರಶ್ನಾರ್ಹವಾಗುತ್ತಿವೆ.

ಕಾರ್ಪೊರೆಟ್ ಮಾಧ್ಯಮಗಳು ಸಹ ನಿರೀಕ್ಷಿಸಬಹುದಾದಂತೆ, ಕಾರ್ಮಿಕರ ಮುಷ್ಕರಗಳ ವಿರುದ್ಧ ಪ್ರಚಾರ ಆರಂಭಿಸಿವೆ. ಕಾರ್ಮಿಕರ ವೇತನ ಏರಿಕೆ ಒತ್ತಾಯ ಕಾರ್ಯಸಾಧ್ಯವಲ್ಲ. ಮುಷ್ಕರಗಳು 'ಸಾರ್ವಜನಿಕರಿಗೆ ಅನಾನುಕೂಲ' ಉಂಟು ಮಾಡುತ್ತವೆ. ಇವುಗಳ ವಿರುದ್ಧ ಕಟು ಕ್ರಮಗಳನ್ನು ಕೈಗೊಳ್ಳಬೇಕು ಎನ್ನುತ್ತಿವೆ.

ಆದರೆ ಕಾರ್ಮಿಕರ ಮತ್ತು ಯೂನಿಯನುಗಳ ಧೋರಣೆ ನೋಡಿದರೆ ಸರಕಾರದ, ಮಾಧ್ಯಮಗಳ ಬೆದರಿಕೆಗಾಗಲಿ, ಪ್ರಚಾರಕ್ಕಾಗಲಿ ಸೊಪ್ಪು ಹಾಕುವಂತೆ ಕಾಣುತ್ತಿಲ್ಲ. 1980ರ ದಶಕದಲ್ಲಿ ಥ್ಯಾಚರ್ ಯೂನಿಯನುಗಳನ್ನು ಮಣಿಸಿ ಮುಷ್ಕರಗಳು ಅಪರಾಧಗಳೋ ದುರ್ವರ್ತನೆಗಳೋ ಎಂಬಂತೆ ಮಾಡಿದ್ದ ಪರಿಸ್ಥಿತಿ ತೀವ್ರ ಬದಲಾವಣೆ ಕಂಡು ಬರುತ್ತಿದೆ. ಜನಾಂಗೀಯ, ವಲಸೆಗಾರರ ಬೇದಭಾವ ತಾರತಮ್ಯ ಹುಟ್ಟು ಹಾಕಿ ಕಾರ್ಮಿಕರ ಐಕ್ಯತೆಯನ್ನು ಮುರಿದು, ನವ-ಉದಾರವಾದಿ 'ಮಿತವ್ಯಯ'ದ ಹೆಸರಲ್ಲಿ ಕಲ್ಯಾಣ ಕ್ರಮಗಳಲ್ಲಿ ಕಡಿತ ಮಾಡುವ ಯು.ಕೆ ಸರಕಾರದ ಮತ್ತು ಪಕ್ಷಗಳ ಬಲಪಂಥೀಯ ರಾಜಕಾರಣಕ್ಕೆ ಕಾರ್ಮಿಕರ ಸಂಯೋಜಿತ ಮುಷ್ಕರಗಳ ಸರಣಿ ಸವಾಲು ಹಾಕುವ ಸಾಧ್ಯತೆ ಹೆಚ್ಚಿದೆ.





NEW No. MAG(3)/NPP/205/2021-2022
JANASHAKTHI KANNADA VARA PATRIKE December 19-25, 2022 Price: Rs. 10/- Date of Publication: 16 December 2022 RNI No. KARKAN /2006/17926 Posted on 20-12-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಚರಿತ್ರೆಯಲ್ಲಿ ಮರೆತವರ ಮರೆಯದ ಸಹಾಯಾನದ ಒಡನಾಡಿ ಶಾಂತಾರಾಮ ಮಾಸ್ತರ್

ಯಮುನಾ ಗಾಂವ್ಕರ್

ಚರಿತ್ರೆಯಲ್ಲಿ ಮರೆತವರ ದಾಖಲಿಸಲು ಮರೆಯದ, ಸಹಯಾನದ ಒಡನಾಡಿ ಜೋಯಿಡಾದ ಉಳವಿಯಲ್ಲಿ ನಡೆಯುತ್ತಿರುವ ಉತ್ತರ ಕನ್ನಡ ಜಿಲ್ಲೆಯ 22 ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಶಾಂತಾರಾಮ ನಾಯಕ ಹಿಚಕಡರಿಗೆ ಮನದುಂಬಿ ಅಭಿನಂದನೆಗಳು. ಶಾಂತಾರಾಮ ನಾಯಕ ಮಾಸ್ತರ್‌ರಿಗೂ ನಮ್ಮ ಕುಟುಂಬಕ್ಕೂ ಮತ್ತು ನಾನು ಪ್ರತಿನಿಧಿಸುವ ಚಳುವಳಿಗೂ ಅತ್ಯಂತ ಅವಿನಾಭಾವ ಸಂಬಂಧವಿದೆ. ಜೋಯಿಡಾದಲ್ಲಿ ಮೊದಲಬಾರಿಗೆ ನಡೆದ ಉತ್ತರ ಕನ್ನಡ 12 ನೇ ಜಿಲ್ಲಾ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಡಾ. ಆರ್.ವಿ. ಭಂಡಾರಿಯವರು ಮತ್ತು ಇವರು ನಿಕಟವರ್ತಿಗಳು; ಸಮಾನ ವೈಚಾರಿಕತೆ ಉಳ್ಳವರು. ಒಮ್ಮೆ ಆರ್.ವಿ. ಭಂಡಾರಿಯವರು ತಮ್ಮ ಬರಹಕ್ಕೆ ಪೂರಕ ಸಾಮಗ್ರಿಗಳನ್ನು ಕಲೆಹಾಕಲು ಮತ್ತು ಒಂದು ವಾರ ತಾನು ಹಿಚಕಡ ರ ಮನೆಯಲ್ಲಿದ್ದು ಕಾದಂಬರಿ ಬರೆದುಬರುವೆ ಎಂದು ಮನದಲ್ಲೇ ನಕಾಶೆ ಹಾಡದ್ದರಂತೆ, ಆದರೆ ನಾನು ಅವರಲ್ಲಿ ಹೀಗೆ ಹೇಳಿ ಬಂದೆ "ನೀವು ಅಂಕೋಲೆಯ ಮತ್ತು ಉತ್ತರ ಕನ್ನಡದ ಸ್ವಾತಂತ್ರ್ಯ ಹೋರಾಟದಲ್ಲಿ ಮರೆತು ಹೋದ ಅಧ್ಯಾಯಗಳ ದಾಖಲಿಸಿ ಬೇರೆ ಬರಹಗಳನ್ನೆಲ್ಲ ಕೆಲವು ವರ್ಷ ಮುಂದೆ ಹಾಕಿ' ಎಂದು. ಮೊನ್ನೆ ಶಾಂತಾರಾಮ ನಾಯಕರ ಮನೆಗೆ ಹೋದಾಗ ಇದನ್ನು ನೆನಪಿಸಿ ಗದ್ಗದಿತರಾದರು. ಆ ಒತ್ತಾಸೆಗೆ ಮಣಿದೇ ತಾನು ಚರಿತ್ರೆಯಲ್ಲಿ ಮರೆತವರ ದಾಖಲಿಸಿದೆ ಎಂದು ಭಾವುಕರಾಗಿ ನನ್ನೊಂದಿಗೆ ಹಂಚಿಕೊಂಡರು. ಅನೇಕ ಮಹತ್ವದ ಪುಸ್ತಕಗಳನ್ನು ಬರೆದರೂ ನನಗೆ ಹೆಚ್ಚು ಮಹತ್ವದ್ದೆಂದು ಕಾಣುವುದು 'ಚರಿತ್ರೆಯಲ್ಲಿ ಮರೆತವರ ಕಥೆ, ಸ್ವಾತಂತ್ರ್ಯ ಹೋರಾಟದ ಹೊರಳು ನೋಟ, ಸ್ವಾತಂತ್ರ್ಯ ಹೋರಾಟದಲ್ಲಿ ನಾಡವರು, ಸ್ವಾತಂತ್ರ್ಯ ಹೋರಾಟದಲ್ಲಿ ಅಂಕೋಲಾ, ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು' ಇವುಗಳು.

ಮಾತ್ರವಲ್ಲ ಇವರ ಕುಟುಂಬದ ಆಪ್ತೇಷ್ಟ ಕಿರಿಯ ಸ್ನೇಹಿತ ಅಕಾಲದಲ್ಲಿ ಅಗಲಿದ ನನ್ನ ಬಾಳಸಂಗಾತಿ ವಿಠ್ಠಲ ಭಂಡಾರಿಯವರಿಗೆ ಇವರೊಡನೆ ಸಾಹಿತ್ಯ ಸಾಂಸ್ಕೃತಿಕ ವೈಚಾರಿಕ ಸಂಗಾತಿತ್ವ ಇತ್ತು ಎಂಬುದನ್ನು ವಿಠ್ಠಲ ರ ಪ್ರಕಾಶಕರ ಮಾತಿನ ಸಾರ ಹಂಚಿಕೊಳ್ಳುವ ಮೂಲಕ ನೆನೆಯುತ್ತೇನೆ.

ನಾವು ನಮ್ಮ ಬಂಡಾಯ ಪ್ರಕಾಶನದಿಂದ ಶಾಂತಾರಾಮ ನಾಯಕ ಮಾಸ್ತರರು ಬರೆದ ಮಂಡಕ್ಕಿ ತಿಂದ ಗಂಗೆ (ಕಥಾ ಸಂಕಲನ) ಮತ್ತು ಒಡಲ ಗೀತೆ (ಕವನ ಸಂಕಲನ) ಎರಡು ಪುಸ್ತಕಗಳನ್ನು ಹೊರತಂದಿದ್ದೇವೆ. ಆಗ ಪ್ರಕಾಶಕರ ಮಾತಿನಲ್ಲಿ ಡಾ. ವಿಠ್ಠಲ ಭಂಡಾರಿಯವರು ಶಾಂತಾರಾಮ ನಾಯಕರನ್ನು ಮೆಚ್ಚಿಕೊಂಡು ಬರೆದುದನ್ನು ಉಲ್ಲೇಖಿಸುತ್ತೇನೆ. ಜಿಲ್ಲೆಯ ಸಾಂಸ್ಕೃತಿಕ ಪ್ರಜ್ಞೆಯಾದ ಶಾಂತಾರಾಮ ನಾಯಕ ಹಿಚ್ಕಡ ಅವರ 'ಮಂಡಕ್ಕಿ ತಿಂದ ಗಂಗೆ' ಕಥಾ ಸಂಕಲನವನ್ನು ಬಂಡಾಯ ಪ್ರಕಾಶನದ ಡಾ. ಆರ್.ವಿ. ಭಂಡಾರಿ ನೆನಪಿನ ಪುಸ್ತಕ ಮಾಲೆಯಲ್ಲಿ ಪ್ರಕಟಿಸಿ ಖುಷಿ ಪಟ್ಟಿದ್ದ ಅವರು ಅದೊಂದು ಧನ್ಯತೆಯ ಕ್ಷಣ ಎಂದೂ ತನ್ನ ತಂದೆಯ ಸ್ನೇಹಗಣದವರೆಂದು ಹೆಮ್ಮೆಪಟ್ಟಿದ್ದರು. ತಲೆಮಾರಿನ ಅಂತರವನ್ನು ಮೀರಿ ತೀರಾ ಸಣ್ಣವನಾದ ತನ್ನೊಂದಿಗೂ ವೈಚಾರಿಕ ಮತ್ತು ಭಾವನಾತ್ಮಕ ಸ್ನೇಹವನ್ನು ಉಳಿಸಿಕೊಂಡಿರುವ ಅವರ ಹೃದಯ ಶ್ರೀಮಂತಿಕೆಗೆ ಕೈಜೋಡಿಸಲೇ ಬೇಕು ಎಂದಿದ್ದರು.

ಶಿಕ್ಷಣ, ಸಹಕಾರ, ಸಾಹಿತ್ಯ ಹಾಗೂ ಪ್ರಕಾಶನ ಕ್ಷೇತ್ರಗಳಲ್ಲಿ ತಣ್ಣನೆ ತೊಡಗಿಸಿಕೊಂಡಿರುವ ಶಾಂತಾರಾಮ ನಾಯಕ ಎಂದೂ ಪದವಿಯ ಬೆನ್ನು ಹತ್ತಿದವರಲ್ಲ. ಈ ಹಿಂದೆ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆ ವಹಿಸಿಕೊಳ್ಳುವಂತೆ ಕೇಳಿಕೊಂಡಾಗ ಕೂಡ ನಯವಾಗಿಯೇ ನಿರಾಕರಿಸಿ ಹೊಸ ತಲೆಮಾರಿನವರಿಗೆ ಅವಕಾಶ ಮಾಡಿಕೊಟ್ಟರು. ತಾವು ಕಟ್ಟ ಬಯಸಿದ ಸಮಾಜ ಇನ್ನೂ ರೂಪಿತ ಆಗದಿರುವ ಬಗ್ಗೆ ವಿಷಾದ ತುಂಬಿದ ಅವರ ಶಿಕ್ಷಕ ಮನಸ್ಸು ಈಗಲೂ ಬದಲಾವಣೆ ಬಯಸಿ ನಡೆವ ಚಳುವಳಿಯ ಸಹಯಾನಿಯಾಗುವ ಹುರುಪನ್ನು ಕಾಪಿಟ್ಟಿಕೊಂಡಿದೆ. ಕೆರೆಕೋಣದಲ್ಲಿ ಸಹಯಾನ (ಡಾ. ಆರ್.ವಿ.ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ) ಪ್ರಾರಂಭಿಸುವ ಆಶಯದ ಬೆನ್ನೆಲುಬಾಗಿ ನಿಂತರು ಮಾತ್ರವಲ್ಲ ಸಹಯಾನ ಅಧ್ಯಕ್ಷರಾಗಿ ಕೂಡ ಮಾರ್ಗದರ್ಶನ ಮಾಡುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುವ ಖುಷಿ ತನ್ನದು ಎಂದು ಹಂಚಿಕೊಂಡಿದ್ದರು.

ಶಿಕ್ಷಕರಾಗಿ, ಕವಿಯಾಗಿ, ಸ್ವಾತಂತ್ರ್ಯ ಚಳುವಳಿಯ ಚರಿತ್ರೆಕಾರರಾಗಿ ಮುನ್ನೆಲೆಗೆ ಬಂದ ಶಾಂತಾರಾಮ ನಾಯಕರವರು ಇಷ್ಟೊಂದು ಕಥೆಗಳನ್ನು ಪ್ರಕಟಿಸಿದ್ದು ನನ್ನ ಗಮನಕ್ಕೆ ಬರಲಿಲ್ಲ. ಅವರು ಬರೆದ ಕಥೆಗಳಲ್ಲಿ ಒಟ್ಟು ಹನ್ನೊಂದು ಕಥೆಗಳನ್ನು ಆಯ್ದು ಈ ಸಂಕಲನ 'ಮಂಡಕ್ಕಿ ತಿಂದ ಗಂಗೆ' ನಿಮ್ಮ ನಮ್ಮ ಓದಿಗೆ ಒದಗಿ ಬಂದಿದೆ. ಕಥೆಗಳನ್ನೆಲ್ಲಾ ಓದಿ ಮುಗಿಸುವ ಹೊತ್ತಿಗೆ ಅಂಕೋಲೆಯ ಸಾಂಸ್ಕೃತಿಕ ವೈವಿಧ್ಯತೆಯೂ ಮತ್ತು ಇಂದು ಅದು ತಲುಪುತ್ತಿರುವ ದುರಂತ ಚಿತ್ರಣವೂ ಏಕಕಾಲದಲ್ಲಿ ಮೂಡಿದರೆ ಆಶ್ಚರ್ಯವಿಲ್ಲ. ಶಾಂತಾರಾಮ ನಾಯಕರು ಅಂಕೋಲೆಯ ನೆಲದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಮತ್ತು ದಿನಕರ ದೇಸಾಯಿಯವರ ನೇತೃತ್ವದ ರೈತ ಚಳುವಳಿಯನ್ನು ಬಹಳ ಹತ್ತಿರದಿಂದ ನೋಡಿದವರು ಮತ್ತು ಸ್ವತಃ ಪಾಲ್ಗೊಂಡವರು. ಸ್ವಾತಂತ್ರ್ಯ ಚಳುವಳಿ ಮತ್ತು ರೈತ ಚಳುವಳಿಗಳ ಆಶಯಗಳೆರಡೂ ಕತೆಯಲ್ಲಿ ಅಂತರ್ ವಾಹಿನಿಯಾಗಿ ಹರಿಯುತ್ತದೆ. ಅಥವಾ ಇಡೀ ಕತೆಯ ವೈಚಾರಿಕತೆಯನ್ನು ರೂಪಿಸಿದ್ದೇ ಈ ಚಳುವಳಿಗಳು ಎನ್ನುವುದೇ ಹೆಚ್ಚು ಸೂಕ್ತ ಅನ್ನಿಸುತ್ತದೆ.

ಆದ್ದರಿಂದಲೇ ಸಾಮಾನ್ಯ ಜನರನ್ನು ಹಣ ಮತ್ತು ಅಧಿಕಾರ ಬಲದಿಂದ ವಂಚಿಸಿದರೆ (ಬಾಳೆಕೊನೆ ಮತ್ತು ಚಿಗರೆ ಕೋಡು)



ಹೆಣ್ಣನ್ನು ಅವಳ ಶೀಲದ ಹೆಸರಿನಲ್ಲಿ ಅವಹೇಳನ ಮಾಡಿದರೆ (ಕತೆಯಾದಳು ಗಂಗೆ) ಹಣಬಲ, ಸ್ವಾರ್ಥ ಮತ್ತು ಜಾತಿಯ ಅಹಂ ನಿಂದ ಸಮಾಜಬಾಹಿರ ಕೆಲಸವನ್ನು ಮಾಡಿದರೆ (ಪ್ರಾಯಶ್ಚಿತ) ಲೇಖಕರಿಗೆ ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಅದರ ವಿರುದ್ಧ ಒಂದು ಸಣ್ಣ ದನಿ ಎತ್ತುತ್ತಾರೆ. ಇದರಾಚೆಯ ಒಂದು ಸ್ವಚ್ಛ ಸಮಾಜದ ಕನಸು ಕಾಣುವವರ ಮನಸ್ಸು ನಮಗೆ ಈ ಕಾಲದ ಜರೂರಾಗಿದೆ. ಮನೆಯಲ್ಲಿ ಸಾಕಿದ ರಾಣಿ ಬೆಕ್ಕಿನ ಮರಿಯನ್ನು ದೂರದಲ್ಲಿ ಬಿಟ್ಟು ಬಂದ 'ರಾಣಿ ಮತ್ತು ಮರಿ ಬೆಕ್ಕಿನ' ನಿರೂಪಕ "ಪಾಪ ಹಾಲು ತುಂಬಿದ ನೋವನ್ನು ಸಹಿಸಲಾರದೇ ಹಾಲು ತುಂಬಿದ ಮೊಲೆಗಳ ಹಾಲನ್ನು ಕುಡಿಯಲು ಮರಿಗಳಿಲ್ಲದೇ ಆ ನೋವಿನಿಂದಲೂ ಬೆಕ್ಕು ತನ್ನ ಮರಿಗಳಿಗಾಗಿ ರೋದಿಸುತ್ತಿತ್ತು.... ರಾತ್ರಿ ಇಡೀ ಬೆಕ್ಕಿನ ಮರಿಗಳ ಆಕ್ರಂದನದ ನೆನಪು. ರಾತ್ರಿ ಬಾಗಿಲು ಹಾಕಿ ಮಲಗಿದರೂ ಕಾಲು ಕನಸಿನಲ್ಲಿ ತಾಯಿ ಬೆಕ್ಕು ನನ್ನ ಮೇಲೆ ಆಕ್ರಮಣ ಮಾಡಿ ತನ್ನ ಗಂಟಲನ್ನು ಕಚ್ಚಿ ಹಿಡಿದಂತೆ ಭಾಸವಾಗಿ ಚೀರಿ ಬಿಟ್ಟೆ!" ಎಂದು ಪಡುವ ತಳಮಳ, ನೋವು ಅಪರಾಧಿ ಪ್ರಜ್ಞೆ ಇಂದು ಜಾತಿ ಧರ್ಮ ಲಿಂಗ ಆಧಾರದಲ್ಲಿ ಮನುಷ್ಯನನ್ನು ಕೊಲ್ಲುವ ಹಿಂದಿಸುವ ಜನರಿಗೆ ಬರುವುದು ಯಾವಾಗ? ಎನ್ನುವ ಪ್ರಶ್ನೆ ಸಂಕಲನದುದ್ದಕ್ಕೂ ಹರಿಯುತ್ತದೆ ಮತ್ತು ಕತೆಯ ವ್ಯಾಪ್ತಿಯನ್ನು ಅಂಕೋಲೆಯೆಂಬ ಸಾಂಸ್ಕೃತಿಕ ಮೇರೆ ಮೀರಿ ಈ ನಾಡಿನ ವ್ಯಥೆಯ ಚಿತ್ರವಾಗಿ ನಿಂತುಬಿಡುತ್ತದೆ.

ಆಡುಭಾಷೆಯ ಯಥೇಚ್ಛ ಬಳಕೆ, ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡವರ ಸಣ್ಣಸಣ್ಣ ಕಥನ, ತಲೆಮಾರುಗಳ ನಡುವೆ ಬದಲಾದ ಸಾಮಾಜಿಕ ಸಾಂಸ್ಕೃತಿ ಪಲ್ಲಟಗಳ ಚಿತ್ರ, ಬದಲಾವಣೆಯ ಸಾಂಕೇತಿಕ ರೂಪ, ಸರಳತೆಯ ನಿರೂಪಣೆಗಳೆಲ್ಲವೂ ಶಾಂತಾರಾಮ ನಾಯಕದ ಕಥಾಜಗತ್ತಿನ ಅಪರೂಪದ ಕಥನವಾಗಿದೆ ಎಂದು ವಿಠ್ಠಲ ಭಂಡಾರಿ ಅಂದು ಬರೆದಿದ್ದರು.

ಆದರೆ, ಈ ಬಾರಿ ಸಮ್ಮೇಳನ ಸಬಾಂಗಣಕ್ಕೆ ಹಾದುಹೋಗುವಾಗ ಹಿರಿಯರಾದ ನಾಸು ಭರತನಹಳ್ಳಿ, ವಿಜೆ ನಾಯಕ, ಪ್ರಭಾಕರ ರಾಣೆ, ಮಾದೇವ ವೆಳಿಪ್, ಜೊತೆಗೆ ವಿಠ್ಠಲ ಭಂಡಾರಿ ನೆನಪಿನ ದ್ವಾರಗಳ ಮೂಲಕ ಸಾಗಿ ಶರಣ ಚೆನ್ನಬಸವಣ್ಣ ವೇದಿಕೆಗೆ ತೆರಳಲಿರುವುದು ವೇದನೆಯ ಸಂಗತಿಯೂ ಜೊತೆಗೆ ಕಾಲದ ವಿಪರ್ಯಾಸವೂ ಆಗಿದೆ ಆದರೆ ಇವರೆಲ್ಲರ ಮಹದಾಸೆಗಳ ಮುಂದುವರಿಸುವ ಪಣತೊಡುವ ಸಂದರ್ಭವಾಗಿಯೂ ಸ್ವೀಕರಿಸುವುದು ವೇದನೆ ನೋವು ಮೀರುವ ಈ ಕಾಲದ ಅನಿವಾರ್ಯ ಜವಾಬ್ದಾರಿಯುತ ಸಂಗತಿ ಕೂಡ. ಮಾತ್ರವಲ್ಲ ಇಲ್ಲಿ ಶಾಂತಾರಾಮ ಮಾಸ್ತರರ ಪ್ರೀತಿಯ ವಿಠ್ಠಲ ರವರು ಜೋಯಿಡಾದ ಸಮಸ್ಯೆಗಳ ವಿರುದ್ಧ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿದ ಹತ್ತಾರು ಹೋರಾಟ ಸಂಘಟಿಸುವಲ್ಲಿ, ಕಾನೂನು ಅರಿವು ಮೂಡಿಸಲು ಅನೇಕ ಕಾರ್ಯಕ್ರಮ ಹಾಕಿಕೊಂಡುದು, ಕುಣಬಿ ಗೌಳಿ ಸಾಂವಿಧಾನಿಕ ಬುಡಕಟ್ಟು ಮಾನ್ಯತೆಗೆ, ಮರೆಯಲ್ಲೇ ಇರುವ ಬುಡಕಟ್ಟು ಕಲಾವಿದರ ಗುರ್ತಿಸಲು, ಗಡಿನಾಡ ಉತ್ಸವ ನಡೆಸುವುದಕ್ಕಾಗಿ ಹೀಗೆ ವಿಠ್ಠಲ ಅವರಿಗೆ ಜೋಯಿಡಾ ಸಂಬಂಧ ಹತ್ತಿರದ್ದು. ಅದಕ್ಕೆಂದೇ ಜೋಯಿಡಾ ಕಾಡೊಳಗಿನ ಒಡಲು ಪುಸ್ತಕ ರೂಪುಗೊಂಡಿರುವುದು.

ನಾವೆಲ್ಲ ಮೊದಲು ಕವಿ ಶಾಂತಾರಾಮ ಮಾಸ್ತರರು ಎನ್ನುತ್ತಿದ್ದೆವು. ಕಾಡ ಹೆಣ್ಣು, ಆತಂಕ, ದಾರಿ ಮಾಡಿಕೊಡಿ ಎಲ್ಲಾ ಓದಿದ್ದೆ. ನಂತರ ಅವರು ಬರೆದ ಅನುರಾಗ, ನಿನಾದ, ಸಂಭ್ರಮ, ಒಡನಾಟ, ಹುಡುಕಾಟ ಹಾಗೂ ಒಡಲಗೀತ ಬಿಡುಗಡೆಗೆ ಕೆಲವು ಸಂದರ್ಭದಲ್ಲಿ ನಾನು ಸಭಿಕರಲ್ಲಿ ಒಬ್ಬಳಾಗಿದ್ದೆ ಅತವಾ ಪುಸ್ತಕ ಮಾರಾಟಕ್ಕೆ ಜೊತೆಯಾಗಿದ್ದೆ. ಕಾಲೇಜು ದಿನಗಳಲ್ಲಿ ಅಂಕೋಲೆಯ ಅನೇಕ ಸಾಹಿತ್ಯದ ಕಾರ್ಯಕ್ರಮಗಳಲ್ಲಿ ಗಿರಿ ಪಿಕಳೆ, ವಿ.ಜೆ. ನಾಯಕ, ಆರ್.ವಿ. ಭಂಡಾರಿ, ಹುದ್ದಾರರು, ಅವ್ರೆಂಬಳ ಆನಂದ, ಜಿ.ಎಚ್. ನಾಯಕರು, ವಿಷ್ಣು ನಾಯ್ಕ, ಶಾಂತಾರಾಮ ಮಾಸ್ತರ್ ಇವರನ್ನೆಲ್ಲ ನೋಡುತ್ತಿದ್ದೆ, ಭಾಷಣ ಕೇಳುತ್ತಿದ್ದೆ. ನಂತರ ಕಳೆದ ಇಪ್ಪತ್ತು ವರ್ಷಗಳಲ್ಲಿ ಅವರ ಕುಟುಂಬದ ಭಾಗವಾಗಿದ್ದೇನೆ ಎಂದು ಖುಷಿಯಿಂದ ಹೇಳುವೆ. ಸಮ್ಮೇಳನಾಧ್ಯಕ್ಷರಾದಾಗ ಕೇವಲ ಅಭಿನಂದಿಸಿದರೆ ಸಾಲದು ಏನಾದರೂ ಹೊಸದು ಮಾಡೋಣ ಎಂದು ಸಂಘಟನೆಯ ಸ್ನೇಹಿತರೆಲ್ಲ ಅಂದುಕೊಂಡೆವು. ಜೋಯಿಡಾದಲ್ಲಿ ನಡೆದ 12 ನೇ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದ ಡಾ. ಆರ್.ವಿ ಯವರು ಮತ್ತು ಅದೇ ಜೋಯಿಡಾ ತಾಲೂಕಿನಲ್ಲಿ ಎರಡನೇ ಬಾರಿ ನಡೆಯುತ್ತಿರುವ ಸಮ್ಮೇಳನದ ಸರ್ವಾಧ್ಯಕ್ಷರಾದ ಪ್ರೀತಿಯ ಶಾಂತಾರಾಮ ಮಾಸ್ತರರು ಈ ನೆಲದ ಚರಿತ್ರೆಯ ಎರಡು ಪ್ರಧಾನ ಅಧ್ಯಾಯಗಳು; ಅನೇಕ ಸಾಮ್ಯತೆಗಳಿವೆ. ಈ ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಕಣ್ಣೋಟ ಇದ್ದವರಾಗಿದ್ದಾರೆ. ನಾಡು ನುಡಿ ಮತ್ತು ಜಿಲ್ಲೆಯ ಅನನ್ಯತೆಯ ಪ್ರಶ್ನೆಗಳು ಬಂದಾಗೆಲ್ಲ ತಮ್ಮ ಸಂಗಾತಿಗಳ ಜೊತೆಗೂಡಿ ಧ್ವನಿ ಎತ್ತಿದ್ದಾರೆ. ಬೀದಿಬದಿಯಲ್ಲಿ ನಡೆಯುತ್ತಿರುವ ಅನೇಕ ಹೋರಾಟಗಳಿಗೆ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಮಾಡಿದ್ದಾರೆ. ಸಹಾಯ ಮಾಡಿದ್ದಾರೆ.

ಕಲ್ಯಾಣದ ಕಡೆಯಿಂದ ಸಂಕಷ್ಟದ ದಾರಿ ಕ್ರಮಿಸಿಯೂ ಉಳವಿ ತನಕ ಬಂದು ತನ್ನ ನೆಲೆ ನಾಡಾಗಿಸಿಕೊಂಡ ಚೆನ್ನಬಸವಣ್ಣ ತಲೆಮಾರಿನಿಂದ ತಲೆಮಾರಿಗೆ ವಚನಸಾಹಿತ್ಯ ದಾಟಿಸಲು ಶ್ರಮಿಸಿದ ಹಾಗೆ ಶಾಂತಾರಾಮ ಮಾಸ್ತರರು ಚರಿತ್ರೆಯಲ್ಲಿ ಮರೆತವರನ್ನು ನಮ್ಮೆದುರು ತಂದುಕೊಟ್ಟಿದ್ದಾರೆ ಸಾಹಿತ್ಯ ಕೃತಿಗಳ ಮೂಲಕ ಅವರನ್ನೆಲ್ಲ ಜೀವಂತವಾಗಿರಿಸಿದ ಕಾರಣಕ್ಕೆ ಪ್ರಮುಖರಾಗುತ್ತಾರೆ. ಈ ಸರ್ವಾಧ್ಯಕ್ಷ ಸ್ಥಾನ ಖಂಡಿತ ಹೆಮ್ಮೆ. ಪ್ರಾಕೃತಿಕ ಸಂಪದ್ಭರಿತ ಜೋಯಿಡಾದ ಜನತೆ ಕೂಡ ಈ ದೇಶಕ್ಕೆ ಬೆಳಕು ಕೊಟ್ಟು ತಾವು ಕತ್ತಲನ್ನು ಅನುಭವಿಸುತ್ತಿರುವರು. ಅವರದ್ದೇ ಆದ ಒಡಲ ಗೀತೆಯನ್ನೂ ನೀವು ಆಳುವವರೆದುರು ತೆರೆದುಕೊಟ್ಟು ಬರುತ್ತೀರೆಂಬ ಅಚಲ ನಂಬಿಕೆ ನಮ್ಮದು, ಮತ್ತೊಮ್ಮೆ ಅಭಿನಂದನೆಗಳು.

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**